ಮಾನವಿಕ ಕರ್ನಾಟಕ

ಸಂಪುಟ ೩೩

ಸಂಚಿಕೆ ೨

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು ೫೭೦ ೦೦೬
೨೦೦೩

ಮಾನವಿಕ ಕರ್ಣಾಟಕ

ಸಂಪುಟ ೩೩, ಸಂಚಿಕೆ ೨

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು

೨೦೦೩

MANAVIKA KARNATAKA : A Kannada Quarterly of the University of Mysore, Volume 33, Number 2, Edited by Prof. Ambalike Hiriyanna and Dr. R. Ramakrishna, Published by the Director, Prasaranga, University of Mysore, Manasagangotri, Mysore - 570 006

ಪ್ರಧಾನ ಸಂಪಾದಕರು

ಪ್ರೊ. ಲಕ್ಷ್ಮೀನಾರಾಯಣ ಅರೋರಾ

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

ಸಂಪಾದಕರು

ಪ್ರೊ. ಅಂಬಳಿಕೆ ಹಿರಿಯಣ್ಣ

ಡಾ. ಆರ್. ರಾಮಕೃಷ್ಣ

ಮುದ್ರಕರು

ನಿರ್ದೇಶಕರು

ಮೈ.ವಿ.ವಿ. ಮುದ್ರಣಾಲಯ, ಮೈಸೂರು ೫೭೦ ೦೦೬

ಪ್ರಕಾಶಕರ ಮಾತು

'ಮಾನವಿಕ ಕರ್ಣಾಟಕ' ದ ೩೩ನೇ ಸಂಪುಟದ ಎರಡನೆಯ ಸಂಚಿಕೆ ಇದೀಗ ಓದುಗರ ಕೈ ಸೇರುತ್ತಿದೆ. ಮಾನವಿಕ ವಿಭಾಗದ ಕೆಲವಾರು ಕ್ಷೇತ್ರಗಳಿಗೆ ಸಂಬಂಧಪಟ್ಟ ೧೨ ಲೇಖನಗಳು ಈ ಹೊತ್ತಗೆಯಲ್ಲಿ ಅಡಕವಾಗಿವೆ. ಸಂಶೋಧನಾತ್ಮಕ ದೃಷ್ಟಿಯಿಂದ ಲೇಖನಗಳು ಜಿಜ್ಞಾಸು ಓದುಗರ ಕುತೂಹಲವನ್ನು ತಣಿಸುವಲ್ಲಿ ಸಾಕಷ್ಟು ನೆರವಾಗುತ್ತವೆ.

ವಿಶ್ವವಿದ್ಯಾನಿಲಯದಲ್ಲಿ ಮಾತ್ರವಲ್ಲದೆ ಹೊರಗಡೆಯ ಬಗೆಬಗೆಯ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿರುವ ವಿದ್ವಾಂಸರಿಗೆ ಮತ್ತು ಸಂಶೋಧಕರಿಗೆ 'ಮಾನವಿಕ ಕರ್ಣಾಟಕ' ಒಂದು ಮಹತ್ವದ ವೇದಿಕೆಯನ್ನು ಕಲ್ಪಿಸುವಲ್ಲಿ ಸಮರ್ಥವಾಗಿದೆ. ಈ ಸದಾವಕಾಶವನ್ನು ಸಮರ್ಥವಾಗಿ ಓದುಗ ಬಂಧುಗಳು ಬಳಸಿಕೊಳ್ಳುತ್ತಾರೆಂದು ನಿರೀಕ್ಷಿಸಲಾಗಿದೆ.

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರಾದ ಪ್ರೊ. ಎಸ್. ಎನ್. ಹೆಗ್ಡೆಯವರು ಹಾಗೂ ಕುಲಸಚಿವರಾದ ಶ್ರೀ ಎನ್. ಡಿ. ತಿವಾರಿಯವರು ಈ ಪತ್ರಿಕೆಗಳನ್ನು ಹೊರತರುವಲ್ಲಿ ವಿಶೇಷ ಆಸ್ಥೆ ವಹಿಸಿದ್ದಾರೆ. ಅವರಿಗೂ, ಈ ಹೊತ್ತಗೆಯನ್ನು ಸಂಪಾದಿಸಿಕೊಟ್ಟಿರುವ ಪ್ರೊ. ಅಂಬಳಿಕೆ ಹಿರಿಯಣ್ಣ ಮತ್ತು ಡಾ. ಆರ್. ರಾಮಕೃಷ್ಣ ಅವರಿಗೂ, ಲೇಖನಗಳನ್ನು ಬರೆದುಕೊಟ್ಟು, ಸಂಶೋಧನ ಕ್ಷೇತ್ರದಲ್ಲಿ ತಮ್ಮನ್ನು ವಿಶೇಷವಾಗಿ ತೊಡಗಿಸಿಕೊಂಡಿರುವ ಲೇಖಕ ಬಂಧುಗಳಿಗೂ ಈ ಹೊತ್ತಗೆಯ ಡಿ.ಟಿ.ಪಿ. ಕೆಲಸವನ್ನು ನಿರ್ವಹಿಸಿಕೊಟ್ಟಿರುವ 'ಎಚ್. ಎಸ್. ಕಂಪ್ಯೂಟರ್ಸ್' ನ ಶ್ರೀಮತಿ ಮೀನಾ ಸುರೇಶ್ ಅವರಿಗೂ, ಅಚ್ಚಿಸಿಕೊಟ್ಟಿರುವ ವಿಶ್ವವಿದ್ಯಾನಿಲಯ ಮುದ್ರಣಾಲಯದ ನಿರ್ದೇಶಕರಿಗೂ, ಸಿಬ್ಬಂದಿ ವರ್ಗದವರಿಗೂ, ಎಂದಿನಂತೆ ಈ ಕೆಲಸ ಕಾರ್ಯಗಳಲ್ಲಿ ಸಹಕರಿಸುತ್ತಿರುವ ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಬಾ. ವೇ. ಶ್ರೀಧರ ಮತ್ತು ಇತರ ಸಹೋದ್ಯೋಗಿಗಳಿಗೂ ನನ್ನ ಹಾರ್ದಿಕ ವಂದನೆಗಳು.

ಪ್ರೊ. ಲಕ್ಷ್ಮೀನಾರಾಯಣ ಅರೋರಾ
ಪ್ರಧಾನ ಸಂಪಾದಕರು

ಸಂಪಾದಕೀಯ

ಪ್ರಕೃತ ಸಂಚಿಕೆ ಒಟ್ಟು ಹನ್ನೆರಡು ಅಭ್ಯಾಸಪೂರ್ಣ ಬರಹಗಳನ್ನು ಒಳಗೊಂಡಿದ್ದು ಅವು ಮಾನವಿಕ ಹಾಗೂ ಸಾಮಾಜಿಕ ವಿಜ್ಞಾನ ಕ್ಷೇತ್ರಗಳಿಗೆ ನೇರವಾಗಿ ಸಂಬಂಧಿಸಿವೆ. ವಿಷಯ ನಿರೂಪಣೆ ಮತ್ತು ಮಂಡನೆಯ ದೃಷ್ಟಿಯಿಂದ ಶಿಕ್ಷಣ, ಭಾಷೆ, ಕಲೆ, ಇತಿಹಾಸ, ವ್ಯಕ್ತಿಚಿತ್ರ - ಈ ಮುಂತಾದವುಗಳಿಗೆ ಸಂಬಂಧಿಸಿದ ಬರಹಗಳು ಇಲ್ಲಿ ವಿಶೇಷವಾಗಿ ನಮ್ಮ ಗಮನ ಸೆಳೆದುಕೊಳ್ಳುತ್ತವೆ.

'ಶಿಕ್ಷಕ ಮತ್ತು ಸಮಾಜ' ಎಂಬ ಬಿ.ವಿ. ವಸಂತಕುಮಾರ್ ಅವರ ಲೇಖನ ಇತ್ತೀಚಿನ ವಿದ್ಯಮಾನಗಳ ಹಿನ್ನೆಲೆಯಲ್ಲಿ ಶಿಕ್ಷಣ ಮತ್ತು ಶಿಕ್ಷಕನ ಮೇಲೆ ಆರೋಪಿತವಾಗಿರುವ ಕೆಲವು ಗುರುತರವಾದ ಆರೋಪಗಳ ಬಗೆಗೆ ಪ್ರಸ್ತಾಪ ನಡೆಸುತ್ತದೆ. ಶಿಕ್ಷಕ ತನ್ನ ಮೇಲಿನ ಎಲ್ಲ ಆಪಾದನೆಗಳನ್ನು ಕುರಿತು ಆತ್ಮಾವಲೋಕನದೊಡನೆ ಇಡೀ ಶಿಕ್ಷಣ ವ್ಯವಸ್ಥೆಯ ಸಮಗ್ರ ಬದಲಾವಣೆಗೆ, ತುರ್ತು ಚಿಕಿತ್ಸೆಗೆ, ಶಸ್ತ್ರಚಿಕಿತ್ಸೆಗೆ ಮುಂದಾಗಬೇಕು ಎಂದು ಅಭಿಪ್ರಾಯಪಡಲಾಗಿದೆ.

ಎಚ್. ಜಯಕುಮಾರ್ ಮತ್ತು ಜಿ. ಶಿವಪ್ಪ ಅವರು ಕೂಡಿ ಸಿದ್ಧಪಡಿಸಿರುವ 'ಉನ್ನತ ಶಿಕ್ಷಣ : ಕೆಲವು ಸಲಹೆ ಸೂಚನೆಗಳು' ಬರಹ ಉದ್ಯೋಗಾರ್ಥಿಗಳು ಬಯಸುವ ಶಿಕ್ಷಣವನ್ನು ನೀಡುವ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಜರೂರನ್ನು ತಿಳಿಸಿ ಕೊಡುವುದರೊಂದಿಗೆ ಉದ್ಯೋಗಾರ್ಥಿಗಳು ವರ್ತಮಾನದ ಮಾರುಕಟ್ಟೆಯ ಆವಶ್ಯಕತೆ ಗಳಿಗನುಗುಣವಾಗಿ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಸಾಧ್ಯವಾಗುವಂಥ ಶಿಕ್ಷಣ ಉನ್ನತ ಶಿಕ್ಷಣದ ಧ್ಯೇಯವಾಗಬೇಕೆಂದು ಪ್ರತಿಪಾದಿಸಲಾಗಿದೆ.

'ಈಸೂರು ದುರಂತ : ಒಂದು ಮರೆಯಲಾಗದ ಐತಿಹಾಸಿಕ ಘಟನೆ' ಎಂಬ ಕೆ. ಎಂ. ಮಹದೇವಸ್ವಾಮಿ ಅವರ ಲೇಖನದಲ್ಲಿ ಈಸೂರು ದುರಂತದ ಬಗೆಗೆ ಗಮನ ಸೆಳೆಯುವ ಪ್ರಯತ್ನ ಎದ್ದು ಕಾಣುತ್ತದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಹಲವಾರು ಘಟನೆಗಳು ಪ್ರಮುಖ ಪಾತ್ರ ವಹಿಸಿವೆ. ಆ ಪೈಕಿ ಪ್ರಮುಖ ವಾದುದು ಈಸೂರು ದುರಂತ ಎಂದು ಲೇಖಕರು ಅದರ ಮಹತ್ವವನ್ನು ಗುರುತಿಸಿದ್ದಾರೆ. ಮೈಸೂರಿನ ಸ್ವಾತಂತ್ರ್ಯ ಚಳವಳಿಯ ಇತಿಹಾಸದಲ್ಲಿ ಅದು ಹೇಗೆ ಮರೆಯಲಾಗದ ಐತಿಹಾಸಿಕ ಘಟನೆಯಾಗಿ ಉಳಿದಿದೆ ಎಂಬುದನ್ನು ರೋಚಕವಾಗಿ ಇಲ್ಲಿ ನಿರೂಪಿಸಲಾಗಿದೆ.

ಸಮಾಜವಿಜ್ಞಾನ ನಿಕಾಯಕ್ಕೆ ಸೇರುವ ಎಲ್ಲ ಜ್ಞಾನಕ್ಷೇತ್ರಗಳು ಕ್ಷೇತ್ರಕಾರ್ಯಾಧಾರಿತ ಅಧ್ಯಯನಗಳಾಗಿವೆ. ಭಾಷಾವಿಜ್ಞಾನ ಕ್ಷೇತ್ರದಲ್ಲೂ ಕ್ಷೇತ್ರಕಾರ್ಯದ ಪಾತ್ರ ಮಹತ್ತರ ವಾದುದು. ಬಿ. ಕೆ. ರವೀಂದ್ರನಾಥ್ 'ಭಾಷಾವೈಜ್ಞಾನಿಕ ಕ್ಷೇತ್ರಕಾರ್ಯದಲ್ಲಿ ನಿರೂಪಕರ ಪಾತ್ರ' ಎಂಬ ಬರಹದಲ್ಲಿ ಭಾಷಿಕ ಸಂಬಂಧವಾದ ಸಾಮಗ್ರಿಯನ್ನು ಒದಗಿಸುವ

ನಿರೂಪಕರ ಅರ್ಹತೆ ಮತ್ತು ಪರಿಮಿತಿಗಳನ್ನು ಕೂಲಂಕಷವಾಗಿ ಪರಿಶೀಲಿಸುತ್ತಾರೆ. ಈ ಜ್ಞಾನ ಕ್ಷೇತ್ರದಲ್ಲಿ ಮಾಹಿತಿ ಒದಗಿಸುವ ನಿರೂಪಕ ಪ್ರಬುದ್ಧನಾಗಿರಬೇಕಾಗುತ್ತದೆ ಎಂಬ ಅಂಶವನ್ನು ಒತ್ತಿ ಹೇಳಿದ್ದಾರೆ.

ಎಚ್. ಎಸ್. ನಾಗಭೂಷಣಯ್ಯ ಅವರ 'ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಹಿರಿಯ ನಾಯಕರ ಪಾತ್ರ' ಎಂಬ ಲೇಖನ ದೇಶ ಮತ್ತು ಜನತೆಯನ್ನು ಯಾವ ಮಾರ್ಗದಲ್ಲಿ ಮುನ್ನಡೆಸಿದರೆ ರಾಷ್ಟ್ರ ಅಭಿವೃದ್ಧಿ ಹೊಂದಲು ಸಾಧ್ಯ ಎಂಬುದನ್ನು ಸರಳವಾಗಿ ವಿವರಿಸುವ ಪ್ರಯತ್ನ ಮಾಡುತ್ತದೆ. ಮುಖ್ಯವಾಗಿ ಶೈಶವಾವಸ್ಥೆಯಿಂದ ಉನ್ನತ ಸಲಹೆ ಮಾರ್ಗದರ್ಶನದಲ್ಲಿ ಬೆಳೆದು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ರಾಷ್ಟ್ರದ ಅಭಿವೃದ್ಧಿಗೆ ನೆರವಾಗಲು ಅಗತ್ಯವಾದ ಪರಿಸರವನ್ನು ನಿರ್ಮಾಣ ಮಾಡಿಕೊಳ್ಳುವ ಔಚಿತ್ಯ ಇದೆ ಎಂದು ಇಲ್ಲಿ ಪ್ರತಿಪಾದಿಸಲಾಗಿದೆ.

ಬಿ. ಕೆ. ಸುವರ್ಣಾದೇವಿ ಅವರ 'ಕನ್ನಡ ಮತ್ತು ಹಿಂದಿ ಭಾಷೆಗಳ ಲಿಂಗ ವ್ಯವಸ್ಥೆ: ಒಂದು ವೈದೃಶ್ಯಾತ್ಮಕ ವಿಶ್ಲೇಷಣೆ' ಬರಹ ಭಾಷಿಕ ಅಧ್ಯಯನದಲ್ಲಿ ವಿಶೇಷ ಆಸಕ್ತಿ ಇರುವ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆ. ಇಲ್ಲಿ ಕನ್ನಡ ಮತ್ತು ಹಿಂದಿ ಭಾಷೆಗಳ ನಾಮಪದಗಳಲ್ಲಿ ಕಂಡುಬರುವ ಲಿಂಗ ವ್ಯವಸ್ಥೆಯ ಸಮಸ್ಯೆಗಳನ್ನು ವಿವರಿಸಲಾಗಿದೆ. ಆ ಮೂಲಕ ಕನ್ನಡ ಮತ್ತು ಹಿಂದೀಭಾಷೆಗಳ ಲಿಂಗ ವ್ಯವಸ್ಥೆಯ ಬಗೆಗೆ ಒಳ್ಳೆಯ ಅರಿವನ್ನು ಮೂಡಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ.

ಎಂ. ರಾಮಚಂದ್ರ ಅವರ 'ಬಸವಣ್ಣನವರ ಸಾಧನೆ, ಸಿದ್ಧಿ ಮತ್ತು ವ್ಯಕ್ತಿತ್ವ' ಲೇಖನದಲ್ಲಿ ಬಸವಣ್ಣನವರ ವ್ಯಕ್ತಿತ್ವ, ಸಿದ್ಧಿಸಾಧನೆಗಳನ್ನು ಆ ಕಾಲಘಟ್ಟದ ಅವರ ಹೋರಾಟಕ್ಕೆ ಹಿನ್ನೆಲೆಯಾಗಿದ್ದ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಸನ್ನಿವೇಶಗಳ ಹಿನ್ನೆಲೆಯಲ್ಲಿ ಕಟ್ಟಿಕೊಡುವ ಪ್ರಯತ್ನವಿದೆ.

ಕನ್ನಡದಲ್ಲಿ ಜಾನಪದ ಅಧ್ಯಯನ ನಡೆಯಲು ಕಾರಣರಾದ ಹಿರಿಯರ ಸಾಲಿನಲ್ಲಿ ಸಿಪಿಕೆ ಅವರೂ ಒಬ್ಬರು. 'ಜಾನಪದ ತಜ್ಞರಾಗಿ ಸಿಪಿಕೆ' ಎಂಬ ಬರಹದಲ್ಲಿ ಜಿ. ಆರ್. ತಿಪ್ಪೆಸ್ವಾಮಿ ಅವರು ಸಿಪಿಕೆ ಅವರ ಜಾನಪದ ಕೊಡುಗೆಯನ್ನು ಸಮೀಕ್ಷಿಸುತ್ತಾ "ಜಾನಪದ ಪ್ರತಿಭೆ" ಮತ್ತು "ಜಾನಪದ ಸರಸ್ವತಿ" ಎಂಬ ಎರಡು ಅಪೂರ್ವ ಕೃತಿಗಳ ಸಾರವನ್ನು ನಿರೂಪಿಸಿ ಸಿಪಿಕೆ ಅವರು ಆ ಕೃತಿಗಳ ಮೂಲಕ ಜನಪದ ಗೀತೆಗಳ ಶಕ್ತಿ ಮತ್ತು ಭಾವ ಸಂಪತ್ತನ್ನು ಹಿಡಿದಿರುವುದನ್ನೂ ಜಾನಪದ ಪರಂಪರೆಯ ಹಿನ್ನೆಲೆಯಲ್ಲಿ ಅವುಗಳ ಮೌಲ್ಯಮಾಪನ ನಡೆಸಿರುವುದನ್ನೂ ಗುರುತಿಸಿದ್ದಾರೆ. ಜನಪದ ಸಾಹಿತ್ಯವನ್ನು ಶುದ್ಧ ಸಾಹಿತ್ಯಿಕ ನೆಲೆಯಲ್ಲಿ ನೋಡುತ್ತಿದ್ದ ಆ ದಿನಗಳಲ್ಲಿ ಜನಪದ ಸಾಹಿತ್ಯದ ಸಾಹಿತ್ಯಿಕ ಮೌಲ್ಯವನ್ನು ಶೋಧಿಸುವಲ್ಲಿ ಸಿಪಿಕೆ ಅವರ ಪಾತ್ರ ಮಹತ್ವದ್ದು. ಆದುದರಿಂದಲೇ ಅವರ ಜಾನಪದ ವ್ಯಾಖ್ಯಾನ ವಿಶ್ಲೇಷಣೆಗಳು ಕನ್ನಡ ಸಂಸ್ಕೃತಿಯ ಒಟ್ಟು ಸಂದರ್ಭದಲ್ಲಿ ಗಂಭೀರವಾಗಿಯೇ ಕಾಣುತ್ತವೆ.

ಕರ್ನಾಟಕ ಜಾನಪದದಲ್ಲಿ ಇನ್ನೂ ಅನಾವರಣಗೊಳ್ಳದಿರುವ ಹಲವಾರು ಕಲೆಗಳಿವೆ. ಅಲಕ್ಷಿತವಾದವು ಎಂದು ಗುರುತಿಸಬಹುದಾದ ಸಂಸ್ಕೃತಿಯ ಹಲವು ಪದರಗಳಿವೆ. ಅದರಲ್ಲೂ ಗಡಿನಾಡು ಭಾಗದಲ್ಲಿ ಪ್ರಚಲಿತವಿರುವ ಕಲೆ-ಸಾಹಿತ್ಯ-ಸಂಸ್ಕೃತಿಯ ಅವಲೋಕನ ಇಂದಿನ ಜರೂರು ಎಂದೇ ಹೇಳಬೇಕಾಗಿದೆ. ಡಿ. ಕೆ. ಚಿತ್ತಯ್ಯಪೂಜಾರ್ ಅವರು ತಮ್ಮ 'ಗಡಿನಾಡಿನ ಜನಪದ ಕಲೆಗಳು ಮತ್ತು ಸವಾಲುಗಳು' ಎಂಬ ಆಕರ್ಷಕ ಲೇಖನದಲ್ಲಿ ಚಿತ್ರದುರ್ಗ, ತುಮಕೂರು ಹಾಗೂ ಕೋಲಾರ-ಬಳ್ಳಾರಿ ಜಿಲ್ಲಾ ಭಾಗಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಆ ಭೂಭಾಗಗಳಲ್ಲಿ ಪ್ರಚಲಿತವಿರುವ ಕಲೆಗಳ ಸ್ಥೂಲ ಅವಲೋಕನ ಮಾಡಿದ್ದಾರೆ. ಬಹುಭಾಷಿಕ-ಸಂಸ್ಕೃತಿಯ ನೆಲೆಗಳಲ್ಲಿ ಕಂಡುಬರುವ ಕಲೆಗಳನ್ನು ವಿಶೇಷ ಅಧ್ಯಯನಕ್ಕೆ ಗುರಿ ಮಾಡಬೇಕಾದ ತುರ್ತನ್ನು ಮನಗಾಣಿಸಿ ಅಲಕ್ಷಿತ ಕಲೆಗಳ ಬಗೆಗೆ ಮಾಹಿತಿ ಒದಗಿಸಿದ್ದಾರೆ.

ಆರ್. ಎಚ್. ಕುಲಕರ್ಣಿ ಅವರ 'ಬಾದಾಮಿ ಚಾಲುಕ್ಯರ ಲಯಣಗಳಲ್ಲಿನ ಕೆಲವು ಶಿಲ್ಪಗಳು ಅನಂತರದಲ್ಲಿ ಕೆತ್ತಿದವೆ ? ಒಂದು ವಿಶ್ಲೇಷಣೆ' ಎಂಬ ಬರಹ ಚಾಲುಕ್ಯರ ಲಯಣಗಳಲ್ಲಿ ರೂಪುಗೊಂಡ ಶಿಲ್ಪಗಳ ಶೈಲಿಯನ್ನು ಕುರಿತು ಕೂಲಂಕಷವಾಗಿ ಚರ್ಚಿಸುತ್ತದೆ. ಮುಖ್ಯವಾಗಿ ಚಾಲುಕ್ಯರ ಲಯಣಗಳ ಶಿಲ್ಪಗಳಲ್ಲಿ ಪ್ರಮಾಣ ಬದ್ಧವಾದ ದೇಹಾಕೃತಿಗೆ ಸರಿಹೊಂದುವ ಕಿರೀಟ ಮತ್ತು ದೇಹಸೌಂದರ್ಯ ಇರುವುದನ್ನು ಲಕ್ಷಿಸಿ ಒಟ್ಟಾರೆಯಾಗಿ ಶಿಲ್ಪಗಳ ಪರಿಪೂರ್ಣತೆಯನ್ನು ಪ್ರಮಾಣೀಕರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಚಾಲುಕ್ಯರ ಲಯಣಗಳಲ್ಲಿ ರೂಪುಗೊಂಡ ಶಿಲ್ಪಗಳಲ್ಲಿನ ಶೈಲಿಯ ಸಾಮ್ಯತೆ ಮತ್ತು ಪ್ರತಿಮಾಲಕ್ಷಣಗಳು ಒಂದೇ ಸೆಲೆಯಿಂದ ಉದ್ಭವಿಸಿ ವಿಕಸನ ಹೊಂದಿದವಾದ್ದರಿಂದ ಚಾಲುಕ್ಯ ಲಯಣಗಳ ಬೆಳವಣಿಗೆ ಹಂತ ಹಂತವಾಗಿ ಶಿಲ್ಪವಾಸ್ತುಗಳ ಸಾಂಪ್ರದಾಯಿಕ ಚೌಕಟ್ಟಿನಲ್ಲಿಯೇ ಆಯಿತು ಎಂದು ಲೇಖಕರು ಅಭಿಪ್ರಾಯಪಟ್ಟಿರುವುದು ಗಮನಾರ್ಹ.

ಮಹಾಮೇಧಾವಿ, ತತ್ತ್ವಶಾಸ್ತ್ರಜ್ಞ ಎಂ. ಹಿರಿಯಣ್ಣನವರ ವ್ಯಕ್ತಿಚಿತ್ರವನ್ನು ಕಟ್ಟಿಕೊಡುವ ಒಂದು ಸಣ್ಣ ಪ್ರಯತ್ನ ಎಂ. ಪಿ. ರಮೇಶ ಅವರಿಂದ ನಡೆದಿದೆ. ಹಿರಿಯಣ್ಣನವರ ವ್ಯಕ್ತಿತ್ವ-ಸಾಧನೆಗಳನ್ನು ಸಂಗ್ರಹವಾಗಿ ಪರಿಚಯಿಸುತ್ತ ಅವರ ವಿದ್ವತ್ತು ಅಗಾಧವಾದುದು ಎಂಬುದನ್ನು ಇಲ್ಲಿ ಮನಗಾಣಿಸಿ ಕೊಡುವ ಪ್ರಯತ್ನವಿದೆ. ಹಿರಿಯಣ್ಣ ಅವರನ್ನು ಕುರಿತು ಇನ್ನೂ ವಿಸ್ತಾರವಾದ ಅಧ್ಯಯನಕ್ಕೆ ಅವಕಾಶ ಇದೆ ಎಂಬುದನ್ನು ಗಮನಿಸಬೇಕು.

ಸ್ವಂತ ಅನುಭವ, ಜ್ಞಾನದಿಂದ ರೋಗದ ಲಕ್ಷಣಗಳನ್ನು ವ್ಯಕ್ತಿತ್ವವನ್ನು ವಿಶ್ಲೇಷಿಸುವ ಒಂದು ವಿರಳ ಪ್ರಯತ್ನ ಪಿ. ನಟರಾಜ್ ಅವರ ಬರಹ 'ನಿತ್ಯಾನಂದರ ನಿರಂತರ ಶಾಂತಿ ಮನೋಬೇನೆ... ಮಾನಸಿಕ ಅಸ್ವಾಸ್ಥ್ಯಕ್ಕೆ ಮೂಲವಾದ ರೋಗಗಳನ್ನು ಕೂಲಂಕಷವಾಗಿ ಅಭ್ಯಸಿಸಿ ಯುಕ್ತ ಪರಿಹಾರಗಳನ್ನು ಸೂಚಿಸುವ, ಮನೋಬೇನೆಗಳಿಂದ ರೋಗಿಗಳನ್ನು

ಮುಕ್ತರಾಗಿಸುವ ಪ್ರಾಮಾಣಿಕ ಪ್ರಯತ್ನಗಳು ಆಗಬೇಕು ಎಂಬುದನ್ನು ತಿಳಿಸಿಕೊಡುವ ಅತ್ಯಂತ ಉಪಯುಕ್ತವಾದ ಬರಹ ಇದು.

ಒಟ್ಟಿನಲ್ಲಿ ಕಲೆ, ಸಾಹಿತ್ಯ, ಇತಿಹಾಸ, ಪರಂಪರೆಗೆ ಸಂಬಂಧಿಸಿದ ಹಲವಾರು ವಿಷಯಗಳ ಬಗೆಗೆ ನಮ್ಮ ಅರಿವನ್ನು ವಿಸ್ತರಿಸುವ ಬರಹಗಳು ಇಲ್ಲಿ ಸೇರ್ಪಡೆಗೊಂಡಿರುವಂತೆ ವರ್ತಮಾನದ ವಿದ್ಯಮಾನಗಳನ್ನು ಗಂಭೀರವಾಗಿ ಚರ್ಚಿಸುವ, ಆ ಸವಾಲುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ಯತ್ನಗಳೂ ಇಲ್ಲಿ (ಈ ಸಂಚಿಕೆಯಲ್ಲಿ) ಸೇರಿರುವುದನ್ನು ಸಹೃದಯರು ಲಕ್ಷಿಸುತ್ತಾರೆಂದು ನಮ್ಮ ಭಾವನೆ. ಆಸಕ್ತರಿಗೆ ಇವು ಉಪಯಕ್ತ ಎನಿಸಿದರೆ ಈ ಪ್ರಯತ್ನ ಸಾರ್ಥಕವಾದಂತೆಯೇ ಸರಿ.

ಅಂಬಳಿಕೆ ಹಿರಿಯಣ್ಣ
ಆರ್. ರಾಮಕೃಷ್ಣ

ಪರಿವಿಡಿ

ಶಿಕ್ಷಕ ಮತ್ತು ಸಮಾಜ

ಡಾ. ಬಿ. ವಿ. ವಸಂತಕುಮಾರ್

ಶಿಕ್ಷಣ ಮತ್ತು ಶಿಕ್ಷಕರೇ ಒಂದು ಆರೋಗ್ಯಪೂರ್ಣ ಸಮಾಜದ ನಿರ್ಮಾತೃಗಳು. ಅಂತೆಯೇ ಅನಾರೋಗ್ಯ ಸಮಾಜದ ಹೊಣೆಗಾರರು ಕೂಡ! ಎಂದಿಗಿಂತಲೂ ಇಂದು ಶಿಕ್ಷಣ ಮತ್ತು ಶಿಕ್ಷಕರನ್ನು ಕುರಿತ ಚರ್ಚೆ ಹೆಚ್ಚಾಗುತ್ತಿದೆ. ಹೆಚ್ಚಾಗಬೇಕಾದ ಅಗತ್ಯವೂ ಇದೆ. ಕಳ್ಳರ ಕಾಟ ಹೆಚ್ಚಾದಾಗ ಪೊಲೀಸರ ನೆನಪಾಗುತ್ತದೆ. ಪೊಲೀಸ್ ಇಲಾಖೆ ಚರ್ಚೆಗೆ ಗ್ರಾಸವಾಗುತ್ತದೆ. ರೋಗಿಗಳ ಸಂಖ್ಯೆ ಹೆಚ್ಚಾದಾಗ, ರೋಗಗಳ ಹಾವಳಿ ಅತಿಯಾದಾಗ ವೈದ್ಯರ ನೆನಪಾಗುತ್ತದೆ. ಅಭಿವೃದ್ಧಿ ಕೆಲಸಗಳು ಆಗದೇ ಹೋದಾಗ ರಾಜಕಾರಣಿಗಳು ಚರ್ಚೆಗೆ ಗ್ರಾಸವಾಗುತ್ತಾರೆ. ಹಾಗಾದರೆ ಶಿಕ್ಷಕರು ಯಾವಾಗ, ಯಾತಕ್ಕಾಗಿ ಚರ್ಚೆಗೆ ಒಳಗಾಗುತ್ತಾರೆ ? ಅಂದರೆ ಸಮಾಜದಲ್ಲಿ ಮೌಲ್ಯಗಳು ಕುಸಿಯಲಾರಂಭಿಸಿದಾಗ, ನಂಬಿಕೆಗಳು, ವಿಶ್ವಾಸಗಳು, ಪ್ರೀತಿ ಹುಸಿಯಾಗತೊಡಗಿದಾಗ ಚರ್ಚೆಗೆ ವಸ್ತುವಾಗುತ್ತಾರೆ. ಅವಿದ್ಯಾವಂತರ ಸಂಖ್ಯೆ ಹೆಚ್ಚಾದಾಗ ನೆನಪಾಗುವುದಕ್ಕಿಂತ ವಿದ್ಯಾವಂತರ ಅನೈತಿಕತೆ, ಅಪಮೌಲ್ಯಗಳ ವಿಜೃಂಭಣೆಯಿಂದ ಮತ್ತು ಶಿಕ್ಷಕರ ನಡವಳಿಕೆಗಳಿಂದ ಶಿಕ್ಷಣ ಮತ್ತು ಶಿಕ್ಷಕ ಇಂದು ಹೆಚ್ಚು ಚರ್ಚೆಗೆ ಗುರಿಯಾಗುತ್ತಿದ್ದಾನೆ.

ಇತ್ತೀಚಿನ ಕೆಲವು ವರ್ಷಗಳ ವಿದ್ಯಮಾನಗಳ ಹಿನ್ನೆಲೆಯಲ್ಲಿ ಶಿಕ್ಷಣ ಮತ್ತು ಶಿಕ್ಷಕನ ಮೇಲೆ ಕೆಲವು ಗುರುತರವಾದ ಆರೋಪಗಳು ಬೀದಿ ಬೀದಿಗಳಲ್ಲಿ, ಜಗಲಿ ಕಟ್ಟೆಗಳಲ್ಲಿ, ಅರಳಿಕಟ್ಟೆಗಳಲ್ಲೂ ಚರ್ಚೆಯಾಗುತ್ತಿವೆ. ಅವುಗಳನ್ನು ಸ್ಥೂಲವಾಗಿ ಈ ಕೆಳಕಾಣಿಸಿದಂತೆ ಪಟ್ಟಿಮಾಡಬಹುದು :

- ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ
- ಶಿಕ್ಷಕರಲ್ಲಿ ಗುಣಮಟ್ಟ ಕಡಿಮೆಯಾಗುತ್ತಿದೆ
- ಜೀವಂತಿಕೆಯಿಲ್ಲದ ಪಠ್ಯವಿಷಯಗಳು
- ಅಧ್ಯಾಪನ-ಅಧ್ಯಯನಗಳಿಂದ ದೂರ ಸರಿಯುತ್ತಿರುವ ಶಿಕ್ಷಕರು
- ಹೆಚ್ಚು ಸಂಬಳ ಪಡೆದು ಕಡಿಮೆ ಕೆಲಸ ಮಾಡುವ ಕಾಲೇಜು ಉಪನ್ಯಾಸಕರು.
- ತಮ್ಮ ಕೆಲಸದಲ್ಲಿ "ಅಕೌಂಟಬಲಿಟಿ" ಇಲ್ಲದವರು.

- ಪರೀಕ್ಷೆ ಮತ್ತು ಮೌಲ್ಯಮಾಪನ ಸಂದರ್ಭದಲ್ಲಿ ಅನಾವಶ್ಯಕ ಮುಷ್ಕರ ಹೂಡಿ ವಿದ್ಯಾರ್ಥಿಗಳ ಭವಿಷ್ಯದೊಡನೆ ಚೆಲ್ಲಾಟವಾಡುವವರು.
- ಪೂರ್ಣ ಸಂಬಳ ಪಡೆದು ಅರೆಕಾಲಿಕ ಕೆಲಸ ಮಾಡುತ್ತಿರುವವರು.
- ಶಾಲೆಗೆ ಹೋಗದವರು, ಹೋದರೂ ತರಗತಿ ತೆಗೆದುಕೊಳ್ಳದವರು, ತೆಗೆದುಕೊಂಡರೂ ವ್ಯರ್ಥಹರಟೆ ಹೊಡೆಯುವವರು.
- ಖಾಸಗಿ 'ಮನೆಪಾಠ' ಹೇಳಿ ಹಣ ಮಾಡುತ್ತ, ತರಗತಿಗಳಲ್ಲಿ ಪ್ರಾಮಾಣಿಕವಾಗಿ ಪಾಠ ಹೇಳದೆ ವಿದ್ಯಾರ್ಥಿಗಳನ್ನು ಮನೆಪಾಠಕ್ಕೆ ಬರುವಂತೆ ಬಲಾತ್ಕಾರ ಮಾಡುವವರು.
- ವಿಶ್ವವಿದ್ಯಾನಿಲಯಗಳಲ್ಲಿನ ಗುಣಮಟ್ಟ ಕುಸಿಯುತ್ತಿರುವುದಲ್ಲದೆ, ರಾಜಕೀಯದ ಗೂಡುಗಳಾಗಿ ಜಾತಿ, ಹಣ, ಅನೈತಿಕತೆ ಮೊದಲಾದ ಅನೇಕ ಅನಿಷ್ಟಗಳ ತೊಟ್ಟಿಗಳಾಗುತ್ತಿವೆ.
- ಶಿಕ್ಷಣಕ್ಕೂ ಜೀವನಕ್ಕೂ ಸಂಬಂಧವಿಲ್ಲದಂತಾಗಿದೆ.

ಹೀಗೆ ಒಂದಲ್ಲ ಒಂದು ರೀತಿಯ ಆರೋಪಗಳು ಮೇಲಿಂದ ಮೇಲೆ ಒಂದಲ್ಲ ಒಂದೆಡೆ ಶಿಕ್ಷಣಮಂತ್ರಿಗಳಿಂದ ಹಿಡಿದು ಸಾಮಾನ್ಯವ್ಯಕ್ತಿಯವರೆಗೂ ಮಾತಾಡಿ ಕೊಳ್ಳುತ್ತಿರುವ, ಪತ್ರಿಕೆಗಳಲ್ಲಿ ವರದಿಯಾಗುತ್ತಿರುವ, ಅಷ್ಟೇ ಅಲ್ಲದೆ ಎಷ್ಟೋ ಅಧ್ಯಾಪಕರುಗಳೇ ಇಂಥ ಹಲವಾರು ಆಪಾದನೆಗಳನ್ನು ತಮ್ಮ ಮೇಲೆ ತಾವೇ ಮಾಡಿಕೊಳ್ಳುವ ಆತ್ಮಾವಲೋಕನದ ಉದಾಹರಣೆಗಳನ್ನು ಕಾಣಬಹುದಾಗಿದೆ.

ಹೌದು, ಆಪಾದನೆಗಳನ್ನು ಮಾಡುವುದು ಅತ್ಯಂತ ಸುಲಭ. ಅಷ್ಟೇ ಅಲ್ಲ, ಆ ಆಪಾದನೆಗಳನ್ನು ನೂರಾರು ಸಕಾರಣಗಳನ್ನು ನೀಡಿ ಸಾರಾಸಗಟಾಗಿ ಅಲ್ಲಗಳೆಯುವುದು ಸುಲಭ. ಆದರೆ ಆಪಾದನೆ ಮತ್ತು ನಿರಾಕರಣೆಗಳನ್ನು ಬದಿಗಿಟ್ಟು ಯೋಚಿಸುವುದಾದರೆ ಶಿಕ್ಷಣ ಮತ್ತು ಶಿಕ್ಷಕರನ್ನು ಕುರಿತು ಗಂಭೀರವಾಗಿ ಚಿಂತಿಸಬೇಕಾದ ಸಂದರ್ಭವಿದಾಗಿದೆ.

ಶಿಕ್ಷಣಕ್ಷೇತ್ರದ ಪುನರುಜ್ಜೀವನ ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾನಿಲಯದ ಹಂತದವರೆಗೂ ಶಸ್ತ್ರಕ್ರಿಯೆಯ ಸಮರೋಪಾದಿಯಲ್ಲಿ ನಡೆಯಬೇಕಾಗಿದೆ. ಶಿಕ್ಷಕರನ್ನು ಉತ್ಪಾದಿಸುವ ಶಿಕ್ಷಣ ಸಂಸ್ಥೆಗಳಾದ ಟಿ.ಸಿಎಚ್, ಬಿಇಡಿ., ಹಾಗೂ ವಿಶ್ವವಿದ್ಯಾನಿಲಯ ಕೇಂದ್ರಗಳು ಕರ್ತಾರನ ಕಮ್ಮಟಗಳಾಗಬೇಕಿವೆ. ಆದರೆ ಅದನ್ನು ಮಾಡುವವರು ಯಾರು?

ಈ ಆಪಾದನೆಗಳನ್ನು ಕುರಿತು ಶಿಕ್ಷಕರನ್ನು ಕೇಳಿದರೆ ಆಡಳಿತದ ಮೇಲೆ, ಸಮೂಹಮಾಧ್ಯಮಗಳ ಸೆಳೆತದ ಮೇಲೆ, ಪೋಷಕರ ಬೇಜವಾಬ್ದಾರೀತನದ ಮೇಲೆ, ಭ್ರಷ್ಟನೇಮಕಾತಿಯ ಮೇಲೆ ಅಥವಾ ರಾಜಕಾರಣಿಗಳ ಅಪಕ್ವ ನಿರ್ಧಾರಗಳ ಮೇಲೆ ಅಥವಾ ವಿದ್ಯಾರ್ಥಿಗಳ ಕ್ಷೀಣಿಸಿದ ಗುಣಮಟ್ಟ, ಒಟ್ಟಾರೆ ಇಡೀ ವ್ಯವಸ್ಥೆಯೇ ಹಾಳಾಗುತ್ತಿರುವಾಗ ಶಿಕ್ಷಣಕ್ಷೇತ್ರ ಒಂದೇ ಹೇಗೆ ಶುದ್ಧವಾಗಿ ಶುಚಿಯಾಗಿರಲು ಸಾಧ್ಯ? ಹಾಗೆ ನೋಡಿದರೆ ಭ್ರಷ್ಟಾಚಾರ, ಲಂಚಗುಳಿತನದಿಂದ ಸ್ವಲ್ಪವಾದರೂ ದೂರವಿದ್ದು

ಮರ್ಯಾದೆ ಉಳಿಸಿರುವವರೇ ಶಿಕ್ಷಕರು. ಅಲ್ಪಸ್ವಲ್ಪ ಮೌಲ್ಯಗಳು ಜೀವಂತ ಇವೆ ಅನ್ನುವುದಾದರೆ ಅದು ಶಿಕ್ಷಣ ಮತ್ತು ಶಿಕ್ಷಕರಲ್ಲಿ ಉಳಿದು ಬೆಳೆಯುತ್ತಾ ಬಂದಿರುವ ಮೌಲ್ಯಗಳೇ ಕಾರಣ ಎಂದು ಹೇಳಬಹುದು. ಆದರೆ ಇದು ವಾದ ಪ್ರತಿವಾದಗಳ ಆರೋಪ ಪ್ರತ್ಯಾರೋಪಗಳ ಸಂದರ್ಭವಲ್ಲ, ಸೋಲು ಗೆಲುವುಗಳ ಸಂಘರ್ಷವಲ್ಲ. ಆದರೂ ದುರಾದೃಷ್ಟವಶಾತ್ ಇತ್ತೀಚಿನ ಕೆಲವು ಘಟನೆಗಳನ್ನು ಗಮನಿಸಿದಾಗ, ಉದಾಹರಣೆಗೆ ಕಾಲೇಜು ಅಧ್ಯಾಪಕರು ಯು.ಜಿ.ಸಿ. ಸಂಬಳಕ್ಕಾಗಿ ತಿಂಗಳುಗಟ್ಟಲೆ ಮುಷ್ಕರ ನಡೆಸಿದ್ದು, ಸರ್ಕಾರದ ಬಿಗಿ ನಿಲುವಿನಿಂದ ಮುಂದುವರೆದ ಮುಷ್ಕರ ೧೭ ದಿನಗಳ ಸಂಬಳ ಕಳೆದುಕೊಳ್ಳುವುದರೊಂದಿಗೆ ಮುಕ್ತಾಯವಾಯ್ತು. ಅನಂತರ ಕೆಲವೇ ದಿನಗಳಲ್ಲಿ ನಡೆದ ಪ್ರಾಥಮಿಕ ಶಾಲಾ ಅಧ್ಯಾಪಕರ ಮುಷ್ಕರದ ಸಂದರ್ಭದಲ್ಲಿ ಇಡೀ ಸಮಾಜ ಶಿಕ್ಷಕರ ವಿರುದ್ಧ ತಿರುಗಿಬಿತ್ತು. ಜನ ಶಿಕ್ಷಕರನ್ನು ಮನೆಯಿಂದ ಕರೆಸಿ ಶಾಲೆ ತೆರೆಸಿದರು, ಕೆಲವು ಗ್ರಾಮಗಳಲ್ಲಿ ಸಾರ್ವಜನಿಕರೇ ಶಾಲೆ ತೆರೆದು ತರಗತಿಗಳನ್ನು ತೆಗೆದುಕೊಂಡರು. ಅನಂತರ ಪದವಿಪೂರ್ವ ಕಾಲೇಜು ಅಧ್ಯಾಪಕರು ಮೌಲ್ಯಮಾಪನ ಬಹಿಷ್ಕಾರ ಚಳವಳಿಗೆ ಇಳಿದಾಗ ಮಾನ್ಯ ಶಿಕ್ಷಣಮಂತ್ರಿಗಳು ಪ್ರತಿಚಳವಳಿಯಾಗಿ 'ಧರಣಿ' ನಡೆಸುವುದಾಗಿ ಪ್ರಕಟಿಸಿದರು. ಕೊನೆಗೆ ಎಸ್ಮಾ ಜಾರಿಯಾಗಿ ಹಲವಾರು ಅಧ್ಯಾಪಕರ ಬಂಧನವಾಯ್ತು. ಎಸ್ಮಾ ಕಾನೂನು ಶಿಕ್ಷಕರ ಮೇಲೆ ತನ್ನ ಕರಾಳ ಹಸ್ತವನ್ನು ಚಾಚಿ ಶಿಕ್ಷಣಕ್ಷೇತ್ರದ ಇತಿಹಾಸದಲ್ಲೊಂದು ಕಪ್ಪು ಚುಕ್ಕೆಯಾಗಿ ಉಳಿಯಿತು.

ಹೀಗೆ ಸಂಘರ್ಷ ಮುಂದುವರೆದರೆ ಪರಿಹಾರ ಪರಿಣಾಮಗಳೇನು? ಶಿಕ್ಷಕರು v/s ಅಧಿಕಾರಶಾಹಿ, ಶಿಕ್ಷಕರು v/s ಶಾಸಕಾಂಗ, ಶಿಕ್ಷಕರು v/s ಪೋಷಕರು, ಶಿಕ್ಷಕರು v/s ವಿದ್ಯಾರ್ಥಿಗಳು, ಕೊನೆಗೆ ಶಿಕ್ಷಕರು v/s ಶಿಕ್ಷಕರು ಎನ್ನುವಂತಹ ರೀತಿಯಲ್ಲಿ ಶಿಕ್ಷಕರ ಮೇಲೆ, ಶಿಕ್ಷಕರ ಚಳವಳಿಗಳ ಮೇಲೆ ತೀವ್ರತರ ದುಷ್ಪರಿಣಾಮಗಳು ಬೀರುತ್ತವೆ. ರಾಜಕಾರಣಿಗಳ ಭ್ರಷ್ಟಾಚಾರದ ವಿರುದ್ಧವಾಗಲೀ ಅಧಿಕಾರಷಾಹಿಯ ಲಂಚಗುಳಿತನ ಮತ್ತು ದುರಹಂಕಾರೀ ವರ್ತನೆಯ ಬಗ್ಗೆಯಾಗಲೀ ಧ್ವನಿ ಎತ್ತದ, ಪ್ರತಿರೂಪದಂತಿರುವ ಈ ಸಮಾಜ ಏಕಾಏಕಿ ಶಿಕ್ಷಕರ ಮೇಲೆ ಮುನಿಸಿಕೊಂಡದ್ದಾದರೂ ಏಕೆ? ಈ ಪ್ರಶ್ನೆಯನ್ನು ಪ್ರತಿಯೊಬ್ಬ ಶಿಕ್ಷಕ, ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾನಿಲಯದವರೆಗೂ ಎಲ್ಲರೂ ಏಕಾಂತದಲ್ಲಿ ಸಮಚಿತ್ತದಲ್ಲಿ ಆತ್ಮಾವಲೋಕನ ಮಾಡಿಕೊಳ್ಳುವ ತುರ್ತು ಎದುರಾಗಿದೆ.

ಶಿಕ್ಷಕರ ಮೇಲಿನ ಸಮಾಜದ ಸಿಟ್ಟು ನೇತ್ಯಾತ್ಮಕವಾದದ್ದಲ್ಲ. ಅದು ಎಂದೆಂದೂ ಇತ್ಯಾತ್ಮಕವಾದದ್ದು. ಹಗಲಿನಲ್ಲಿ ಯಾರೂ ಎಂದೂ ದೀಪದ ಬಗ್ಗೆ, ಬೆಳಕಿನ ಬಗ್ಗೆ ಚಿಂತಿಸುವುದಿಲ್ಲ. ಆತಂಕಗೊಳ್ಳುವುದಿಲ್ಲ. ಆದರೆ ಕತ್ತಲಾದಾಗ ದೀಪಬೇಕು, ಬೆಳಕು ಬೇಕು, ಅದು ಆರದಿರಬೇಕು. ಅದಕ್ಕಾಗಿಯೇ ಬುಡ್ಡಿ, ಲಾಂಟೀನುಗಳಿಗೆ ಭದ್ರವಾದ ಗ್ಲಾಸುಗಳನ್ನು ತೊಡಿಸುತ್ತಾರೆ. ಆ ಬೆಳಕಿನಲ್ಲಿ ಬದುಕನ್ನು ಹುಡುಕುತ್ತಾರೆ, ಕಟ್ಟಿಕೊಳ್ಳುತ್ತಾರೆ. ಅಂತೆಯೇ ಇಂದು ಇಡೀ ವ್ಯವಸ್ಥೆ ಕತ್ತಲಂತೆ ಗೋಚರಿಸತೊಡಗಿದಾಗ ಇರುವ ಆಶಾಕಿರಣವೊಂದೇ ಅದು ಈ ಶಿಕ್ಷಕ ಎಂಬ ಹಣತೆ. ಅವರೂ ಕಾಡ್ಗಿಚ್ಚಾದರೆ ಎಲ್ಲಿದೆ ಆಶಾವಾದ ?

ಇಂದು ನಾವುಗಳು 'ತಳವೊಡೆದ ದೋಣಿಯಲ್ಲಿ ದೂರತೀರಯಾನ' ಗೈಯುತ್ತಿದ್ದೇವೆ. ಕಾಲ ಕೆಟ್ಟಿದೆ, ವ್ಯವಸ್ಥೆ ಹಾಳಾಗಿದೆ ಎಂದೆಲ್ಲಾ ಬಡಬಡಿಸುತ್ತಿದ್ದೇವೆ. ಆ ಬಡಬಡಿಸುವಿಕೆಯ ಹಿಂದಿನ ಕಾಳಜಿಯ ಕರೆಯೇ ಶಿಕ್ಷಕರ ಮೇಲಿನ ಕೋಪ. ಬಸ್ಸು ಮುಂದೆ ಸಾಗಬೇಕಾದರೆ ಆಕ್ಸಿಲೇಟರನ್ನು ತುಳಿಯಲೇಬೇಕು. ಸ್ಟೇರಿಂಗನ್ನು ತಿರುವಲೇಬೇಕು. ಬೆಳಕು ಬೇಕಾದರೆ ಹಣತೆಯ ಬತ್ತಿಯೊಂದಕ್ಕೆ ಬೆಂಕಿ ಹಚ್ಚಲೇಬೇಕು. ಆ ಉರಿಯಲ್ಲಿ ಮೇಣ ಕರಗಲೇ ಬೇಕು. ಎಷ್ಟು ಜನ ಅಧ್ಯಾಪಕರು ಹಣತೆಗಳಾಗುವುದಕ್ಕೆ ಸಿದ್ಧರಾಗಿದ್ದೇವೆ. ಸಮಾಜದ ಪ್ರತಿಕ್ರಿಯೆಯಿಂದ ಆತ್ಮಾವಲೋಕನದ ಮೂಲಕ ಬೆಳಕಾಗಬೇಕಿದೆ. ಇದು ಆದರ್ಶದ ಸವಕಲು ಮಾತಲ್ಲ. ಇಂದಿನ ಸಂದರ್ಭದ ಒತ್ತಡದ ವಾಸ್ತವದ ಕಿಡಿ.

ಅದಕ್ಕಾಗಿಯೇ ಮೊಟ್ಟ ಮೊದಲು ಶಿಕ್ಷಣಕ್ಷೇತ್ರಕ್ಕೆ ಕೆಲವು ತುರ್ತು ಚಿಕಿತ್ಸೆಯ ಅಗತ್ಯವಿದೆ.

೧ ಪ್ರತಿಯೊಬ್ಬ ಶಿಕ್ಷಕ ತಾನು ಕರ್ತವ್ಯ ನಿರ್ವಹಿಸುವ ಸ್ಥಳದಲ್ಲೇ ವಾಸ್ತವ್ಯ ಹೂಡಬೇಕು.

ಇಂದು ಅನೇಕರು ಗ್ರಾಮಗಳಿಗೆ ತಾಲ್ಲೂಕು ಕೇಂದ್ರಗಳಿಂದ; ತಾಲ್ಲೂಕು ಕೇಂದ್ರಗಳಿಗೆ ಜಿಲ್ಲಾಕೇಂದ್ರಗಳಿಂದ ಹೋಗಿ ಬರುವ ಪದ್ಧತಿ ವ್ಯಾಪಕವಾಗಿದೆ. ಅಷ್ಟೇ ಅಲ್ಲ, ಮೈಸೂರಿನಿಂದ ಬೆಂಗಳೂರಿಗೆ ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣಮಾಡಿ ಕೆಲಸ ಮಾಡುವ ಅನೇಕ ಇಲಾಖೆಯ ಅನೇಕ ನೌಕರರನ್ನು ಕಾಣುತ್ತೇವೆ. ಇದು ಶಿಕ್ಷಕರಿಗೆ ಮಾತ್ರವಲ್ಲ ಎಲ್ಲ ಸರ್ಕಾರಿ ನೌಕರರಿಗೂ ಅನ್ವಯಿಸುವ ಮಾತು. ವೃತ್ತಿ ಎಂದರೆ ಇಲಾಖೆ ಮಾತ್ರವಲ್ಲ. ಇಲಾಖೆ ಎಂದರೆ ಕಡತಗಳ ವಿಲೇವಾರಿ ಎಂದಲ್ಲ! ಆ ಇಲಾಖೆಯ ಮೂಲಕ ಇಲಾಖೆಯಲ್ಲಿರುವ ವಿದ್ಯಾವಂತ, ಪ್ರತಿಭಾವಂತ ನೌಕರರ ಮೂಲಕ ಆ ಹಳ್ಳಿಯ ಜನರ ಜೀವನ ಸಂಸ್ಕೃತಿ ವಿಕಾಸವಾಗಬೇಕು. ಅದು ಕೇವಲ ನಗರ ಕೇಂದ್ರಿತವಾಗಬಾರದು. ನಮ್ಮ ಮಕ್ಕಳಿಗೆ ಉತ್ತಮ ಬದುಕು, ಸೌಲಭ್ಯ ಬೇಕು. ಅದಕ್ಕಾಗಿ ನಗರ ಬಯಸುವ ನಾವು ಯಾರಿಂದ ಸಂಬಳ ಪಡೆಯುತ್ತೇವೆಯೋ ಆ ಜನರಿಗೆ ಆ ಪರಿಸರಕ್ಕೆ ಉತ್ತಮ ಬದುಕನ್ನು ನೀಡುವುದು ಬೇಡವೇ ? ಅದಕ್ಕಾಗಿ ಪ್ರತಿಯೊಬ್ಬ ನೌಕರ ಕನಿಷ್ಠ ೧೦ ವರ್ಷವಾದರೂ ಗ್ರಾಮೀಣ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುವುದನ್ನು ಕಡ್ಡಾಯಗೊಳಿಸಬೇಕು. ಬೆಂಗಳೂರು, ಮೈಸೂರು, ಧಾರವಾಡದಂಥ ಮಹಾನಗರಗಳಲ್ಲಿ ಗರಿಷ್ಠ ಐದು ವರ್ಷಕ್ಕಿಂತ ಹೆಚ್ಚು ಅವಧಿ ಮುಂದುವರೆಸಬಾರದು. ಹಾಗಾದಾಗ ಮಾತ್ರ ಗ್ರಾಮರಾಜ್ಯ ನಿರ್ಮಾಣ ಸಾಧ್ಯವಾದೀತು.

೨ ಶಿಕ್ಷಕರ ವೃತ್ತಿಯನ್ನು ರಜೆ ರಹಿತ ವೃತ್ತಿಯನ್ನಾಗಿ ಪರಿವರ್ತಿಸಬೇಕು.

ಇಂದು ಪೂರ್ಣಸಂಬಳ ಪಡೆದು ಅರೆಕಾಲಿಕ ಕೆಲಸ ಮಾಡುವ ಸ್ಥಿತಿಗೆ ಅಧಿಕವಾದ ರಜೆ ಕಾರಣ! ರಜೆ ಇರುವುದು ಅಧ್ಯಯನಕ್ಕಾಗಿ, ಬರೆಯುವುದಕ್ಕಾಗಿ, ಪ್ರವಾಸಕ್ಕೆಗೊಂಡು

ಲೋಕಾನುಭವಗಳಿಸಿಕೊಂಡು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಹೊಸ ಚೈತನ್ಯದೊಂದಿಗೆ ಹೊಸ ನೀರಾಗುವುದಕ್ಕಾಗಿ ! ಆದರೆ ಇಂದು ರಜೆ ಎಂಬುದು ಬಹುತೇಕ ತೋಟ ಮಾಡಿಸುವುದಕ್ಕಾಗಿ, ಫೈನಾನ್ಸ್ ನಡೆಸುವುದಕ್ಕಾಗಿ, ಕಬ್ಬಿಣ, ಸಿಮೆಂಟು, ಜಲ್ಲಿ, ಮರಮುಟ್ಟು ಮಾರುವುದಕ್ಕಾಗಿ, ನೂರಾರು ಏಜೆನ್ಸಿಗಳನ್ನು ಹಿಡಿಯುವುದಕ್ಕಾಗಿ ಇತ್ಯಾದಿ! ಹೀಗೆ ನಮ್ಮ ರಜೆ ಅಶೈಕ್ಷಣಿಕ ಕಾರಣಗಳಿಗಾಗಿ ಖರ್ಚಾಗಿ ಪುನಃ ಶಾಲಾ ಕಾಲೇಜು ಪ್ರಾರಂಭವಾದಾಗ ಆ ರಜೆಯಲ್ಲಿ ಶುರುಮಾಡಿದ ಹಲವಾರು ಕೆಲಸಗಳಿಗಾಗಿ ಒಂದಷ್ಟು ಗಂಟೆಗಳನ್ನಾದರೂ ಮೀಸಲಿಡಬೇಕಲ್ಲವೇ! ದಿನದಲ್ಲಿ ಏಳುಗಂಟೆ ಕಾಲೇಜಿನಲ್ಲಿ ಹಾಜರಿರಬೇಕೆಂದು ಗೋಗರೆಯುವ ಸ್ಥಿತಿಗಿಂತ ಭಿನ್ನವಾದ ದುರಂತ ಯಾವುದಿದೆ? ಹೀಗಿರುವಾಗ ಸಮಾಜದ ಆಕ್ರೋಶದಲ್ಲಿ ಆಪಾದನೆಗಳಲ್ಲಿ ತಪ್ಪಿದೆಯೇ? ಅದರ ಅರ್ಥ ಎಲ್ಲ ಶಿಕ್ಷಕರು ಹೀಗೆ ಎಂದಲ್ಲ. ಕೆಲವರಿಂದ ಎನ್ನುವುದಕ್ಕಿಂತ ಹಲವರಿಂದ ಎಂಬ ಪದ ಬಳಕೆಯೇ ಹೆಚ್ಚು ವಾಸ್ತವವೆನಿಸೀತು. ಇಂಥ ಅಪಾಯಗಳಿಂದ ಮೊದಲು ಶಿಕ್ಷಣ ಕ್ಷೇತ್ರವನ್ನು ಕಾಪಾಡಿ ಅಲ್ಲಿ ಸಂಪೂರ್ಣ ಶೈಕ್ಷಣಿಕ ವಾತಾವರಣವನ್ನು ರೂಪಿಸಬೇಕಿದೆ.

ಕೆಲಸವಿಲ್ಲದ ಸಂದರ್ಭದಲ್ಲಿ ಕಾಲೇಜುಗಳಲ್ಲಿ ಕುಳಿತು ಏನು ಮಾಡಬೇಕು ಎಂಬುದು ಕೆಲವರ ಪ್ರಶ್ನೆ. ಮತ್ತೆ ಕೆಲವರು ಮನೆಯಲ್ಲಿಯೇ ಓದಿ ಬರೆಯುತ್ತೇವೆ ಎಂಬ ಸಲಹೆ. ಇಂಥ ಅನೇಕ ಗೊಂದಲಗಳಿಗೆ ಪರಿಹಾರವಾಗಿ ಬಿಡುವಿನ ವೇಳೆಯಲ್ಲಿ ಅಥವಾ ರಜೆಯ ಅವಧಿಯಲ್ಲಿ ಶಿಕ್ಷಕರ ಶಕ್ತಿ ಸಾಮರ್ಥ್ಯಗಳ ಸದುಪಯೋಗದ ಬಗ್ಗೆ ಸರ್ಕಾರ ಮತ್ತು ಶಿಕ್ಷಣತಜ್ಞರು ಸೂಕ್ತ ಚಿಂತನೆಯನ್ನು ನಡೆಸಿ ಶಿಕ್ಷಣ ಜನಾಂದೋಲನ ವಾಗುವ ನಿಟ್ಟಿನಲ್ಲಿ ಶಿಕ್ಷಕರನ್ನು ಬಳಸಿಕೊಳ್ಳುವ ಪ್ರಮಾಣಿಕ ಪ್ರಯತ್ನ ನಡೆಯಬೇಕಾಗಿದೆ. ಅಂತರರಾಜ್ಯ ಹಾಗೂ ಅಂತರಾಷ್ಟ್ರಮಟ್ಟದ ಸಾಂಸ್ಕೃತಿಕ ವಿನಿಮಯ ಪ್ರವಾಸ ಯೋಜನೆಗಳನ್ನು ಶಿಕ್ಷಕರಿಗಾಗಿ ರೂಪಿಸಿ ಪ್ರೇರೇಪಿಸಬೇಕಾಗಿದೆ. ರಜೆ ರಹಿತ ವೃತ್ತಿಯಾಗಿ ಪರಿಗಣಿಸಿ ವಾರ್ಷಿಕ ೩೦ ಗಳಿಕೆ ರಜೆ ನೀಡಿ, ಪರೀಕ್ಷೆ ಹಾಗೂ ಮೌಲ್ಯಮಾಪನ ಕಾರ್ಯಗಳ ಭತ್ಯೆಯಲ್ಲಿ 'ಗ್ರಂಥಗಳನ್ನು' ಕೊಡುಗೆಯಾಗಿ ನೀಡುವುದು. ಆಯಾ ಹಂತದಲ್ಲಿ ಪ್ರಸಾರಾಂಗ ತೆರೆದು ಲೇಖನ ಹಾಗೂ ಪುಸ್ತಕಗಳ ಪ್ರಕಟಣೆಯ ಯೋಜನೆ ಶಿಕ್ಷಕರನ್ನು ಶೈಕ್ಷಣಿಕ ಮೇಲ್ಮೆಗೆ ಕೊಂಡೊಯ್ಯುತ್ತದೆ.

೩. ಶಿಕ್ಷಕ ವೃತ್ತಿಯನ್ನು ಸ್ವಾಯತ್ತ (ಅಟಾನಮಸ್)ಗೊಳಿಸಬೇಕು

ಶಿಕ್ಷಕ ಎಂದರೆ ಮಾತನಾಡುವ ಯಂತ್ರವಲ್ಲ ಅಥವಾ ಯಾರೋ ರೂಪಿಸಿದ ಪಠ್ಯಕ್ರಮದ ಗಿಳಿಪಾಠ ಒಪ್ಪಿಸುವ ಅನುವಾದಕನೂ ಅಲ್ಲ ಅಥವಾ ಕಣ್ಣ ಮುಂದೆ ನಡೆಯುವ ಅನ್ಯಾಯ, ಅನಾಚಾರಗಳ ಬಗ್ಗೆ ಅವಘಡಗಳ ಬಗ್ಗೆ ಕಣ್ಣುಮುಚ್ಚಿ, ಕಿವಿಮುಚ್ಚಿ, ಬಾಯಿಮುಚ್ಚಿ, ಎದೆ ಮುಚ್ಚಿ ವ್ಯವಸ್ಥೆಯನ್ನು ವೈಭವೀಕರಿಸುವ, ಪರಾಕುಹಾಕುವ ಭಟ್ಟಂಗಿಯೂ ಅಲ್ಲ. ಶಿಕ್ಷಕನೆಂದರೆ ರಕ್ತದೊಳಗಿನ ಹಿಮೋಗ್ಲೋಬಿನ್, ಗಾಳಿಯೊಳಗಿನ ಆಮ್ಲಜನಕ, ನೆಲದ ಮೇಲಿನ ನದಿ, ಬಾನದಾರಿಯ ಸೂರ್ಯ. ಇದು

ಉತ್ಪ್ರೇಕ್ಷೆಯ ವರ್ಣನೆಯಲ್ಲ. ಆಗಬೇಕಾದ ಸತ್ಯನಿರೂಪಣೆ. ಆದ್ದರಿಂದ ಶಿಕ್ಷಕ ಹೆಚ್ಚು ಸ್ವತಂತ್ರನಾಗಿರಬೇಕು. ಅವನ ಬುದ್ಧಿ, ಭಾವ, ಬಾಯಿಗಳನ್ನು ಬರಹವನ್ನು ಕಟ್ಟಿಹಾಕುವ, ಬಂಧಿಸುವ ಕ್ರಮ ಸರಿಯಲ್ಲ. ಯಾವುದೇ ವ್ಯವಸ್ಥೆಯ ಓರೆಕೋರೆಗಳನ್ನು ನೇರವಾಗಿ ಹೇಳುವ, ಪ್ರತಿಭಟಿಸುವ ಸ್ವಾತಂತ್ರ್ಯ ಶಿಕ್ಷಕನಿಗೆ ಇರಬೇಕು. ಇಲ್ಲದೇ ಹೋದಲ್ಲಿ ಆ ಭ್ರಷ್ಟವ್ಯವಸ್ಥೆಯ ಒಂದು ಭಾಗವೇ ಆಗಿ ಹೋಗುವ ಶಿಕ್ಷಕ ಯಾವ ಹೊಸ ಸಮಾಜದ ನಿರ್ಮಾತೃ ಆಗಬಲ್ಲ? ಬದಲಿಗೆ ಹಕ್ಕುಗಳಿಗಾಗಿ ಹೋರಾಡುವ, ವ್ಯವಸ್ಥೆಯಲ್ಲಿ ಭ್ರಷ್ಟತೆಯಿಂದಾಗಿ ಮುಂದೆ ಮುಂದೆ ಓಡುತ್ತಿರುವ 'ದೊಡ್ಡವರ'ನ್ನು ಕಂಡು ತಾನೂ ಅವರೊಡನೆ ಓಡಲು ಪ್ರಾರಂಭಿಸುತ್ತಾನೆ. ಗುಂಪಿನಲ್ಲಿ ಗೋವಿಂದವಾಗುತ್ತಾನೆ. ಯಾರಂತೆ ಎಂದರೆ ಊರಂತೆ ಎನ್ನುತ್ತಾನೆ.

ಆದರೂ ಸಮಾಜ ಶಿಕ್ಷಕನನ್ನು "ಎಲ್ಲರಂತೆ ಇವನೂ ಒಬ್ಬ"ಎಂಬ ಹೋಲ್ ಸೇಲ್ ದೃಷ್ಟಿಯಿಂದ ನೋಡುವುದಿಲ್ಲ. ಸ್ವಲ್ಪವಾದರೂ ಮೌಲ್ಯಗಳನ್ನಿರಿಸಿಕೊಂಡ, ಇರಿಸಿಕೊಳ್ಳಬೇಕಾದ ಗುರು, ಆಚಾರ್ಯ ಎಂಬ ಆದರ್ಶದ ಕನಸಿನ ನೆಲೆಯಲ್ಲೇ ಕಾಣುತ್ತದೆ. ಆ ನಿರೀಕ್ಷೆ ಅಪಾರವಾಗಿರುವುದರಿಂದಲೇ ಅದು ಸ್ವಲ್ಪ ಹುಸಿಯಾದಾಗಲೂ ಸಮಾಜ ಶಿಕ್ಷಣಕ್ಷೇತ್ರದ ಬಗ್ಗೆ, ಶಿಕ್ಷಕರ ಬಗ್ಗೆ ಕಾಳಜಿಯಿಂದ ಕೆಂಗಣ್ಣಿನಿಂದ ಕಾಣಲಾರಂಭಿಸುತ್ತದೆ. ಹಾಗಾಗಿ ಶಿಕ್ಷಕ ಗುಲಾಮನಾಗದೆ, ವಿಚಾರ ಸ್ವಾತಂತ್ರ್ಯವನ್ನು ಹೊಂದಿದ ಸ್ವಾಯಕ್ತನಾಗಬೇಕು. ಇದು ಸಾಧ್ಯವಾದಾಗ ಮಾತ್ರ ವಿಚಾರಕ್ರಾಂತಿ ಸಾಧ್ಯವಾಗುತ್ತದೆ.

ಇವು ಕೇವಲ ಕೆಲವು ಆಲೋಚನೆಯ ತುಣುಕುಗಳು. ವರ್ತಮಾನಕ್ಕೆ ಟಿಸಿಲೊಡೆದ ಕುಡಿಗಳು. ಶಿಕ್ಷಣ ಕ್ಷೇತ್ರವನ್ನು ಕುರಿತ ಸಾವಿರ ಸಾವಿರ ಆಲೋಚನೆಗಳು ಹಳ್ಳಿಯಿಂದ ದಿಲ್ಲಿಗೆ ಸಾಗಬೇಕು. ಈ ಶತಮಾನದ ಹೊಸ್ತಿಲಲ್ಲೇ ಹೊಸ ಸಮಾಜ ಕಟ್ಟುವ ಕಲ್ಪನೆಯ ಕೂಸುಗಳನ್ನು ಹಡೆಯಬೇಕು. ಕಂಸನಂತೆ ಎರಗುತ್ತಿರುವ ಜಾಗತೀಕರಣದ ಬಿರುಗಾಳಿಯಲ್ಲಿ ಸಾಮಾಜಿಕ ನ್ಯಾಯವನ್ನು ಉಳಿಸಬೇಕು. ಶಿಕ್ಷಣ ಹಣ ಅಧಿಕಾರವುಳ್ಳವರ ಸೊತ್ತಾಗದಂತೆ ತಡೆಯಬೇಕು. ಜಾಗತೀಕರಣದ ಶೈಕ್ಷಣಿಕ ಆಕ್ರಮಣ ಆರಂಭಗೊಂಡಿದೆ. ಅನ್ಯರ ಆಕ್ರಮಣ ನಮ್ಮವರ ತಿರಸ್ಕಾರಕ್ಕೆ ಗುರಿಯಾಗುತ್ತಿರುವ ಶಿಕ್ಷಣ ಅದರಲ್ಲೂ ಉನ್ನತ ಶಿಕ್ಷಣ. ತನ್ನ ಪಾತಳಿಗಳನ್ನು ತಾನೇ ಹುಡುಕಿಕೊಳ್ಳಬೇಕಿದೆ. ಅದಕ್ಕೆ ಸರ್ಕಾರದ ಸಮಾಜದ ಸಹಕಾರ, ಶಿಕ್ಷಕ ಹಾಗೂ ಶಿಕ್ಷಣ ಕ್ಷೇತ್ರದಲ್ಲಿರುವ ಎಲ್ಲರ ಸಾಮರ್ಥ್ಯ ಐಕ್ಯಗೊಳ್ಳಬೇಕು.

ಹಾಗಾಗಿ ಶಿಕ್ಷಕ ತನ್ನ ಮೇಲಿನ ಎಲ್ಲ ಆಪಾದನೆಗಳನ್ನು ಕುರಿತು ಆತ್ಮಾವಲೋಕನದೊಂದಿಗೆ ಇಡೀ ಶಿಕ್ಷಣ ವ್ಯವಸ್ಥೆಯ ಸಮಗ್ರ ಬದಲಾವಣೆಗೆ, ತುರ್ತುಚಿಕಿತ್ಸೆಗೆ, ಶಸ್ತ್ರಚಿಕಿತ್ಸೆಗೆ ಮುಂದಾಗಬೇಕು. ಅಂದರೆ ತಾನು ಮೊದಲು ಬದಲಾಗಲು ಸನ್ನದ್ಧನಾಗಬೇಕು. ಆಗ ಮಾತ್ರ ಶಿಕ್ಷಕರಾದ ನಾವೂ ಉಳಿದು ಬೆಳೆಯುತ್ತೇವೆ. ಸಮಾಜವೂ ಉಳಿದು ನಮ್ಮನ್ನೂ ಬೆಳೆಸುತ್ತದೆ. ಸಮಾಜವೂ ಬೆಳೆಯುತ್ತದೆ.

ಉನ್ನತ ಶಿಕ್ಷಣ : ಕೆಲವು ಸಲಹೆ ಸೂಚನೆಗಳು

ಡಾ. ಎಚ್. ಜಯಕುಮಾರ
ಜಿ. ಶಿವಪ್ಪ

ಪ್ರಪಂಚದ ಆರ್ಥಿಕತೆ ಬದಲಾಗುತ್ತಿದೆ. ರಾಜ್ಯವು ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಉದ್ಯೋಗ ನೀಡುವ ಏಕೈಕ ಮೂಲವಾಗಿ ಉಳಿದುಕೊಂಡಿಲ್ಲ. ವಾಸ್ತವ ಸ್ಥಿತಿಯೆಂದರೆ ಬಹುಪಾಲು ಉದ್ಯೋಗಾವಕಾಶಗಳು ಖಾಸಗಿ ಕ್ಷೇತ್ರದ ಹಿಡಿತದಲ್ಲಿವೆ. ಖಾಸಗಿ ಕ್ಷೇತ್ರದವರು ಕೌಶಲ್ಯವನ್ನು ಹೊಂದಿರುವವರಿಗೆ ಮಾತ್ರ ಆದ್ಯತೆ ಕೊಟ್ಟು ಕೆಲಸಕ್ಕೆ ನೇಮಿಸಿಕೊಳ್ಳುತ್ತಾರೆ. ಹಾಗಾಗಿ ಜಗತ್ತಿನ ದೇಶಗಳಲ್ಲಿ ಮಾರುಕಟ್ಟೆಯ ಆವಶ್ಯಕತೆಗಳಿಗೆ ತಕ್ಕಂತೆ ತಮ್ಮ ದೇಶದ ಶಿಕ್ಷಣ ವ್ಯವಸ್ಥೆಯನ್ನು ಮಾರ್ಪಾಟು ಮಾಡುವ ಬಗ್ಗೆ ಚಿಂತನೆ ಮಾಡುತ್ತಿವೆ.

ಒಂದು ದೇಶದ ಮಾನವ ಸಂಪನ್ಮೂಲವನ್ನು ಇಂದಿನ ಉದ್ಯೋಗದ ಮಾರುಕಟ್ಟೆಯಲ್ಲಿ ಉದ್ಯೋಗವನ್ನು ಗಿಟ್ಟಿಸಿಕೊಳ್ಳುವಂತೆ ಹಾಗೂ ಗುಣಮಟ್ಟದ ಜ್ಞಾನವನ್ನು ಪಡೆದುಕೊಳ್ಳುವಂತೆ ತಯಾರಿಸಬೇಕು. ಅದು ಉನ್ನತ ಶಿಕ್ಷಣದ ಮೇಲೆ ಅವಲಂಬನೆಯಾಗಿದೆ.

ಇಂದು ಭಾರತದಲ್ಲಿ, ವಿಶ್ವವಿದ್ಯಾನಿಲಯ ಶಿಕ್ಷಣವು ಕೌಶಲ್ಯವನ್ನು ಪಡೆಯದ ಪದವಿ ಮತ್ತು ಸ್ನಾತಕೋತ್ತರ ಪದವೀಧರರನ್ನು ಉತ್ಪಾದಿಸುತ್ತಿದೆ. ೧೮೫೭ರ ಕಾಲದಿಂದ ಇಂದಿನವರೆಗೆ ವಿಶ್ವವಿದ್ಯಾನಿಲಯ ಶಿಕ್ಷಣ ವ್ಯವಸ್ಥೆ ಅದೇ ಹಾದಿಯಲ್ಲಿ ಸಾಗುತ್ತಿದೆ. ಆದರೆ ಇಂದಿನ ಶಿಕ್ಷಣ ವ್ಯವಸ್ಥೆ ಕಳೆದ ದಶಕಗಳಿಗಿಂತ ಭಿನ್ನವಾಗಿದೆ. ಉನ್ನತ ಶಿಕ್ಷಣವು ಈ ಬದಲಾಗುತ್ತಿರುವ ಪರಿಸ್ಥಿತಿಗೆ ತಕ್ಕಂತೆ ಮಾರ್ಪಾಡಾಗುವುದರಲ್ಲಿ ವಿಫಲವಾಗಿದೆ.

ಕಳೆದ ಹಲವಾರು ವರ್ಷಗಳಲ್ಲಿ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳ ಬೆಳವಣಿಗೆ ಅಗಾಧ ಪ್ರಮಾಣದಲ್ಲಿ ಆಗಿದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಭಾರತದಲ್ಲಿ ೨೭೮ ವಿಶ್ವ ವಿದ್ಯಾನಿಲಯಗಳು, ೧೧,೦೦೦ ಕಾಲೇಜುಗಳು, ೩,೪೨ ಲಕ್ಷ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ನೋಂದಣಿ ಸುಮಾರು ೭.೫ ಮಿಲಿಯನ್ ಆಗಿದೆ. ಅಮೆರಿಕಾವನ್ನು ಬಿಟ್ಟರೆ, ಭಾರತ ಪ್ರಪಂಚದ ಎರಡನೆಯ ಅತಿ ದೊಡ್ಡ ಉನ್ನತ ಶಿಕ್ಷಣದ ವ್ಯವಸ್ಥೆಯನ್ನು ಹೊಂದಿರುವ ದೇಶವಾಗಿದೆ.

ಆದರೆ ಭಾರತದಲ್ಲಿ ಸಾಮಾನ್ಯ ಶಿಕ್ಷಣದ ಕೋರ್ಸುಗಳು, ಕೌಶಲ್ಯವುಳ್ಳ ಶ್ರಮಿಕರನ್ನು ಅಥವಾ ಬದಲಾದ ಪರಿಸ್ಥಿತಿಗೆ ತಕ್ಕಂತೆ ಅಗತ್ಯವಾದ ಜ್ಞಾನವುಳ್ಳ ಯುವಕ ಯುವತಿಯರನ್ನು ತಯಾರು ಮಾಡುತ್ತಿಲ್ಲ. ಅಂದರೆ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಹಿನ್ನೆಲೆಯಲ್ಲಿ ಬೇಕಾಗುವ ಮಾನವ ಸಂಪನ್ಮೂಲವನ್ನು ಉತ್ಪಾದಿಸುವಲ್ಲಿ ವಿಫಲವಾಗಿದೆ. ಸಾಮಾನ್ಯ ಶಿಕ್ಷಣದ ಕೋರ್ಸುಗಳನ್ನು ಸಾಂಪ್ರದಾಯಿಕ ಮನೋಭಾವದ ದೃಷ್ಟಿಯಲ್ಲಿ ನಿರ್ಧರಿಸಲಾಗುತ್ತಿದೆ ಹಾಗೂ ಅಸಾಮ್ಯತೆಯನ್ನು ಮೈಗೂಡಿಸಿಕೊಂಡು ಬದಲಾದ ಪರಿಸ್ಥಿತಿಗೆ ತಕ್ಕಂತೆ ಬದಲಾವಣೆಯನ್ನು ಹೊಂದುವ ಗುಣವನ್ನು ಹೊಂದಿಲ್ಲ. ಸಾರ್ವಜನಿಕ ಅಭಿಪ್ರಾಯವು ಈಗ ಕಾಲೇಜುಗಳಲ್ಲಿ ನೀಡುತ್ತಿರುವ ಕೋರ್ಸುಗಳಲ್ಲಿರುವ ಪಠ್ಯಕ್ರಮವು ಭವಿಷ್ಯದ ಉದ್ಯೋಗದಾತರಿಗೆ ಬೇಕಾಗುವ ಕೌಶಲ್ಯ ಮತ್ತು ಸಾಮರ್ಥ್ಯವನ್ನು ಪಡೆದುಕೊಳ್ಳುವುದಕ್ಕೆ ಸಹಾಯಕವಾಗಿಲ್ಲ ಎಂಬುದಾಗಿದೆ.

ಇದು ಸಾಮಾನ್ಯ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟವರೆಲ್ಲರ ಕಾಳಜಿಯೂ ಆಗಿದೆ. ಈಗ ವಿಶ್ವವಿದ್ಯಾನಿಲಯಗಳು ೨೧ನೆಯ ಶತಮಾನದ ಆವಶ್ಯಕತೆಗಳಿಗೆ ಸರಿಹೊಂದುವಂತಹ ಶೈಕ್ಷಣಿಕ ಪಠ್ಯಕ್ರಮವನ್ನು ಹೇಗೆ ಮರುವಿನ್ಯಾಸಗೊಳಿಸಬೇಕು ಮತ್ತು ಅಂತರ ಶಿಸ್ತೀಯ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸುವಲ್ಲಿ ಆವಿಷ್ಕಾರ ಮಾಡುವುದರ ಕಡೆಗೆ ಗಮನಹರಿಸಬೇಕಾಗಿದೆ.

ಮೊದಲು ವಿಶ್ವವಿದ್ಯಾನಿಲಯಗಳು ಯಾವ ಅಂಶಗಳ ಕಾರಣದಿಂದಾಗಿ ಉನ್ನತ ಶಿಕ್ಷಣದ ಪರಿಸ್ಥಿತಿ ಹದಗೆಡುತ್ತಿದೆ ಹಾಗೂ ಗುಣಮಟ್ಟ ಕುಸಿಯುತ್ತಿದೆ ಎಂಬುದನ್ನು ಗುರುತಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಈ ನಿಟ್ಟಿನಲ್ಲಿ ವಿಶ್ವ ವಿದ್ಯಾನಿಲಯಗಳು ಈ ಕೆಳಗೆ ಕಾಣಿಸಿರುವ ಅಂಶಗಳನ್ನು ಅನುಷ್ಠಾನ ಮಾಡುವುದಕ್ಕೆ ಪ್ರಯತ್ನ ಮಾಡಬೇಕು :

- ವಿಶ್ವವಿದ್ಯಾನಿಲಯಗಳು ಮಾರುಕಟ್ಟೆಗೆ ಅನುಗುಣವಾದ ಪಠ್ಯಕ್ರಮವನ್ನು ವಿನ್ಯಾಸ ಗೊಳಿಸಬೇಕು.
- ಸಮಾಜದ ಆವಶ್ಯಕತೆಗೆ ತಕ್ಕಂತೆ ಯುಕ್ತ ಸಂಶೋಧನೆಯನ್ನು ಕೈಗೊಳ್ಳುವುದು.
- ಅದಕ್ಷ ಶಿಕ್ಷಕರ ಬದಲಾಗಿ ದಕ್ಷ ಶಿಕ್ಷಕರನ್ನು ತರುವುದು.
- ಸಮಗ್ರ ಮತ್ತು ನಿರಂತರ ಮೌಲ್ಯಮಾಪನ ವ್ಯವಸ್ಥೆ ತರುವುದು. ಜೊತೆಗೆ ಕ್ರೆಡಿಟ್ ವ್ಯವಸ್ಥೆಯ ಅಳವಡಿಕೆ.
- ಪ್ರತಿಭಾವಂತ ಹಾಗೂ ಉನ್ನತ ಜ್ಞಾನವನ್ನು ಹೊಂದಿರುವಂತಹ ಶಿಕ್ಷಕರ ನೇಮಕ.
- ಮೂಲಭೂತ ಸೌಕರ್ಯಗಳಾದ ಉತ್ತಮ ಗ್ರಂಥಾಲಯ ಹಾಗೂ ಪ್ರಯೋಗಾಲಯಗಳಲ್ಲಿ ಆಧುನಿಕ ಸೌಕರ್ಯಗಳನ್ನು ಒದಗಿಸಿಕೊಡುವುದು.
- ಶಿಕ್ಷಕರಿಗೆ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ವಿವಿಧ ರೀತಿಯ ತರಬೇತಿಯನ್ನು ನೀಡುವುದು.

◆ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಬೋಧನಾ ಕೌಶಲ್ಯಗಳನ್ನು ರೂಢಿಸಿಕೊಳ್ಳಲು ಪಠ್ಯಕ್ರಮದ ಅಳವಡಿಕೆ.

ನ್ಯಾಕ್ (NAAC) ನಿಂದ ಮಾನ್ಯತೆ ನೀಡಲ್ಪಟ್ಟ ಕಾಲೇಜು, ಮತ್ತೊಂದು ಮಾನ್ಯ ಮಾಡಲ್ಪಟ್ಟ ಕಾಲೇಜಿನ ವಿದ್ಯಾರ್ಥಿಗಳಿಗೆ, ಆ ಕಾಲೇಜಿನಲ್ಲಿ ಇಲ್ಲದ ಕೋರ್ಸಿಗೆ ಪ್ರವೇಶ ಪಡೆಯಲು ಅನುಮತಿ ನೀಡಬೇಕು. ಉದಾಹರಣೆಗೆ ಇತಿಹಾಸದ ಪದವಿಯನ್ನು ಮಾಡುತ್ತಿರುವ "ಎ"ಕಾಲೇಜಿನ ವಿದ್ಯಾರ್ಥಿಗೆ "ಬಿ" ಕಾಲೇಜಿನ ವಿಶೇಷ ಕೋರ್ಸಿನ ಪತ್ರಿಕೆಯಾದ ಪ್ರಾಚ್ಯ ಶಾಸ್ತ್ರ ಅಥವಾ ವಸ್ತು ಸಂಗ್ರಹಾಲಯದ ನಿರ್ವಹಣಾ ಪತ್ರಿಕೆಯನ್ನು ತೆಗೆದುಕೊಳ್ಳಲು ಅನುಮತಿ ನೀಡಬೇಕು. "ಬಿ" ಕಾಲೇಜಿನಲ್ಲಿ ವಿದ್ಯಾರ್ಥಿ ತೆಗೆದುಕೊಂಡಿರುವ ಕ್ರೆಡಿಟನ್ನು "ಎ"ಕಾಲೇಜಿನ ವಾರ್ಷಿಕ ಫಲಿತಾಂಶವನ್ನು ಘೋಷಣೆ ಮಾಡುವಾಗ ಗಣನೆಗೆ ತೆಗೆದುಕೊಳ್ಳಬೇಕು. ಇದು ಅಪಾರ ಹಣ ಮತ್ತು ಸಮಯದ ಉಳಿತಾಯ ಮಾಡುವುದರ ಜೊತೆಗೆ ವಿದ್ಯಾರ್ಥಿಯ ಅಭಿರುಚಿ, ಆಸಕ್ತಿಗೆ ಅನುಗುಣವಾದ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇದರಿಂದ ಶೈಕ್ಷಣಿಕ ಔನ್ನತ್ಯ ಸಾಧಿಸಿ ಆರ್ಥಿಕ ತೊಡಕನ್ನು ನಿವಾರಿಕೊಳ್ಳಬಹುದಾಗಿದೆ.

ಇಂದಿನ ಉನ್ನತ ಶಿಕ್ಷಣವನ್ನು, ಉದ್ಯೋಗ ಅರಸುವವರಿಗೆ ಉದ್ಯೋಗ ಪಡೆದು ಕೊಳ್ಳುವ ಹಾಗೂ ಅವರಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ಹಾಗೆ ಮಾಡುವುದು ಅಂತಿಮ ಗುರಿಯಾಗುವಂತೆ ಮಾಡಬೇಕಾಗಿದೆ. ಉದ್ಯೋಗವನ್ನು ಅರಸುವವರು ಮಾರುಕಟ್ಟೆಯ ಆವಶ್ಯಕತೆಗೆ ತಕ್ಕಂತೆ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವಂತೆ ಮಾಡಬೇಕು. ಆಗ ಮಾತ್ರ ಉನ್ನತ ಶಿಕ್ಷಣ ತನ್ನ ಪ್ರಾಮುಖ್ಯವನ್ನು ಉಳಿಸಿಕೊಳ್ಳಬಲ್ಲದು. ಈ ಕಾರ್ಯ ಇಂದಿನ ದಿನಗಳಲ್ಲಿ ಆಗಬೇಕಾದ ಕೆಲಸ. ಶಿಕ್ಷಣ ತಜ್ಞರು, ಶೈಕ್ಷಣಿಕ ಆಡಳಿತಗಾರರು, ವಿದ್ವಾಂಸರುಗಳು ಈ ದಿಸೆಯಲ್ಲಿ ಚಿಂತನೆ ಮಾಡಿ, ಪಠ್ಯಕ್ರಮದ ಮರುವಿನ್ಯಾಸ ಮತ್ತು ಯಾವ ವಿಧದ ಶಿಕ್ಷಣವನ್ನು ಪದವಿ ಪಡೆಯಬಯಸುವವರಿಗೆ ನೀಡಬೇಕು ಎಂಬುದರ ಬಗ್ಗೆ ಗಮನಹರಿಸಬೇಕು.

ಈಸೂರು ದುರಂತ : ಒಂದು ಮರೆಯಲಾಗದ ಐತಿಹಾಸಿಕ ಘಟನೆ

ಕೆ.ಎಂ. ಮಹದೇವಸ್ವಾಮಿ

ಭಾರತ ಸ್ವಾತಂತ್ರ್ಯ ಚಳವಳಿಯು ಇತಿಹಾಸದಲ್ಲಿ ಒಂದು ಪ್ರಮುಖ ಘಟನೆಯಾಗಿದೆ. ಚಳವಳಿಯು ತನ್ನ ಬೆಳವಣಿಗೆಯ ಕಾಲದಲ್ಲಿ ಅನೇಕ ಏಳು-ಬೀಳುಗಳನ್ನು ಕಂಡಿತು. ಭಾರತದ ಸ್ವತಂತ್ರ ಚಳವಳಿಯಲ್ಲಿ ಸಿಪಾಯಿದಂಗೆ ಅಸಹಕಾರ ಚಳವಳಿ, ಭಾರತಬಿಟ್ಟು ತೊಲಗಿ ಚಳವಳಿ ಪ್ರಮುಖ ಘಟನೆಗಳಾಗಿವೆ. ಅದೇ ರೀತಿ ಕರ್ನಾಟಕದಲ್ಲಿ ಜರುಗಿದ ಘಟನೆಗಳು ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ಅವುಗಳಲ್ಲಿ ಪ್ರಮುಖ ವಾದುದ್ದು ಈಸೂರು ಘಟನೆ ಅಥವಾ ದುರಂತ.

"ಭಾರತವನ್ನು ಬಿಟ್ಟು ತೊಲಗಿ" ಎಂಬ ಚಳವಳಿ ಮೈಸೂರು ಸಂಸ್ಥಾನದಲ್ಲಿ ಉಗ್ರರೀತಿಯಲ್ಲಿ ನಡೆದುದ್ದಕ್ಕೆ ಸಾಕ್ಷಿಯಾಗಿ ಈಸೂರು ಘಟನೆ ಇತಿಹಾಸ ಪ್ರಸಿದ್ಧವಾಗಿದೆ. ಇಲ್ಲಿ ನಡೆದ ಘಟನೆ ಮತ್ತು ಸರ್ಕಾರದ ದಮನಕಾರಿ ನೀತಿಯನ್ನು ನೋಡಿದವರು ಅದನ್ನು "ಮೈಸೂರು ಜಲಿಯನ್ ವಾಲಾ ಬಾಗ್" ಎಂದು ಕರೆದಿದ್ದಾರೆ.[೧] ಈಸೂರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಐತಿಹಾಸಿಕ ಹಿನ್ನೆಲೆಯುಳ್ಳ ಗ್ರಾಮ. ಇದು ಶಿವಮೊಗ್ಗದಿಂದ ೧೧ ಕಿ.ಮೀ. ದೂರದಲ್ಲಿದ್ದು ಅಂದು ಉತ್ತಮರಸ್ತೆ ಮತ್ತು ಸೌಲಭ್ಯಗಳನ್ನು ಹೊಂದಿರಲಿಲ್ಲ. ಆದರೂ ಇದು ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿಯಲ್ಲಿ ಮರೆಯಲಾಗದ ಒಂದು ಗ್ರಾಮವಾಗಿದೆ. ಬೇರೆ ಸ್ಥಳಗಳಲ್ಲಿ ನಡೆದಂತೆ ಸ್ವಾತಂತ್ರ್ಯ ಹೋರಾಟದ ಚಳವಳಿಯು ಅಲ್ಲಿಯೂ ನಡೆದು "ಭಾರತವನ್ನು ಬಿಟ್ಟು ತೊಲಗಿ" ಎಂಬ ಚಳವಳಿಯು ಬಿರುಸಾಗಿ ಸಾಗಿ ಉಗ್ರರೂಪವನ್ನು ತಾಳಿತು. ೧೯೪೨ರ ಆಗಸ್ಟ್ ೯ ಭಾರತದ ಇತಿಹಾಸದಲ್ಲಿ ಮರೆಯಲಾಗದ ದಿನ. 'ಕ್ವಿಟ್ ಇಂಡಿಯಾ, ಚಲೇ ಜಾವ್, ಭಾರತವನ್ನು ಬಿಟ್ಟು ತೊಲಗಿ' ಈ ಘೋಷಣೆಗಳು ರೂಪುಗೊಂಡ ದಿನ ಗಾಂಧೀಜಿಯವರ "ಮಾಡು ಇಲ್ಲವೆ ಮಡಿ" ಎಂಬ ಘೋಷಣೆ ಈಸೂರಿನ ಜನತೆಯ ಮೇಲೆ ಪ್ರಭಾವ ಬೀರಿತು.

ಈಸೂರಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರು ಮೆರವಣಿಗೆಯನ್ನು ನಡೆಸಿದರು. ೧೯೪೨ರ ಆಗಸ್ಟ್ ೨೪ ರಂದು ನಡೆದ ಮೆರವಣಿಗೆಯ ನಂತರ ಸಭೆಯಲ್ಲಿ "ಶಾಲೆಗಳಿಗೆ ಮಕ್ಕಳನ್ನು ಕಳುಹಿಸಬಾರದು. ಗ್ರಾಮಕ್ಕೆ ಬರುವ ಸರ್ಕಾರಿ ಅಧಿಕಾರಿಗಳಿಗೆ ಸಹಾಯ ಮಾಡಬಾರದು ಮತ್ತು ಯಾವುದೇ ತೆರಿಗೆಯನ್ನು ಕೊಡಬಾರದೆಂದು ತೀರ್ಮಾನಿಸಲಾಯಿತು. ಇಡೀ ಈಸೂರು ಈ ಚಳವಳಿಯಲ್ಲಿ ಭಾಗವಹಿಸಿ ಜನರಿಗೆಲ್ಲ ಬಂಧ ವಿಮೋಚನೆಗಾಗಿ ತಮ್ಮ ಕೈಲಾದ ಸೇವೆಯನ್ನು ಸಲ್ಲಿಸಲು ಪ್ರತಿಜ್ಞೆಯನ್ನು ಸ್ವೀಕರಿಸಿದರು[೨] ಗ್ರಾಮದ ಯುವಕರೆಲ್ಲರೂ ಗಾಂಧೀಟೋಪಿ ಧರಿಸಿ, ರಾಷ್ಟ್ರಧ್ವಜವನ್ನು ಹಿಡಿದು ಸಭೆಗಳನ್ನು ನಡೆಸುತ್ತಿದ್ದರು. ನಂತರ ತಂತಿ ಕತ್ತರಿಸುವುದು, ಮೋರಿ ಸೇತುವೆಗಳನ್ನು ಕೆಡಹುವುದು, ಶಾಲೆ ಮತ್ತು ಮದ್ಯದ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸುತ್ತಿದ್ದರು. ನಂತರ ೨೭ ರಂದು ಸಭೆಯನ್ನು ಸೇರಿ ತಮ್ಮ ಗ್ರಾಮ ಸ್ವತಂತ್ರವೆಂದು ಘೋಷಿಸಿಕೊಂಡರು.

ಗ್ರಾಮಸ್ಥರೆಲ್ಲರೂ ಸೇರಿ ಬಂದು ಸ್ವರಾಜ್ಯ ಸರಕಾರ ಸ್ಥಾಪಿಸಿ 'ಬೇಜವಾಬ್ದಾರಿ ಸರ್ಕಾರದವರು ಯಾರೂ ಬರಕೂಡದು ಬಂದರೆ ....? ಎಂಬ ಒಂದು ಫಲಕವನ್ನು ಬರೆದು ಊರಿನ ಹೆಬ್ಬಾಗಿಲಿನಲ್ಲಿ ತೂಗು ಹಾಕಿದರು. ಅದೇ ದಿನ ಪಟೇಲ್ ಮತ್ತು ಶ್ಯಾನುಭೋಗರ ದಾಖಲೆಗಳನ್ನು ಕಿತ್ತುಕೊಂಡು ಅವರಿಬ್ಬರಿಗೆ ಸಂಜೆಯವರೆಗೆ ಒಂಟಿಕಾಲ ಮೇಲೆ ನಿಲ್ಲುವ ಶಿಕ್ಷೆ ವಿಧಿಸಿದರು. ನಮ್ರತೆಯಿಂದ ನಡೆದುಕೊಳ್ಳುತ್ತೇವೆಂದು ಮುಚ್ಚಳಿಕೆಯನ್ನು ಬರೆದುಕೊಟ್ಟ ನಂತರ ಅವರನ್ನು ಸಾಯಂಕಾಲ ಬಿಡುಗಡೆ ಮಾಡಿದರು. ಇದಲ್ಲದೆ ಗ್ರಾಮದ ವೀರಭದ್ರ ದೇವಾಲಯದ ಗೋಡೆಯ ಮೇಲೆ "ತೆರಿಗೆಯನ್ನು ನೀಡುವುದಿಲ್ಲ. ಅಂಚೆ ಕಛೇರಿಗೆ ಬೆಂಕಿ ಹಚ್ಚಲಾಗುವುದು ಮತ್ತು ಸರ್ಕಾರಿ ಅಧಿಕಾರಿಗಳನ್ನು ಕೊಲ್ಲಲಾಗುವುದು" ಎಂದು ಬರೆದಿದ್ದರು. ೧೯೪೨ರ ಸೆಪ್ಟಂಬರ್ ೧೭ ರಂದು ಗ್ರಾಮಕ್ಕೆ ಭೇಟಿ ನೀಡಿದ್ದ ಇಬ್ಬರು ಪೊಲೀಸರ ಟೋಪಿಯನ್ನು ತೆಗೆದು ಗಾಂಧಿ ಟೋಪಿಯನ್ನು ಹಾಕಿ ಮೆರವಣಿಗೆಯಲ್ಲಿ ಅವರನ್ನು ಭಾಗವಹಿಸುವಂತೆ ಮಾಡಿದರು.[೩]

ಗ್ರಾಮದ ಆಡಳಿತಕ್ಕಾಗಿ ಗ್ರಾಮದ ಜನರೆಲ್ಲ ಒಟ್ಟುಗೂಡಿ ಜಯಪ್ಪ ಎಂಬ ಬಾಲಕನನ್ನು ಅಮಲ್ದಾರ್ ಆಗಿ ನೇಮಕ ಮಾಡಿ ಅವನ ಆದೇಶದಂತೆ ಗ್ರಾಮದ ಪಟೇಲ ಮತ್ತು ಶ್ಯಾನುಭೋಗರಿಂದ ರಾಷ್ಟ್ರಧ್ವಜವನ್ನು ಹಿಡಿಸಿ ರಾಜೀನಾಮೆ ನೀಡುತ್ತೇವೆಂದು ಪ್ರಮಾಣ ಮಾಡಿಸಲಾಯಿತು[೪]. ಈ ಪ್ರಕರಣವನ್ನು ಮತ್ತು ತಮಗೆ ಆದ ಈ ಅವಮಾನವನ್ನು ತಿಳಿಸಲು ಇವರು ಶಿಕಾರಿಪುರಕ್ಕೆ ತಲುಪುವ ವೇಳೆಗೆ ತಹಸೀಲ್ದಾರ್ ಅವರು ತಮ್ಮ ಸಿಬ್ಬಂದಿ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್, ದಫೇದಾರ್ ಮತ್ತು ಮೂರು ಜನ ಪೊಲೀಸರನ್ನೊಳಗೊಂಡ ಎಂಟು ಜನರು ಈಸೂರಿಗೆ ಭೇಟಿ ನೀಡಿ ಹೆಬ್ಬಾಗಿಲಿನಲ್ಲಿ ನೇತುಹಾಕಿದ್ದ ಫಲಕವನ್ನು ಕಿತ್ತು ಹಾಕಿ ವೀರಭದ್ರ ದೇವಾಲಯದಲ್ಲಿ

ಹಾರಿಸಿದ್ದ ತ್ರಿವರ್ಣಧ್ವಜವನ್ನು ಕೆಡವಿದರು. ಇದನ್ನು ಗ್ರಾಮದ ಬಾಲಕನೊಬ್ಬನು ನೋಡಿ ಗ್ರಾಮಸ್ಥರಿಗೆ ವಿಷಯ ತಲಪಿಸಿದನು. ಇದರಿಂದ ಉದ್ರಿಕ್ತರಾದ ಜನ ಆಯುಧಗಳ ಸಮೇತರಾಗಿ ಅಧಿಕಾರಿಗಳ ಬರುವಿಕೆಗಾಗಿ ಕಾಯ್ದಿದ್ದು ಗ್ರಾಮ ಕಛೇರಿಯ ಮುಂದೆ ಬಂದಾಗ ಅವರನ್ನು ಸುತ್ತುವರಿದರು. ಅಧಿಕಾರಿಗಳು ಧರಿಸಿದ್ದ ಹ್ಯಾಟ್‌ಗಳನ್ನು ತೆಗೆದು ಹಾಕಿ ಗಾಂಧೀ ಟೋಪಿಯನ್ನು ಧರಿಸಿ ರಾಷ್ಟ್ರಧ್ವಜಕ್ಕೆ ವಂದಿಸಬೇಕೆಂದು ಬಲಾತ್ಕರಿಸಿದಾಗ ಅದಕ್ಕೆ ಅಧಿಕಾರಿಗಳು ಒಪ್ಪಲಿಲ್ಲ. ಅನಂತರ ಅಧಿಕಾರಿಗಳು ಕೋಪಗೊಂಡು ಗುಂಡು ಹಾರಿಸಿದರು. ಆಗ ಜನರಿಗೂ ಮತ್ತು ಅಧಿಕಾರಿಗಳಿಗೂ ಸಮರವೇ ನಡೆಯಿತು. ಆಗ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಮತ್ತು ತಹಸೀಲ್ದಾರರಿಬ್ಬರೂ ಮರಣ ಹೊಂದಿದ್ದರು ಮತ್ತು ಅನೇಕರು ಗಾಯಗೊಂಡರು. ಮಾರನೇದಿನ ಶಿವಮೊಗ್ಗದ ಜಿಲ್ಲಾಧಿಕಾರಿಗಳು ಹೆಚ್ಚಿನ ಪೊಲೀಸ್ ಸಿಬ್ಬಂದಿ ಹಾಗೂ ಸೈನ್ಯದೊಡನೆ ಈಸೂರಿಗೆ ಭೇಟಿ ನೀಡಿದಾಗ ಗ್ರಾಮದ ಜನರೆಲ್ಲ ಭಯಭೀತರಾಗಿ ಮುದುಕರು ಮತ್ತು ಮಹಿಳೆಯರನ್ನು ಹೊರತುಪಡಿಸಿ ಉಳಿದವರು ಪಕ್ಕದ ಕಾಡು ಮತ್ತು ಗುಡ್ಡಗಳಲ್ಲಿ ತಲೆ ಮರೆಸಿಕೊಂಡು ರಾತ್ರಿ ವೇಳೆಯಲ್ಲಿ ಗ್ರಾಮಕ್ಕೆ ಬರಲಾರಂಭಿಸಿದರು. ಇದರಿಂದ ಕೋಪಗೊಂಡ ಅಧಿಕಾರಿಗಳು ಕೈಗೆ ಸಿಕ್ಕಿದ ಜನರಿಗೆಲ್ಲ ಹಿಂಸೆ ಕೊಟ್ಟು ಸಿಕ್ಕಿದ್ದನ್ನು ದೋಚಿ ಸಿಕ್ಕಿದವರನ್ನು ದಸ್ತಗಿರಿ ಮಾಡಿ ಈಸೂರಿನ ಜನರಿಗೆ ಯಾರೂ ಆಶ್ರಯ ಕೊಡದಂತೆ ಮಾಡಿ ಆಶ್ರಯ ಕೊಟ್ಟವರಿಗೆ ಚಿತ್ರಹಿಂಸೆಯನ್ನು ನೀಡಿದರು. ಈ ಸಂದರ್ಭದಲ್ಲಿ ಮಹಿಳೆಯರನ್ನು ಹಿಂಸಿಸಲಾಯಿತು.[೫]

ಈ ಪ್ರಕರಣದಲ್ಲಿ ಭಾಗವಹಿಸಿದ್ದ ೪೧ ಜನರನ್ನು ಬಂಧಿಸಿ ಕೋರ್ಟಿನಲ್ಲಿ ಕೇಸು ಹಾಕಿ ಇವರ ವಿರುದ್ಧ ಮೊಕದ್ದಮೆ ಹೂಡಲಾಯಿತು. ಆಗ ವಿಶೇಷ ನ್ಯಾಯಾಧೀಶರು ತನಿಖೆ ನಡೆಸಿ ೧೧ ಮಂದಿಗೆ ಮರಣದಂಡನೆಯನ್ನು ವಿಧಿಸಿ ೧೩ ಜನರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿ ೧೯೪೨ರ ಡಿಸೆಂಬರ್ ೧೨ ರಂದು ತೀರ್ಪು ನೀಡಿದರು. ನಂತರ ಸೆಷನ್ ನ್ಯಾಯಾಲಯವು ೫ ಮಂದಿಗೆ ಮರಣ ದಂಡನೆಯನ್ನು ೭ ಜನರಿಗೆ ಜೀವಾವಧಿ ಶಿಕ್ಷೆ ಹಾಗೂ ೧೭ ಜನರಿಗೆ ಕಠಿಣ ಶಿಕ್ಷೆಯನ್ನು ವಿಧಿಸಿ ಒಬ್ಬನನ್ನು ನಿರಪರಾಧಿ ಎಂದು ಬಿಡುಗಡೆ ಮಾಡಿತು. ಈ ಪ್ರಕರಣ ರಾಜ್ಯಾದ್ಯಂತ ರಾಜಕೀಯ ಪ್ರಭಾವವನ್ನು ಬೀರಿತು. ಶಿಕ್ಷೆಗೊಳಗಾದವರ ಪರ ಉಚ್ಚನ್ಯಾಯಾಲಯದಲ್ಲಿ ಮನವಿ ಸಲ್ಲಿಸಿ ಈಸೂರಿನ ಗ್ರಾಮಸ್ಥರು ಸ್ವಾತಂತ್ರ್ಯ ಹೋರಾಟಗಾರರೇ ವಿನಃ ಕೊಲೆಗಡುಕರಲ್ಲ. ಆದ್ದರಿಂದ ಅವರ ಮೇಲಿನ ಶಿಕ್ಷೆಯನ್ನು ರದ್ದುಗೊಳಿಸಿ ಅವರನ್ನು ಆಪಾದನೆಯಿಂದ ಮುಕ್ತಗೊಳಿಸಬೇಕೆಂದು ಕೇಳಲಾಯಿತು. ಆದರೆ ಈ ಮನವಿಯನ್ನು ತಿರಸ್ಕರಿಸಿದ ಮುಖ್ಯ ನ್ಯಾಯಾಧೀಶರು ಗುರಪ್ಪ, ಮಲ್ಲಪ್ಪ, ಸೂರ್ಯನಾರಾಯಣಾಚಾರ್, ಹಾಲಪ್ಪ ಮತ್ತು ಶಂಕರಪ್ಪ ಎಂಬ ಐದು ಜನರಿಗೆ ಮರಣದಂಡನೆಯನ್ನು ಎತ್ತಿಹಿಡಿದು ೨೮ ಜನರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿ ಉಳಿದವರನ್ನು ವಿಮುಕ್ತಿಗೊಳಿಸಿದರು. ನಂತರ ರಾಜ್ಯದ ವಿವಿಧ

ಭಾಗಗಳಿಂದ ಸಾವಿರಾರು ಜನರು ಈ ಐದು ಜನರ ಜೀವವನ್ನು ಉಳಿಸಬೇಕೆಂದು ಬ್ರಿಟಿಷ್ ರೆಸಿಡೆಂಟ್‌ರವರಿಗೆ ಮನವಿ ಸಲ್ಲಿಸಿದರು. ಅವರು ಇದನ್ನು ತಿರಸ್ಕರಿಸಿದರು.[೬] ತರುವಾಯ ಮಹಾರಾಜರಿಗೂ ಸಾವಿರಾರು ಜನರು ಈ ಐದು ಜನರಿಗೆ ಜೀವದಾನ ಮಾಡಬೇಕೆಂದು ಮನವಿ ಸಲ್ಲಿಸಿದ್ದರು. ಯಾವುದೇ ಪ್ರಯೋಜನವಾಗದೆ ಅವರನ್ನು ೧೯೪೩ರ ಮಾರ್ಚ್ ೮, ೯ ಮತ್ತು ೧೦ ರಂದು ಬೆಂಗಳೂರು ನಗರದ ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ಈ ೩ ದಿನಗಳು ಇಡೀ ಸಂಸ್ಥಾನದ ಉಳಿದ ಸತ್ಯಾಗ್ರಹಿಗಳೆಲ್ಲರೂ ಉಪವಾಸ ಮತ್ತು ಪ್ರಾರ್ಥನೆಗಳನ್ನು ಮಾಡಿ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು.

ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಹಾಲಮ್ಮ, ಪಾರ್ವತಮ್ಮ, ರುದ್ರಮ್ಮರೆಂಬ ಮೂವರು ಮಹಿಳೆಯರನ್ನು ಹಾಗೂ ಲಿಂಗಪ್ಪ, ದುರ್ಗೋಜಿ, ಗುರು ಶಾಂತಪ್ಪ ಮುಂತಾದ ೮ ಜನರನ್ನು ೧೯೪೬ರ ಅಕ್ಟೋಬರ್ ೨೧ರಂದು ಬಿಡುಗಡೆ ಮಾಡಲಾಯಿತು. ಹೀಗೆ ಈಸೂರು ಘಟನೆ ಮೈಸೂರಿನ ಸ್ವಾತಂತ್ರ್ಯ ಚಳವಳಿಯ ಇತಿಹಾಸದಲ್ಲಿ ಮರೆಯಲಾಗದ ಐತಿಹಾಸಿಕ ಘಟನೆಯಾಗಿ ಉಳಿದಿದೆ.

ಅಡಿ ಟಿಪ್ಪಣಿಗಳು

೧ *ಕೆ. ವೀರತ್ತಪ್ಪ, ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ. ೧೯೭೭, ಪು ೧೦೫.*

೨ *Confidential Report by the Minister for Finance and Revenue to the Dewan oct. 30 1942. Confidential Records Home Department P. 3*

೩ *Suryanatha Kamath, op Cit P. 125*

೪ *Report by the minister for finance and Revenue to Dewan Oct. 3, 1942. P. 3*

೫ *From IGP to the Chief Secretary DC.No. 63-42-43 Oct 25, 1942. confidential Records.*

೬ *ಟಿ.ಡಿ. ದೇವೇಗೌಡ- ಮೈಸೂರು ಸಂಸ್ಥಾನದ ಆಡಳಿತ ವ್ಯವಸ್ಥೆ ಮತ್ತು ರಾಜಕೀಯ. ಪುಟ ೧೯೬.*

ಭಾಷಾ ವೈಜ್ಞಾನಿಕ ಕ್ಷೇತ್ರಕಾರ್ಯದಲ್ಲಿ ನಿರೂಪಕರ ಪಾತ್ರ

ಡಾ. ಬಿ.ಕೆ. ರವೀಂದ್ರನಾಥ್

ಕ್ಷೇತ್ರ ಕಾರ್ಯದಲ್ಲಿ 'ಸಾಮಗ್ರಿ ಸಂಗ್ರಹ' ಒಂದು ಮಹತ್ವದ ಅಂಶ. ಏಕೆಂದರೆ ಉತ್ತಮ ಸಾಮಗ್ರಿಗಳ ಆಧಾರದ ಮೇಲೆಯೇ ಸಂಶೋಧಕನ ಸಂಶೋಧನೆಯ ಫಲ ಅವಲಂಬಿಸಿರುತ್ತದೆ. ಸಂಶೋಧನೆ ವಿಶ್ವಸನೀಯತೆ ಹಾಗೂ ಸಮಂಜಸತೆಯನ್ನು ಪಡೆಯಬೇಕಾದರೆ ಸಂಶೋಧಕ ಬೇರೆ ಬೇರೆ ಸಾಧನ ತಂತ್ರಗಳನ್ನು ಆಯಾ ಸಂದರ್ಭಕ್ಕೆ ತಕ್ಕಂತೆ ಬಳಸಿಕೊಳ್ಳಬೇಕಾಗಿರುತ್ತದೆ. ಅವುಗಳಲ್ಲಿ ನಿರೂಪಕರ ಆಯ್ಕೆ ಬಹಳ ಮುಖ್ಯವಾದದ್ದು. ಕಾರಣ ಕ್ಷೇತ್ರ ಕಾರ್ಯದಲ್ಲಿ ನಿರೂಪಕರು ಸಮುದಾಯದ ಒಳಗಿದ್ದು ಆ ಸಮುದಾಯದ ಪ್ರತಿನಿಧಿಗಳಾಗಿರುತ್ತಾರೆ. ಅವರು ಸಮುದಾಯದ ಮತ್ತು ಸಂಶೋಧಕರ ನಡುವೆ ಸೇತುವೆಯಾಗಿ ಮಾಹಿತಿ ಸಂಗ್ರಹಣೆಯಲ್ಲಿ ಸಂಶೋಧಕನಿಗೆ ನೆರವಾಗುತ್ತಾರೆ.

ಭಾಷಾ ಸಾಮಗ್ರಿಗಳನ್ನು ಸಂಗ್ರಹಿಸುವಾಗ ನಿರೂಪಕರು ಮಹತ್ವದ ಪಾತ್ರ ವಹಿಸುತ್ತಾರೆ. ಭಾಷಾ ಸಾಮಗ್ರಿಗಳನ್ನು ಅವಲೋಕಿಸುವಾಗ, ವಿಶ್ಲೇಷಿಸುವಾಗ ಅನೇಕ ದೋಷಗಳಾಗುವುದುಂಟು. ಉದಾಹರಣೆಗೆ ಧ್ವನಿಗಳಲ್ಲಾಗುವ ವ್ಯತ್ಯಾಸ, ಅವಿಭಾಜಕ ಗಳಿಂದಾಗುವ ವ್ಯತ್ಯಾಸ, ಕೇಳುವಿಕೆಯಲ್ಲಾಗುವ ವ್ಯತ್ಯಾಸ, ಅವಿಭಾಜಕಗಳಿಂದಾಗುವ ವ್ಯತ್ಯಾಸ, ಕೇಳುವಿಕೆಯಲ್ಲಾಗುವ ವ್ಯತ್ಯಾಸ ಮುಂತಾದುವುಗಳಿಂದಾಗಿ ಧ್ವನಿಮಾಗಳಲ್ಲಿ ಅಧಿಕ ವ್ಯತ್ಯಾಸ ಕಾಣಿಸಿಕೊಳ್ಳುತ್ತವೆ. ಇವನ್ನು ನಿವಾರಿಸಲು ಹಾಗೆಯೇ ನಿರೂಪಕರೊಡನೆ ಚರ್ಚಿಸುವಾಗ ಅವರ ಮಾತಿನ ಸರಣಿ, ಶೈಲಿ ಇವುಗಳಿಂದ ಭಾಷೆಯ ರಚನೆಗೆ ಸಂಬಂಧಿಸಿದ ವಿಷಯಗಳನ್ನು ತಿಳಿಯಲು ಸಹಾಯವಾಗುತ್ತದೆ.

ಸಂಶೋಧಕ ಭಾಷಾಸಮುದಾಯದಲ್ಲಿ ಎಲ್ಲಾ ಸದಸ್ಯರ ಜೊತೆಗೆ ಸಂಪರ್ಕ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಭಾಷಾ ಸಮುದಾಯವನ್ನು ಪ್ರತಿನಿಧಿಸುವಂಥ ಕೆಲವರ ಜೊತೆಗೆ ಮಾತ್ರ ಅವನ ಸಂಪರ್ಕವಿರಬೇಕಾಗಿರುತ್ತದೆ. ಹಾಗೆಯೇ ಒಂದು ಭಾಷಾ ಸಮುದಾಯದಲ್ಲಿ ಆ ಭಾಷೆಯನ್ನಾಡುವ ಪ್ರತಿಯೊಬ್ಬ ಸದಸ್ಯನೂ ನಿರೂಪಕನಾಗಲಾರನು. ಆದುದರಿಂದ ನಿರೂಪಕರನ್ನು ಆಯ್ಕೆ ಮಾಡುವಾಗ ಕೆಲವು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

ನಿರೂಪಕರು ಅವರ ಭಾಷೆಯನ್ನು ನಿರರ್ಗಳವಾಗಿ ಮತ್ತು ಸ್ಪಷ್ಟವಾಗಿ ಮಾತನಾಡುವವರಾಗಿರಬೇಕು ಹಾಗೂ ಉತ್ತಮ ಆರೋಗ್ಯವಂತರಾಗಿರಬೇಕು. ಅವರಿಗೆ ಸಾಮಾನ್ಯ ಜ್ಞಾನವು ಇದ್ದು ಸಂಶೋಧಕನ ಉದ್ದೇಶ ಹಾಗೂ ಪ್ರಶ್ನೆಗಳನ್ನು ತಕ್ಷಣ ಅರ್ಥ ಮಾಡಿಕೊಂಡು ಉತ್ತರಿಸುವಂತವರಾಗಿರಬೇಕು. ನಿರೂಪಕರನ್ನು ಆಯ್ಕೆ ಮಾಡಿಕೊಳ್ಳುವಾಗ ಆ ಸಮುದಾಯದ ಪ್ರಮುಖರ ಸಹಾಯ ಪಡೆಯುವುದು ಒಳ್ಳೆಯದು. ಏಕೆಂದರೆ ನಾವು ಆಯ್ಕೆ ಮಾಡಿಕೊಳ್ಳುವ ನಿರೂಪಕರ ಸಂಬಂಧ ಆ ಸಮುದಾಯದೊಂದಿಗೆ ಯಾವ ರೀತಿ ಇದೆ ಎಂದು ತಿಳಿಯುತ್ತದೆ. ನಿರೂಪಕರು ಅವರ ಭಾಷಾ ಸಮುದಾಯದ ಸಂಸ್ಕೃತಿಗೆ ಸಂಬಂಧಪಟ್ಟಂತೆ ಅನೇಕ ವಿಚಾರಗಳನ್ನು ತಿಳಿದವನಾಗಿರಬೇಕು. ಕಾರಣ, ಭಾಷೆ ಸಮಾಜದ ಬೆಳವಣಿಗೆಗೆ ಸಹಾಯಕವಾಗಿದೆಯಲ್ಲದೆ ಸಮಾಜದ ಜಾತಿ, ಧರ್ಮ, ಶಿಕ್ಷಣ, ಆಚಾರ, ವಿಚಾರ, ಜನಜೀವನ ಈ ಎಲ್ಲಾ ಅಂಶಗಳೊಡನೆ ಬೆರೆತು ಹೋಗಿದೆ. ಉದಾಹರಣೆಗೆ ಬಂಧುತ್ವದ ಮತ್ತು ಬಣ್ಣಗಳ ಬಗೆಗೆ ಒಂದು ಭಾಷಾಸಮುದಾಯದವರು ಆಡುವ ಪದಗಳ ಸಂಖ್ಯೆಗೂ ಇವುಗಳ ಬಗೆಗೆ ಇನ್ನೊಂದು ಸಮುದಾಯದವರು ಆಡುವ ಪದಗಳ ಸಂಖ್ಯೆಗೂ ವ್ಯತ್ಯಾಸವಿರುತ್ತದೆ. ಇವುಗಳ ಹಿನ್ನೆಲೆಯಲ್ಲಿಯೇ ಆಡುನುಡಿಯ ಸ್ವರೂಪವನ್ನು ಪರಿಶೀಲಿಸಬೇಕಾಗಿರುತ್ತದೆ. ಆದುದರಿಂದ ನಿರೂಪಕ ಆ ಭಾಷಾಸಮುದಾಯದ ಸಂಸ್ಕೃತಿಗೆ ಸಂಬಂಧಪಟ್ಟ ಅಂಶಗಳನ್ನು ಖಚಿತವಾಗಿ ತಿಳಿಯದಿದ್ದಲ್ಲಿ ಭಾಷಾಸಾಮಗ್ರಿ ಸಂಗ್ರಹಣೆಗೆ ಯೋಗ್ಯ ನಿರೂಪಕನಾಗಲಾರ.

ನಿರೂಪಕ ಆ ಸಮುದಾಯದಲ್ಲಿ ಬಹಳಷ್ಟು ದಿವಸಗಳ ಕಾಲ ಜೀವನ ನಡೆಸಿದ್ದವನಾಗಿರಬೇಕು. ಸಮುದಾಯದ ಸಂಪ್ರದಾಯಗಳು, ಹವ್ಯಾಸಗಳು, ಜನನ, ಮದುವೆ, ಮರಣ ಮುಂತಾದ ಸಂದರ್ಭಗಳಲ್ಲಿ ಆಚರಣೆಗೊಳ್ಳುವ ವಿಧಿ ವಿಧಾನಗಳ ಬಗೆಗೆ ಹಾಗೂ ಸಮುದಾಯದ ಸುತ್ತಮುತ್ತಲಿನ ಪರಿಸರದ ಬಗೆಗೆ ಪ್ರಾಣಿಗಳ, ಸಸ್ಯಗಳ ಹೆಸರುಗಳ ಪ್ರಕಾರಗಳು ಅವುಗಳ ಉಪಯೋಗಗಳು ನಿರೂಪಕರಿಗೆ ತಿಳಿದಿರಬೇಕು. ಇದರಿಂದ ನಮಗೆ ಬೇಕಾದ ಮಾಹಿತಿ ಪಡೆಯಲು ಸಾಧ್ಯವಾಗುತ್ತದೆ. ಕೆಲವು ವೇಳೆ ಆ ಭಾಷಾ ಸಮುದಾಯದ ಬಗೆಗೆ ಹೆಚ್ಚಿನ ವಿಚಾರಗಳನ್ನು ತಿಳಿದ ಒಬ್ಬನೂ ನಿರೂಪಕ ಸಿಗುವುದು ಕಷ್ಟಸಾಧ್ಯ. ಅಂತಹ ಸಮಯದಲ್ಲಿ ಆಯಾ ಕ್ಷೇತ್ರದಲ್ಲಿ ಪರಿಣತಿ ಹೊಂದಿದ ಅಥವಾ ಅನುಭವವಿರುವ ನಿರೂಪಕರನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಸಂಶೋಧಕ ಆರಿಸಿಕೊಳ್ಳುವ ನಿರೂಪಕರ ಸಂಖ್ಯೆ ಇಷ್ಟೇ ಇರಬೇಕೆಂದು ಯಾವುದೇ ನಿರ್ಬಂಧವಿಲ್ಲ. ಏಕೆಂದರೆ ಉಪಭಾಷಾ ವ್ಯಾಕರಣವು ಆ ಭಾಷೆಯ ರಚನೆಯನ್ನು ತೋರಿಸುವುದರಿಂದ ಅವರ ಭಾಷಾ ಸಾಮಗ್ರಿಗಳನ್ನು ಪ್ರತಿನಿಧಿಸುವಂತಹ ಅನೇಕ ನಿರೂಪಕರನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಆದರೂ ಅತಿ ಮುಖ್ಯವಾಗಿ ಇಬ್ಬರು ಅಥವಾ ಮೂವರು ಪ್ರಧಾನ ನಿರೂಪಕರನ್ನು ಆರಿಸಿಕೊಳ್ಳುವುದು ಯುಕ್ತ. ಕ್ಷೇತ್ರ ಕಾರ್ಯ

ಮುಂದುವರಿದಂತೆಲ್ಲಾ ಅನುಭವವಿರುವ ಹೆಚ್ಚು ನಿರೂಪಕರು ಬೇಕಾಗಬಹುದು. ಇಲ್ಲಿ ಸಾಮಗ್ರಿ ಸಂಗ್ರಹಕ್ಕೆ ಆರಿಸಿಕೊಂಡ ಕ್ಷೇತ್ರಕ್ಕೆ ಅನುಗುಣವಾಗಿ ಮತ್ತು ಉಪ ಭಾಷಾವಿಜ್ಞಾನ, ಸಾಮಾಜಿಕ ಭಾಷಾವಿಜ್ಞಾನದ ತತ್ವಗಳಿಗೆ ಅನುಗುಣವಾಗಿ ನಿರೂಪಕರ ಸಂಖ್ಯೆ ಇರಬೇಕಾಗುತ್ತದೆ. ಆದುದರಿಂದ ಸಾಮಗ್ರಿ ಸಂಗ್ರಹಕ್ಕೆ ಆರಿಸಿಕೊಳ್ಳಬಹುದಾದ ನಿರೂಪಕರ ಸಂಖ್ಯೆ ಇಂತಿಷ್ಟೇ ಇರಬೇಕೆಂಬ ನಿಬಂಧನೆಯೇನೂ ಇಲ್ಲ.

ಸಂಶೋಧಕ ತಾನು ಸಾಮಗ್ರಿ ಸಂಗ್ರಹಕ್ಕೆ ಆರಿಸಿಕೊಂಡ ಭಾಷಾಕ್ಷೇತ್ರದ ಸಮುದಾಯದ ವರ್ತಮಾನದ ವಿಷಯಗಳನ್ನು ತಿಳಿದ, ಸಮುದಾಯದ ಭಾಷೆಯನ್ನೇ ಪ್ರತಿನಿಧಿಸುತ್ತಿರುವ ಮಧ್ಯಮ ವಯಸ್ಸಿನ, ವಿವಿಧ ವೃತ್ತಿಯ, ಆರ್ಥಿಕವಾಗಿ, ಸಾಮಾಜಿಕವಾಗಿ ಬೇರೆ ಬೇರೆ ವರ್ಗಕ್ಕೆ ಸೇರಿದ ನಿರೂಪಕರನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ. ನಿರೂಪಕನಾಗಿ ಆರಿಸಿಕೊಳ್ಳುವ ವ್ಯಕ್ತಿ ವಯಸ್ಸಿನಲ್ಲಿ ಚಿಕ್ಕವನಾಗಿದ್ದರೆ ಉದ್ದೇಶಿತ ಸಾಮಗ್ರಿ ದೊರೆಯದೆ ಹೋಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಚಿಕ್ಕ ವಯಸ್ಸಿನ ಮಕ್ಕಳು ಪ್ರಶ್ನೆಗಳಿಗೆ ಬಹಳ ಉತ್ಸಾಹದಿಂದ ಉತ್ತರಿಸಬಹುದಾದರೂ ಆ ಭಾಷಾಕ್ಷೇತ್ರದ ಸಂಸ್ಕೃತಿಯ ಪೂರ್ಣಜ್ಞಾನ ಅದಕ್ಕಿಂತ ಹೆಚ್ಚಾಗಿ ಜೀವನಾನುಭವ ಅವರಿಗೆ ತೀರ ಕಡಿಮೆ ಇರುತ್ತದೆ. ಅವರ ಆಸಕ್ತಿ ಕೂಡ ಸ್ಥಿರವಾಗಿರುವುದಿಲ್ಲ. ಆದರೆ ಕೆಲವು ವಿಶೇಷ ಸಂದರ್ಭಗಳಲ್ಲಿ ಕ್ಷೇತ್ರಕಾರ್ಯದ ಉದ್ದೇಶಕ್ಕೆ ಅನುಗುಣವಾಗಿ ಚಿಕ್ಕವಯಸ್ಸಿನವರನ್ನೂ ಆಯ್ಕೆ ಮಾಡಿಕೊಂಡು ದತ್ತಸಂಗ್ರಹ ಮಾಡಬಹುದು.

ನಿರೂಪಕರನ್ನಾಗಿ ಆರಿಸಿಕೊಳ್ಳುವ ವ್ಯಕ್ತಿ ಮುದುಕನಾಗಿದ್ದರೆ ಅವನಿಗೆ ಸಾಕಷ್ಟು ಅನುಭವವಿದ್ದರೂ ವಯಸ್ಸಾಗಿರುವುದರಿಂದ ಜ್ಞಾಪಕಶಕ್ತಿ ಕುಂದಿರುತ್ತದೆ. ಆಸಕ್ತಿ ಕಡಿಮೆಯಾಗಿರುತ್ತದೆ. ಅಲ್ಲದೆ ಆ ಭಾಷೆಯ ಧ್ವನಿಗಳು ಸ್ಪಷ್ಟವಾಗಿ ಮೂಡಲು ಸಾಧ್ಯವಾಗುವುದಿಲ್ಲ. ಅವರು ಯಾವುದಾದರೊಂದು ಶ್ವಾಸಕೋಶಗಳ ಖಾಯಿಲೆಗೆ ತುತ್ತಾಗಿದ್ದರೆ ಇಂಥ ವ್ಯಕ್ತಿಗಳನ್ನು ನಿರೂಪಕರನ್ನಾಗಿ ಆರಿಸಿಕೊಳ್ಳುವುದು ಸೂಕ್ತವಲ್ಲ. ಆದುದರಿಂದ ಮಧ್ಯಮ ವಯಸ್ಸಿನ ಅಂದರೆ ೩೦-೪೦ ವರ್ಷಗಳ ನಡುವಿನ ವಯಸ್ಸಿನವರನ್ನು ನಿರೂಪಕರನ್ನಾಗಿ ಆರಿಸಿಕೊಳ್ಳುವುದು ಹೆಚ್ಚು ಸಹಾಯಕಾರಿ. ಕಾರಣ ಇವರಿಗೆ ಆಸಕ್ತಿ, ಜವಾಬ್ದಾರಿ, ಭಾಷೆ ಮತ್ತು ಸಂಸ್ಕೃತಿಯ ಬಗೆಗಿನ ಪೂರ್ಣವಾದ ಜ್ಞಾನವಿರುವುದರಿಂದ ಸಾಮಗ್ರಿ ಸಂಗ್ರಹಕ್ಕೆ ಮತ್ತು ವಿಶ್ಲೇಷಣೆಗೆ ಹೆಚ್ಚು ಸಹಾಯಕಾರಿ. ಕೆಲವು ವೇಳೆ ಶಿಕ್ಷಣ, ಸಂಸ್ಕೃತಿ, ಜಾತಿ, ವೃತ್ತಿ, ಇತರ ಭಾಷಾ ಪ್ರಭಾವ ಮುಂತಾದ ಕಾರಣಗಳಿಂದಾಗಿ ನಿರೂಪಕರ ಭಾಷೆಯಲ್ಲಿ ಹೆಚ್ಚು ವ್ಯತ್ಯಾಸ ಕಾಣಿಸಿಕೊಳ್ಳಬಹುದು. ಇಂತಹ ಸಂದರ್ಭಗಳಲ್ಲಿ ಭಾಷಾಸಮುದಾಯದ ಶಿಕ್ಷಿತ ವರ್ಗಕ್ಕಿಂತ ಅಶಿಕ್ಷಿತ ವರ್ಗದಿಂದಲೇ ನಿರೂಪಕರನ್ನು ಆರಿಸಿಕೊಳ್ಳುವುದು ಒಳ್ಳೆಯದು.

ಸಂಶೋಧಕ ಭಾಷಾಸಾಮಗ್ರಿಗಳನ್ನು ಸಂಗ್ರಹಿಸುವಾಗ ಸ್ತ್ರೀ ನಿರೂಪಕರಿಗಿಂತ ಪುರುಷ ನಿರೂಪಕರನ್ನು ನೇಮಿಸಿಕೊಳ್ಳುವುದು ಕ್ಷೇತ್ರಕಾರ್ಯದ ಎಲ್ಲಾ ರೀತಿಯಿಂದಲೂ

ಹೆಚ್ಚು ಉಪಯುಕ್ತ. ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಅಂದರೆ ಸ್ತ್ರೀ ಉಚ್ಚಾರಣೆ ಬಗೆಗೆ ಹಾಗೂ ಸೋಬಾನೆ ಪದಗಳು, ಬೀಸುವ ಕಲ್ಲಿನ ಪದಗಳು, ಲಾವಣಿ ಮುಂತಾದುವುಗಳ ಅಧ್ಯಯನ ಸಂದರ್ಭಗಳಲ್ಲಿ ಸಂಶೋಧಕ ಸ್ತ್ರೀ ನಿರೂಪಕರನ್ನು ಆರಿಸಿಕೊಳ್ಳಲೇಬೇಕು. ಇಂತಹ ಅನಿವಾರ್ಯ ಸಂದರ್ಭಗಳನ್ನು ಬಿಟ್ಟರೆ ಉಳಿದ ಕ್ಷೇತ್ರಕಾರ್ಯದ ಎಲ್ಲಾ ಸಂದರ್ಭಗಳಲ್ಲಿಯೂ ಪುರುಷ ನಿರೂಪಕರನ್ನು ನೇಮಿಸಿಕೊಳ್ಳುವುದು ಹೆಚ್ಚು ಪ್ರಯೋಜನಕಾರಿ.

ಭಾಷೆಯನ್ನು ಸ್ಪಷ್ಟವಾಗಿ ಉಚ್ಚರಿಸುವ ರೀತಿಯೂ ನಿರೂಪಕರಾಗಲು ಬೇಕಾದ ಅರ್ಹತೆಗಳಲ್ಲಿ ಬಹಳ ಮುಖ್ಯವಾದುದು. ನಿರೂಪಕರ ವಾಕ್ಯಪ್ರಯೋಗ ಉತ್ತಮ ವಾಗಿರಬೇಕು. ಆ ಭಾಷೆಯ ಕಂಪಿತಗಳು, ಅನುನಾಸಿಕಗಳು, ಅರೆ ವ್ಯಂಜನಗಳು ಮುಂತಾದ ಧ್ವನಿಗಳು ಸ್ಪಷ್ಟವಾಗಿ ಕೇಳುವಂತಿರಬೇಕು. ಆದುದರಿಂದ ನಿರೂಪಕನಾಗಿ ಆಯ್ಕೆಯಾಗುವವರು ಉಚ್ಚರಿಸುವ ಭಾಷೆ ಕರ್ಕಶವಾಗಿದೆಯೋ, ಅಸ್ಪಷ್ಟತೆಯಿಂದ ಕೂಡಿದೆಯೋ, ಜೊಲ್ಲು ಸುರಿಸುತ್ತಾ ಮಾತನಾಡುತ್ತಿದ್ದಾರೆಯೋ ಎಂಬುದನ್ನು ಗಮನಿಸಬೇಕು. ಇಂಥ ಉಚ್ಚಾರಣೆ ಇದ್ದವರು ನಿರೂಪಕರಾಗಲು ಅನರ್ಹರು ಎಂದು ಸಂಶೋಧಕರ ಮನಸ್ಸಿನಲ್ಲಿರಬೇಕಾಗುತ್ತದೆ. ನಿರೂಪಕ ಆ ಸಮುದಾಯದ ಭಾಷೆಯ ಕೆಲವು ವ್ಯಾಕರಣ ಅಂಶಗಳಾದ ನಾಮಪದ, ಕ್ರಿಯಾಪದ, ವಾಕ್ಯರಚನೆ ಇವುಗಳ ಬಗೆಗೆ ಸ್ವಲ್ಪಮಟ್ಟಿಗಾದರೂ ತಿಳಿದಿದ್ದರೆ ಸಂಶೋಧಕನಿಗೆ ಅನುಕೂಲವಾಗುತ್ತದೆ.

ನಿರೂಪಕ ಪ್ರಾಮಾಣಿಕನೂ ನಿಷ್ಠಾವಂತನೂ ವಾಚಾಳಿಯೂ ಆಗಿದ್ದರೆ ಒಳ್ಳೆಯದು. ಏಕೆಂದರೆ ಅವನು ಮಿತಭಾಷಿಯೂ ಸಂಕೋಚ ಪ್ರವೃತ್ತಿಯವನೂ ಏಕಾಂತ ಪ್ರಿಯನೂ ಆಗಿಬಿಟ್ಟರೆ ಅವನಿಂದ ಸುಲಭವಾಗಿ ಸಾಮಗ್ರಿ ಸಂಗ್ರಹ ಮಾಡಲಾಗುವುದಿಲ್ಲ. ಆತ ಯಾವಾಗಲೂ ಸ್ನೇಹಪರನೂ ಹಸನ್ಮುಖಿಯೂ ಉತ್ಸಾಹಿಯೂ ಹೆಚ್ಚು ತಾಳ್ಮೆ ಉಳ್ಳವನೂ ಆಗಿದ್ದು, ಸಹಕರಿಸಬಲ್ಲವನೂ ಆಗಿದ್ದರೆ ಒಳ್ಳೆಯದು. ಒಂದು ವೇಳೆ ಸಂಶೋಧಕನು ಸಾಮಗ್ರಿ ಸಂಗ್ರಹಿಸಲು ಮೊದಲೇ ತಿಳಿಸಿದ ಸಮಯಕ್ಕೆ ತಡವಾಗಿ ಬಂದರೆ ಅಥವಾ ನಿಗದಿತ ಸಮಯಕ್ಕಿಂತ ಬೇಗನೆ ಬಂದರೆ ಆಗ ನಿರೂಪಕನು ಸಂಶೋಧಕನ ಜೊತೆ ಸಹಕರಿಸಬೇಕಾಗಿರುತ್ತದೆ. ಆದುದರಿಂದ ಆತ್ಮಪ್ರತಿಷ್ಠೆ, ಸಿಡುಕುತನ, ಹಠಮಾರಿತನ, ಬುದ್ಧಿ ಭ್ರಮಣೆ, ಪಾಂಡಿತ್ಯಗರ್ವ ಇತ್ಯಾದಿ ಓರೆಕೋರೆಗಳು ಮತ್ತು ದುರ್ಗುಣಗಳಿಂದ ದೂರವಿರುವ ವ್ಯಕ್ತಿಗಳನ್ನೇ ನಿರೂಪಕರನ್ನಾಗಿ ಆರಿಸಿಕೊಳ್ಳುವುದು ಸೂಕ್ತ. ಗ್ರಹಣ ಶಕ್ತಿ, ಆಲೋಚನಶಕ್ತಿ, ಬುದ್ಧಿಶಕ್ತಿ, ತಿಳಿವಳಿಕೆ, ಸ್ಮರಣಶಕ್ತಿ ಇವೆಲ್ಲವೂ ಉನ್ನತಮಟ್ಟದವಾಗಿರಬೇಕಲ್ಲದೆ ಅವರು ಮಾನಸಿಕವಾಗಿ ಕ್ರಿಯಾಶೀಲರಾಗಿಯೂ ಮತ್ತು ಆ ಸಮುದಾಯದ ಸಾಂಸ್ಕೃತಿಕ ಹಿನ್ನೆಲೆಯನ್ನು ಚೆನ್ನಾಗಿ ತಿಳಿದವರಾಗಿಯೂ ಇರಬೇಕೆಂಬುದನ್ನು ಭಾಷಾಸಂಶೋಧಕ ಯಾವುದೇ ಕಾರಣಕ್ಕೂ ಮರೆಯಬಾರದು.

ಸಂಶೋಧಕ ನಿರೂಪಕರನ್ನು ಭೇಟಿ ಮಾಡಿ ಕ್ಷೇತ್ರಕಾರ್ಯ ಮುಗಿಯುವವರೆಗೂ ಪ್ರತಿದಿನವೂ ಸಾಮಗ್ರಿ ಸಂಗ್ರಹ ಮಾಡಬೇಕಾಗಿರುತ್ತದೆ. ಹೀಗೆ ನಿರೂಪಕ ದಿನದ ಬಹುತೇಕ ಸಮಯವನ್ನು ಸಂಶೋಧಕರೊಡನೆ ಕಳೆಯಬೇಕಾಗಿರುತ್ತದೆ. ಆದುದರಿಂದ ಸಂಶೋಧಕ ನಿರೂಪಕನಿಗೆ ಸಂಭಾವನೆಯ ರೂಪದಲ್ಲಿ ಹಣವನ್ನೋ ಅಥವಾ ಕಾಣಿಕೆಯನ್ನೋ ಕೊಡುವುದು ಉಪಯುಕ್ತ. ಏಕೆಂದರೆ ನಿರೂಪಕನಿಗೆ ಒಂದು ಜವಾಬ್ದಾರಿ ಬಂದು ತಮ್ಮ ನಿರೂಪಕ ಕೆಲಸಕ್ಕೆ ತಪ್ಪದೇ ಹಾಜರಾಗುತ್ತಾರೆ. ಹಾಗೆಯೇ ಈ ಕೆಲಸಕ್ಕೆ ಹಾಜರಾಗಿ ದಿನದ ಸಂಪಾದನೆ ಅಥವಾ ವೃತ್ತಿಕೆಲಸಕ್ಕೆ ತೊಂದರೆಯಾಯಿತು ಎಂಬ ಭಾವನೆ ನಿರೂಪಕನಿಗೆ ಬರುವುದಿಲ್ಲ. ಆದರೆ ಬರಿ ಹಣದಾಸೆಯುಳ್ಳ ನಿರೂಪಕರನ್ನು ಆರಿಸಿಕೊಳ್ಳುವುದೂ ಸರಿಯಾದ ಕ್ರಮವಲ್ಲ.

ಭಾಷಾ ಸಂಶೋಧಕ ನಿರೂಪಕರನ್ನು ಅವರ ಅರ್ಹತೆಯ ಮೇಲೆ ಆಯ್ಕೆ ಮಾಡಿಕೊಂಡ ಬಳಿಕ ಅವರಿಗೆ ಸಾಧ್ಯವಾದಷ್ಟೂ ತಮ್ಮ ಕ್ಷೇತ್ರ ಕಾರ್ಯದ ಉದ್ದೇಶ, ವ್ಯಾಪ್ತಿ, ಸ್ವರೂಪ ಮೊದಲಾದುವುಗಳನ್ನು ತಿಳಿಸಿಕೊಡುವುದು ಒಳ್ಳೆಯದು. ತನ್ನ ಕ್ಷೇತ್ರ ಕಾರ್ಯದ ವಿಷಯ ಸಂಗ್ರಹಣೆಗೆ ಸಿದ್ಧಪಡಿಸಿಕೊಂಡಿರುವ ಪ್ರಶ್ನಾವಳಿಗಳಿಗೆ ಯಾವ ರೀತಿ ಪ್ರತಿಕ್ರಿಯಿಸಬೇಕು, ಧ್ವನಿಯ ಏರಿಳಿತ, ತಾನ, ಸ್ವರಾಘಾತ, ಬಲಾಘಾತ, ಮೊದಲಾದ ಅಂಶಗಳಲ್ಲಿ ಅವಸರಿಸದೆ ನಿಧಾನವಾಗಿ ಹೇಳುವಂತೆ ಸಲಹೆ ಕೊಡಬೇಕಾಗುತ್ತದೆ. ಹಾಗೆಯೇ ಔಪಚಾರಿಕ, ಅನೌಪಚಾರಿಕ ಸಂದರ್ಭಗಳಲ್ಲಿ ಭಾಷಾ ಬಳಕೆಯ ರೀತಿಯನ್ನು ಸಹಜವಾಗಿಯೇ ಹೇಳುವಂತೆ ನಿರೂಪಕರಿಗೆ ಸಲಹೆ ಸೂಚನೆ ಕೊಡಬೇಕಾಗುತ್ತದೆ. ಆಧುನಿಕ ಉಪಕರಣಗಳ ಉಪಯೋಗ ಹಾಗೂ ಸಾಧ್ಯವಾದರೆ ಅವನ್ನು ಬಳಸುವ ವಿಧಾನಗಳ ಬಗ್ಗೆಯೂ ತಿಳಿವಳಿಕೆ ಮೂಡಿಸುವುದು ಒಳ್ಳೆಯದು.

ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಹಿರಿಯ ನಾಗರಿಕರ ಪಾತ್ರ

ಡಾ. ಎಚ್. ಎಸ್. ನಾಗಭೂಷಣಯ್ಯ

ಹಿರಿಯ ನಾಗರಿಕರು ಸಮಾಜ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಅಡಿಗಲ್ಲಾಗುವರೆಂದರೆ ಉತ್ಪ್ರೇಕ್ಷೆಯಾಗಲಾರದು. ದೇಶದ ಸುಭದ್ರತೆ ಹಾಗೂ ಏಳ್ಗೆಯು ತನ್ನ ಜನತೆಯಲ್ಲಿ ಪ್ರದರ್ಶಿತವಾದ ಜ್ಞಾನ, ನಾಗರಿಕತೆ, ಪ್ರಗತಿ ಮನೋಭಾವ, ಮುಂದಾಳತ್ವ ದೇಶಾಭಿಮಾನ ಮತ್ತು ತ್ಯಾಗ ಭಾವನೆಗಳನ್ನು ಅವಲಂಬಿಸಿದೆ. ಈ ಎಲ್ಲಾ ವೈಶಿಷ್ಟ್ಯ ಗುಣಗಳನ್ನು ಹೊಂದಿರಬಹುದೆಂಬ ನಿರೀಕ್ಷೆಯಿಂದ ಶ್ರೇಷ್ಠ ಹಿರಿಯ ವಯಸ್ಕರನ್ನು ರಾಷ್ಟ್ರದ ಅಭಿವೃದ್ಧಿಶೀಲದ ಪ್ರಥಮ ಪಂಕ್ತಿಯಲ್ಲಿರಿಸಲಾಗಿದೆ. ಹಿರಿಯ ನಾಗರಿಕರು ಅಭಿವೃದ್ಧಿ ರಾಷ್ಟ್ರವನ್ನಾಗಿಸಲು ಯಾವ ಮಾರ್ಗದಲ್ಲಿ ದೇಶವನ್ನು ಹಾಗೂ ಜನತೆಯನ್ನು ಕೊಂಡೊಯ್ಯಬಹುದೆಂಬುದನ್ನು ಪ್ರಸ್ತುತ ಲೇಖನದಲ್ಲಿ ವಿಚಾರ ಮಾಡಲಾಗಿದೆ. ಪ್ರಥಮತಹ ಶೈಶವಾವಸ್ಥೆಯಿಂದ ಉನ್ನತ ಮಾರ್ಗದರ್ಶನದಲ್ಲಿ ಬೆಳೆದು ವ್ಯಕ್ತಿ ವೈಶಿಷ್ಟ್ಯತೆಗಳನ್ನು ಗಳಿಸಿ ಶ್ರೇಷ್ಠ ಪ್ರಜೆಯಾಗಿ ರಾಷ್ಟ್ರದ ಅಭಿವೃದ್ಧಿಗೆ ನೆರವಾಗಲು ಆವಶ್ಯಕವಾದ ಪರಿಸರವನ್ನೂ ಇಲ್ಲಿ ವಿವರಿಸಲಾಗಿದೆ.

ಜ್ಯೇಷ್ಠ ನಾಗರಿಕರ ಪಾತ್ರ ದೇಶದ ಅಭಿವೃದ್ಧಿಯ ನಿಟ್ಟಿನಲ್ಲಿ

ದೇಶದ ಜ್ಯೇಷ್ಠ ನಾಗರಿಕರು ಎಂದರೆ ತಮ್ಮ ವೃತ್ತಿಯಿಂದ ನಿವೃತ್ತಿ ಹೊಂದಿದ ಇಲ್ಲವೇ ನಿವೃತ್ತಿ ಹೊಂದಲಿರುವ ಹಿರಿಯ ನಾಗರಿಕರೆಂದು ಭಾವಿಸಲಾಗಿದೆ. ಹಿರಿಯ ನಾಗರಿಕ ಜ್ಞಾನಿಗಳು ಮಾಡುವ ಚಿಂತನೆಗಳು ಹೇಗಿರಬೇಕೆಂದರೆ

ಓದಿದರೆ ಸಾಲದು ತಿಳಿದಿರಬೇಕು
ತಿಳಿದರೆ ಸಾಲದು ಬದುಕಿರಬೇಕು
ಬದುಕಿದರೆ ಸಾಲದು ವಿಶ್ವದಲ್ಲಿ ಬೆಳಗಬೇಕು
ಬೆಳಗಿದರೆ ಸಾಲದು ಸಾಧಿಸಬೇಕು

ಹಿರಿಯ ನಾಗರಿಕರು ತಾವು ನಡೆದು ಬಂದ ದಾರಿಯನ್ನು ಪರ್ಯಾಲೋಚಿಸಿದ್ದೇ ಆದರೆ ಕಾಣಬರುವುದೇನು?

ಸಂಸಾರ, ಸಮಾಜ, ಸರ್ಕಾರ ಹಾಗೂ ದೇಶದ ವೈಶಿಷ್ಟ್ಯತೆಗಳಲ್ಲಿ ಕಂಡು ಬರುವ ಕುಂದು ಕೊರತೆಗಳು, ಗುಣಾವಗುಣಗಳು, ಒಡಕುಗಳು, ಭಿನ್ನಭೇದಗಳು, ತಾರತಮ್ಯಗಳು, ಜಾತಿ ಭೇದ, ಲಂಚಕೋರತನ ಮುಂತಾದವು ಮಾನವ ಕಲ್ಯಾಣಕ್ಕೆ ಮಾರಕವಾದ ಗುಣಗಳು. ಇವುಗಳ ಅವಲೋಕನ ಮಾಡಿ ನಂತರ ನಿರ್ಮೂಲನ ಮಾಡಿ ಸಮಾಜ ಹಾಗೂ ದೇಶದ ಉದ್ಧಾರದ ಗುರಿಯಾಗಿಟ್ಟುಕೊಂಡು ಮಾದರಿ ಪ್ರಭಾವವನ್ನು ತಮ್ಮ ಚಟುವಟಿಕೆಗಳ ಮೂಲಕ ಕಾರ್ಯರೂಪಕ್ಕೆ ತರಬೇಕೆಂಬುದೇ ಎಲ್ಲರ ನಿರೀಕ್ಷೆ.

ಜ್ಯೇಷ್ಠ ನಾಗರಿಕರು ಸಮಾಜ ಹಾಗೂ ರಾಷ್ಟ್ರದ ಅಭಿವೃದ್ಧಿಗೆ ಸಲ್ಲಿಸಬಹುದಾದ ಕೊಡುಗೆ

ಹಿರಿಯ ನಾಗರಿಕರು ವಿವಿಧ ರೀತಿಯಲ್ಲಿ ರಾಷ್ಟ್ರದ ಅಭಿವೃದ್ಧಿಗೆ ನೆರವಾಗಬಹುದು.

೧ ಆರ್ಥಿಕ ಸಹಾಯ

೨ ನಿರ್ಮಾಣ ಅಥವಾ ರಚನಾತ್ಮಕ ಕಾರ್ಯಗಳು

೩ ಜ್ಯೇಷ್ಠ ನಾಗರಿಕರ ಸಲಹೆ ರಾಷ್ಟ್ರದ ಅಭಿವೃದ್ಧಿಯಲ್ಲಿ ಪ್ರಾಮುಖ್ಯ

೪ ಸ್ಫೂರ್ತಿದಾಯಕ ಆದರ್ಶ ಜೀವನ

೫ ಪಾಂಡಿತ್ಯಪ್ರವಚನಗಳ ಮೂಲಕ ಮಾನವೀಯತೆಯ ಚಿಂತನೆಗಳ ಪ್ರಚಾರ

೬ ಜ್ಞಾನಿಗಳಾದ ಸಂತರು, ಆಧ್ಯಾತ್ಮಿಕ, ಸಾಂಸ್ಕೃತಿಕ, ಪ್ರಕೃತಿಯ ವೈವಿಧ್ಯತೆಗಳ ಚಿಂತನೆಯನ್ನು ಬೋಧಿಸುವುದು.

೧ ಆರ್ಥಿಕ ಸಹಾಯ - ಶ್ರೀಮಂತಿಕೆಯ ಹಾದಿಯಲ್ಲಿ ನಡೆದು ಹಣಗಳಿಸುವುದರಲ್ಲಿ ಯಶಸ್ವಿಯಾದ ಹಿರಿಯ ನಾಗರಿಕರು ಉದಾತ್ತ ಮನಸ್ಸಿನಿಂದ ಸಮಾಜೋದ್ಧಾರಕ್ಕಾಗಿ ಸಾರ್ವಜನಿಕ ಸೇವಾ ಸಂಸ್ಥೆಗಳ ನಿರ್ಮಾಣದಲ್ಲಿ ತಲ್ಲೀನರಾಗಿರುವುದು. ಉದಾಹರಣೆ :- ವಿದ್ಯಾ ಸಂಸ್ಥೆಗಳು, ವೈದ್ಯ ಶಾಲೆಗಳು, ಸಾಂಸ್ಕೃತಿಕ ಕೇಂದ್ರಗಳು, ದೇವಸ್ಥಾನಗಳು, ವಿದ್ಯಾರ್ಥಿ ವೇತನ ನಿಧಿ, ವೃದ್ಧಾಶ್ರಮ ಮುಂತಾದವು.

೨ ನಿರ್ಮಾಣ ಅಥವಾ ರಚನಾತ್ಮಕ ಕಾರ್ಯಗಳು - ಉನ್ನತ ಅಧಿಕಾರ ಇಲ್ಲವೇ ಅಂತಸ್ತು ಹಾಗೂ ಸಂಸ್ಥೆಗಳಲ್ಲಿ ತೊಡಗಿರುವ ಇಲ್ಲವೇ ಬೃಹತ್ ಕಾರ್ಯಕಾರಿಗಳ ಸಂಪರ್ಕವಿರುವ ಹಿರಿಯ ನಾಗರಿಕರು ದೀನ ದಲಿತ ಸಂಸ್ಥೆಗಳ ರಚನಾತ್ಮಕ (ನಿರ್ಮಾಣ) ಕಾರ್ಯಗಳಿಗೆ ಕೆಲಸಗಾರರ ಸೇವೆಯನ್ನಾಗಲೀ ಸಾಮಾನು ಸಾಧನೆಗಳನ್ನಾಗಲೀ ಒದಗಿಸಿ ಸೇವೆ ಸಲ್ಲಿಸಬಹುದು. ಇದರಲ್ಲಿ ವಲಯದ ಪರಿಸರ ನಿರ್ಮಲೀಕರಣ, ಉದ್ಯಾನವನಗಳ ನಿರ್ಮಾಣ, ಪ್ರಾರ್ಥನಾ ಮಂದಿರಗಳ ನಿರ್ವಹಣೆ ಸೇರಿರಬಹುದು.

೩ ಜ್ಯೇಷ್ಠ ನಾಗರಿಕರ ಸಲಹೆ ರಾಷ್ಟ್ರದ ಅಭಿವೃದ್ಧಿಯಲ್ಲಿ ಪ್ರಾಮುಖ್ಯ - ಜ್ಯೇಷ್ಠ ನಾಗರಿಕರು ವಿವಿಧ ಹುದ್ದೆಗಳಲ್ಲಿ ನೈಪುಣ್ಯತೆಯನ್ನು ಗಳಿಸಿದ್ದು, ನಿವೃತ್ತಿ ಹೊಂದಿದ ನಂತರವೂ ರಾಷ್ಟ್ರದ ಅಭಿವೃದ್ಧಿಗೆ ಅಮೂಲ್ಯ ಕಾಣಿಕೆ ಸಲ್ಲಿಸಬಹುದು.

ಸಾಮಾನ್ಯವಾಗಿ ಅನೇಕ ಜ್ಯೇಷ್ಠ ನಾಗರಿಕರು ತಮ್ಮ ಸುದೀರ್ಘ ಅನುಭವದಿಂದಲೂ ದೇವದತ್ತ ಹಾಗೂ ಶ್ರಮದಿಂದ ಗಳಿಸಿದ ವಿದ್ಯಾ ಬುದ್ಧಿಗಳಿಂದಲೂ ಜೀವನದಲ್ಲಿ ಸಾಧಿಸಿರುವ ಅಮೂಲ್ಯ ಗುಣಗಳೆಂದರೆ: ನಿಷ್ಠೆ, ಪ್ರಾಮಾಣಿಕತೆ, ವಿನಯತೆ, ದೈನ್ಯತೆ, ಗಂಭೀರ ನಡತೆ, ಆತ್ಮವಿಶ್ವಾಸ, ಸ್ವಾಭಿಮಾನ, ದೃಢಸಂಕಲ್ಪ, ಅಚಲ ಧೈರ್ಯ, ಸಾಹಸ, ಆಕಾಂಕ್ಷೆ, ಕಲ್ಪನಾಶಕ್ತಿ, ತಾಳ್ಮೆ, ಶಾಂತ ಚಿತ್ತತೆ, ದೂರದೃಷ್ಟಿ, ಸ್ವಯಂಪ್ರೇರಣೆ ಒಲಿಸುವ ಚಾತುರ್ಯ, ಈ ಎಲ್ಲಾ ಗುಣಗಳೂ ಅವರಿಗೆ ಅಮೂಲ್ಯ ಆಭರಣಗಳು ಹಾಗೂ ಅಭೇದ್ಯ ಕವಚ.

ನಿವೃತ್ತಿ ಹೊಂದಿದ ಇಂತಹ ಜ್ಯೇಷ್ಠ ನಾಗರಿಕರಲ್ಲಿ ನ್ಯಾಯಾಧೀಶರಿರಬಹುದು, ವೈದ್ಯರಿರಬಹುದು, ಯೋಜನಾ ಪ್ರಮುಖರಿರಬಹುದು, ಕುಶಲ ಕಲೆಯ ಇಂಜಿನಿಯರ್ ಇರಬಹುದು, ವಿಜ್ಞಾನಿಗಳಿರಬಹುದು. ಪ್ರತಿಭಾವಂತ ಆಡಳಿತಗಾರರಿರಬಹುದು. ವ್ಯಾಪಾರೋದ್ಯಮಿಗಳಿರಬಹುದು, ಸರ್ವರೂ ತಮ್ಮ ಅನುಭವದ ದೃಷ್ಟಿಯಲ್ಲಿ ರಾಷ್ಟ್ರದ ಅಭಿವೃದ್ಧಿಯ ದೃಷ್ಟಿಯಿಂದ ಸೇವಾ ನಿರತರಾಗಬಹುದು. ನಿವೃತ್ತ ಗಣ್ಯರು ಸ್ವತಂತ್ರರಾಗಿರುವುದರಿಂದ ನಿಷ್ಪಕ್ಷಪಾತವಾಗಿ ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ನಿರ್ಭಯವಾಗಿ, ದೇಶದ ಹಿತದೃಷ್ಟಿಯಿಂದ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಬಹುದು. ತಮ್ಮ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಂಬಂಧಿಸಿದ ಸಂಸ್ಥೆಗಳನ್ನಾಗಲೀ ಸರ್ಕಾರಗಳನ್ನಾಗಲೀ ಪ್ರೇರೇಪಿಸಬಹುದು. ಯಾವ ಕಾರಣಕ್ಕೂ ಜ್ಯೇಷ್ಠ ನಾಗರಿಕರು ಆಲಸ್ಯರಾಗಿರಬಾರದು. ತಮ್ಮ ಪಕ್ವವಾದ ಅನುಭವಗಳನ್ನು ರಾಷ್ಟ್ರದ ಅಭಿವೃದ್ಧಿಗೆ ವಿನಿಮಯ ಮಾಡಬೇಕು.

ಅನೇಕ ಹಿರಿಯ ನಾಗರಿಕರಿಗೆ ಹಣದ ಚೈತನ್ಯ ಅಷ್ಟಾಗಿರಲಾರದು. ಆದರೆ ಅಂತಹವರು ಸಮಾಜ, ರಾಷ್ಟ್ರದ ಅಭಿವೃದ್ಧಿಗೆ ಬೇರೆ ವಿಧದಲ್ಲಿ ನೆರವಾಗಬಹುದು.

೪ **ಸ್ಫೂರ್ತಿದಾಯಕ ಆದರ್ಶ ಜೀವನ** - ಶಾಂತಿ, ಧರ್ಮ, ಪ್ರೇಮಮಯೀಜೀವನ ಸಾಧಿಸಿದ ಸತ್ಪುರುಷರು ಜೀವನದುದ್ದಕ್ಕೂ ವಯೋಮಿತಿಯಿಲ್ಲದೇ ಸದಾಸಕ್ರಿಯರಾಗಿಯೇ ಇರುವರು. ಇಂತಹ ಮಹನೀಯರ ಆದರ್ಶ ಮಾರ್ಗ ದರ್ಶನವನ್ನು ಸಮಾಜ ಹಾಗೂ ರಾಷ್ಟ್ರದ ಉನ್ನತಿಗೆ ನಿರೀಕ್ಷಿಸುತ್ತಿರುವರು.

ಇಲ್ಲಿ ಹಿರಿಯರ ದೇಶಪ್ರೇಮ ಮತ್ತು ಹಿರಿಯರ ಉದಾತ್ತ ಜೀವನದ ನಿದರ್ಶನಗಳನ್ನು ಸಂಕ್ಷಿಪ್ತವಾಗಿ ತಿಳಿಸಿರುತ್ತದೆ

೪. ೧ **ಆತ್ಮವಿಶ್ವಾಸ ಒಂದು ಅಭೇದ ರಕ್ಷಾಕವಚ - ಗಾಂಧೀಜಿ ನಿದರ್ಶನ** - ದೇಶಪ್ರೇಮ, ಆತ್ಮವಿಶ್ವಾಸ, ದೃಢಸಂಕಲ್ಪ, ದೇಶದ ಸ್ವಾಭಿಮಾನ, ಬಡವ ಬಲ್ಲಿದರಲ್ಲಿ ತಾರತಮ್ಯವಿಲ್ಲದ ಪ್ರೇಮ ಮುಂತಾದ ಗುಣಗಳೆಲ್ಲವೂ ನಮ್ಮ ದೇಶದ ಹಿರಿಯ ಸ್ವಾತಂತ್ರ್ಯ ವೀರರ ಅಭೇದ ಕವಚಗಳಾಗಿದ್ದವು. ಇವರಲ್ಲಿ ರಾಷ್ಟ್ರಪಿತ

ಮಹಾತ್ಮಗಾಂಧಿಯವರು ಅಗ್ರಗಣ್ಯರು. ಇವರ ದಿಟ್ಟತನ, ದೃಢಸಂಕಲ್ಪ, ಆತ್ಮವಿಶ್ವಾಸ, ದೇಶಪ್ರೇಮವನ್ನು ಪ್ರದರ್ಶಿಸಿದ ಅನೇಕ ದೃಷ್ಟಾಂತಗಳು ಚಾರಿತ್ರಿಕವಾಗಿವೆ.

ಒಮ್ಮೆ ಗಾಂಧೀಜಿಯವರು ಒಂದು ದೊಡ್ಡ ಬ್ರಿಟಿಷ್ ಹಡಗಿನಲ್ಲಿ ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಸಮ್ಮೇಳನದಲ್ಲಿ ಭಾಗವಹಿಸಲು ಹೊರಟಿದ್ದರು. ಒಂದು ದಿನ ಹಡಗಿನ ಮೇಲ್ಛಾವಣಿಯಲ್ಲಿ ಕುಳಿತು ಕಾಗದ ಬರೆಯುತ್ತಿದ್ದರು. ಆಗ ಉತ್ತಮ ಪೋಷಾಕು ಧರಿಸಿದ್ದ ಒಬ್ಬ ಇಂಗ್ಲಿಷ್ ಯುವಕ ಗಾಂಧೀಜಿಯವರ ಉಡುಪು ಮತ್ತು ಚರ್ಯೆ ಇತರೇ ಹಡಗಿನ ಪ್ರಯಾಣಿಕರಿಗಿಂತ ಭಿನ್ನವಾಗಿದ್ದನ್ನು ನೋಡಿ ಅಸಭ್ಯ ರೀತಿಯಲ್ಲಿ ಸಂಕುಚಿತ ಮನಸ್ಸಿನಿಂದ ಈ ರೀತಿ ವರ್ತಿಸಿದನು :

ಪ್ರತಿಷ್ಠಿತ ಇಂಗ್ಲಿಷ್ ಯುವಕನು ತನ್ನ ಕೊಠಡಿಗೆ ಹೋಗಿ ಕಾಗದದ ಚೂರುಗಳನ್ನು ತಂದು ವ್ಯಂಗ್ಯ ಚಿತ್ರಗಳನ್ನೊಳಗೊಂಡಂತೆ ಏನೇನೋ ಬರೆದನು. ಅರೆ ಬೆತ್ತಲೆ, ಬೋಳು ತಲೆ, ಅಸಾಂಸ್ಕೃತಿಕ ಮುಪ್ಪಿನ ಮನುಷ್ಯನು ಇಂಗ್ಲೆಂಡಿಗೆ ಏಕೆ ಹೋಗುತ್ತಿದ್ದಾನೆ ಎಂಬ ಸಂಶಯ ಬೇರೆ. ಇಂಗ್ಲೆಂಡಿಗೆ ಹೋಗುವ ಯತ್ನ ಬಿಡಬೇಕೆಂದು ಬರೆದಿದ್ದನು. ಈ ಎಲ್ಲಾ ಕಾಗದಗಳನ್ನು ಒಂದು ಗುಂಡು ಸೂಜಿಯಿಂದ ಜೋಡಿಸಿ ಬಂಧಿಸಿ ಗಾಂಧೀಜಿಯವರ ಮುಂದೆ ಬಂದು ನಿಂತನು. ಗಾಂಧೀಜಿ ತಲೆಎತ್ತಿ ನೋಡಿದಾಗ ಈ ಕಾಗದಗಳ ಗುಚ್ಛವನ್ನು ಗಾಂಧೀಜಿಗೆ ಕೊಟ್ಟು ಈ ರೀತಿ ಹೇಳಿದನು ;

"ಈ ಕಾಗದದಲ್ಲಿ ಕುತೂಹಲಕಾರಿ, ಉಪಯುಕ್ತ ಮತ್ತು ಬೆಲೆಯುಳ್ಳ ವಿಷಯಗಳು ಸೇರಿವೆ. ಓದಿ ಜೋಪಾನವಾಗಿ ಇಟ್ಟುಕೊಳ್ಳುವುದು". ನಂತರ ಈ ಯುವಕನು ದೂರ ಹೋಗಿ ಗಾಂಧೀಜಿಯವರ ಪ್ರತಿಕ್ರಿಯೆಯನ್ನು ವೀಕ್ಷಿಸುತ್ತಾ ನಿಂತುಕೊಂಡನು.

ಗಾಂಧೀಜಿಯವರು ಪ್ರಶಾಂತವಾಗಿ ಅವನು ಬರೆದಿದ್ದ ಕಾಗದದ ಪ್ರತಿಯೊಂದು ಪದವನ್ನು ಓದಿ ನಂತರ ತಲೆಯೆತ್ತಿ ಆ ಇಂಗ್ಲಿಷ್ ಯುವಕನನ್ನು ಹುಸಿ ನಗೆಯಿಂದ ನೋಡಿದರು. ನಂತರ ನಿಧಾನವಾಗಿ ಆ ಕಾಗದದಲ್ಲಿ ಗುಂಡು ಸೂಜಿಯನ್ನು ಕೈಗೆತ್ತಿಕೊಂಡು ಕಾಗದಗಳನ್ನು ಮೇಜಿನ ಕೆಳಗಿನ ಕಸದ ಬುಟ್ಟಿಯಲ್ಲಿ ಹಾಕುತ್ತ ಅವನನ್ನು ಕುರಿತು ಹೀಗೆ ಹೇಳಿದರು :

"ನೀನು ನನಗೆ ಏನು ಮಾಡಬೇಕೆಂದು ತಿಳಿಸಿರುವೆಯೋ ಅದನ್ನೇ ಮಾಡಿರುವೆನು. ಇದರಲ್ಲಿರುವ ಗುಂಡು ಸೂಜಿ ಮಾತ್ರ ಉಪಯುಕ್ತವೂ ಮತ್ತು ಗಮನಾರ್ಹವೂ ಆದ ವಸ್ತುವಾಗಿದೆ. ಅದನ್ನು ಜೋಪಾನ ಮಾಡಿರುವೆನು".

ಇಂಗ್ಲಿಷ್ ಯುವಕನು ತಕ್ಷಣ ತನ್ನ ತಪ್ಪನ್ನು ತಿಳಿದುಕೊಂಡನು. ಅವನು ಯೋಚಿಸಿದ್ದೇ ಬೇರೆ. ಇವರು ಕಾಗದಗಳನ್ನು ಓದಿ ಉದ್ರಿಕ್ತರಾಗಿ ಒಂದು ಗಲಾಟೆಯ ದೃಶ್ಯವನ್ನುಂಟು ಮಾಡುವುದನ್ನು ನೋಡಿ ಇತರ ಪ್ರಯಾಣಿಕರೊಂದಿಗೆ ಆನಂದಿಸಬೇಕೆಂಬ ಕುಹಕ ಬುದ್ಧಿಯನ್ನಿಟ್ಟುಕೊಂಡಿದ್ದನು. ಆದರೆ ಗಾಂಧೀಜಿಯವರ

ಕ್ಲುಪ್ತ ಮೊಟುಕಾದ ಸಮಾಧಾನ ಚಿತ್ತದ ಉತ್ತರ ನೇರವಾಗಿ ಅವನ ಹೃದಯವನ್ನು ನಾಟಿತು. ತಕ್ಷಣ ಅವನು ಗಾಂಧೀಜಿಯವರ ಪ್ರಶಾಂತ, ಮೇಧಾವಿ, ಸುಸಂಸ್ಕೃತ ಹಾಗೂ ಸೌಜನ್ಯ ಗುಣಗಳನ್ನು ಅರ್ಥ ಮಾಡಿಕೊಂಡು ಅವಮಾನದಿಂದ ತಲೆ ತಗ್ಗಿಸಿಕೊಂಡು ಬಂದ ದಾರಿಯಲ್ಲಿಯೇ ಹಿಂತಿರುಗಿದನು. ಇದು ಅವನ ಪ್ರತಿಷ್ಠೆ, ಅಹಂಕಾರ, ದೊಡ್ಡಸ್ತಿಕೆಯ ಆಡಂಬರಕ್ಕೆ ತಕ್ಕ ಪಾಠವಾಗಿತ್ತು.

೪. ೨ ಧೀನ ಬಂಧುಗಳ ಅಗೋಚರ ಸಜ್ಜನತೆ - ಸಿ. ಎಫ್. ಆಂಡ್ರ್ಯೂಸ್‌ರವರು ಇಂಗ್ಲೆಂಡಿನ ಒಂದು ಶ್ರೀಮಂತ ಹಾಗೂ ಸುಸಂಸ್ಕೃತ ಮನೆತನದಲ್ಲಿ ಹುಟ್ಟಿದವರು. ಅವರು ಭಾರತೀಯರ ಸುಖ ದುಃಖಗಳಲ್ಲಿ ಪಾಲುಗೊಂಡವರು. ದಕ್ಷಿಣ ಆಫ್ರಿಕಾ ದೇಶದಲ್ಲಿ ಭಾರತೀಯರನ್ನು ಗುಲಾಮರಂತೆ ನಡೆಸಿಕೊಳ್ಳುವುದರ ವಿರುದ್ಧವಾಗಿ ಹೋರಾಡಿದವರು. ಬಡ ಬಗ್ಗರನ್ನು ದುಃಖಪೀಡಿತರನ್ನು ಕಂಡರೆ ಅವರ ಹೃದಯ ಕರಗಿ ನೀರಾಗುತ್ತಿತ್ತು.

ಒಂದು ಚಳಿಗಾಲದ ರಾತ್ರಿ ಅದಾವುದೋ ಊರಿಗೆ ಹೋಗುವುದಕ್ಕಾಗಿ ಆಂಡ್ರ್ಯೂಸರು ರೈಲ್ವೆ ನಿಲ್ದಾಣಕ್ಕೆ ಹೋಗಿದ್ದರು. ಗಾಡಿ ಬರುವುದಕ್ಕೆ ಇನ್ನೂ ಎಷ್ಟು ಹೊತ್ತು ಆಗುವುದೆಂದು ಕೇಳಲು ಸ್ಟೇಷನ್ ಮಾಸ್ತರರ ಕೋಣೆಗೆ ಹೋದರು. ಅವರ ಬೆನ್ನು ಹಿಂದೆಯೇ ಭಿಕಾರಿಯೊಬ್ಬಳು ಒಳಗೆ ಬಂದು ಅಲ್ಲಿಯೆ ಇಟ್ಟಿದ್ದ ಅಗ್ಗಿಷ್ಟಿಕೆಯಲ್ಲಿ ಕಾಯಿಸಿಕೊಳ್ಳಹತ್ತಿದಳು. ಒಳಗೆ ಬಂದ ಭಿಕಾರಿಯನ್ನು ನೋಡಿ ಸ್ಟೇಷನ್ ಮಾಸ್ತರರು ಕೆಂಡ ಕಾರಿದರು. ಅವಾಚ್ಯವಾಗಿ ಆಕೆಯನ್ನು ಬೈದು ಹೊರಗೆ ಹಾಕಲು ಹೇಳಿದರು.

"ಪಾಪ, ಥಂಡಿಯಿಂದ ನಡುಗಿ ಹೋಗಿದ್ದಾಳೆ, ಸ್ವಲ್ಪ ಹೊತ್ತು ಕಾಯಿಸಿಕೊಳ್ಳಲು ಬಿಡಿ" ಎಂದರು ಆಂಡ್ರ್ಯೂಸರು. ಆದರೆ ಸ್ಟೇಷನ್ ಮಾಸ್ತರರು ಅದಕ್ಕೆ ಸಮ್ಮತಿಸಲಿಲ್ಲ.

ಆಂಡ್ರ್ಯೂಸರು ತಮ್ಮ ಮೈಮೇಲೆ ಇದ್ದ ಬೆಚ್ಚಗಿನ ಕೋಟು ತೆಗೆದು ಆ ಭಿಕಾರಿ ಸ್ತ್ರೀಗೆ ಹೊದಿಸುತ್ತಾ ನುಡಿದರು :

"ಈ ಕೋಟನ್ನು ತೆಗೆದುಕೊಂಡು ಹೋಗು, ಇದು ನಿನ್ನನ್ನು ಥಂಡಿಯಿಂದ ಕಾಪಾಡುತ್ತದೆ". ಆಂಡ್ರ್ಯೂಸರ ಇಂತಹ ನಿಸ್ವಾರ್ಥ ಹಾಗೂ ನಿಷ್ಕಾಮ ಸೇವೆಯನ್ನು ನೋಡಿಯೇ ಜನರು ಅವರನ್ನು ದೀನಬಂಧು ಎಂದು ಕರೆದು ಗೌರವಿಸುತ್ತಿದ್ದರು.

೪. ೩ ಬಡವರ ಪಕ್ಷಪಾತಿ ಅಬ್ರಹಾಂ ಲಿಂಕನ್ - ಅಮೆರಿಕಾದ ಅಬ್ರಹಾಂಲಿಂಕನ್ ವಕೀಲ ಕೆಲಸ ಮಾಡುತ್ತಿದ್ದಾಗ ಒಬ್ಬ ಪಕ್ಷಕಾರನು ಅವರ ಬಳಿಗೆ ಬಂದು ಹೇಳಿದನು :

"ಆ ಮನುಷ್ಯನಿಂದ ನನಗೆ ಐದು ಡಾಲರು ಬರಬೇಕಾಗಿದೆ, ನೀವು ಕೂಡಲೇ ಅವನ ಆಸ್ತಿಪಾಸ್ತಿಯನ್ನು ಮುಟ್ಟುಗೋಲು ಹಾಕುವುದಕ್ಕೆ ಕೋರ್ಟಿನ ಹುಕುಂ ದೊರಕಿಸಿ ಕೊಡಬೇಕು". ಆ ಮಾತಿಗೆ ಲಿಂಕನ್ ಮರು ನುಡಿದರು ;

"ಆಗಲಿ, ನನ್ನ ಫೀ ಆರು ಡಾಲರು ಆಗುತ್ತದೆ ಅದನ್ನು ಕೊಡು". ಪಕ್ಷಕಾರನು ಆರು ಡಾಲರುಗಳನ್ನು ಲಿಂಕನ್‌ಗೆ ಫೀ ಎಂದು ಕೊಟ್ಟನು.

ಲಿಂಕನ್ ಆ ಹಣದಲ್ಲಿ ಒಂದು ಡಾಲರನ್ನು ತಾನು ತೆಗೆದುಕೊಂಡು ಉಳಿದ ಐದು ಡಾಲರುಗಳನ್ನು ಅವನಿಗೇ ಹಿಂದಿರುಗಿ ಕೊಡುತ್ತಾ ಹೇಳಿದನು "ಇದೋ ಆ ಬಡವನಿಂದ ನಿನಗೆ ಬರಬೇಕಾದ ಐದು ಡಾಲರುಗಳನ್ನು ತೆಗೆದುಕೊಳ್ಳಿರಿ, ಬಡವರಿಗೆ ತೊಂದರೆ ಕೊಡಬಾರದು'' ಎಂದು ಹೇಳಿ ಗೆಲುವಿನ ನಗೆ ಬೀರಿದರು.

೪. ೪ ಕಾಯಕದ (ದುಡಿಮೆಯ) ಮಹತ್ವ - ಒಮ್ಮೆ ಅಮೆರಿಕಾ ಸಂಯುಕ್ತ ಸಂಸ್ಥಾನದ ಪ್ರೆಸಿಡೆಂಟ್ ಜಾರ್ಜ್‌ವಾಷಿಂಗ್‌ಟನ್ ವೇಷ ಮರೆಸಿ ಕುದುರೆಯ ಮೇಲೆ ಎಲ್ಲಿಯೋ ಹೋಗುತ್ತಿದ್ದನು. ಒಂದು ಕಾಲೋನಿಯಲ್ಲಿ ಒಬ್ಬ ಅಧಿಕಾರಿ ತನ್ನ ಇಬ್ಬರೂ ಸೈನಿಕ ಕೆಲಸಗಾರರ ಮೇಲೆ ರೇಗಾಡುತ್ತಿದ್ದನು. ಅಲ್ಲಿಗೆ ಕುದುರೆ ಸವಾರನು ಬಂದು ವಿಷಯವೇನೆಂದು ವಿಚಾರಿಸಲು ಆ ಅಧಿಕಾರಿ ಹೇಳಿದನು, ''ಈ ಇಬ್ಬರು ಸೈನಿಕರು ಎಷ್ಟು ಆರ್ಡರ್ ಮಾಡಿದರೂ ಈ ತೊಲೆಯನ್ನು ಎತ್ತಿ ಆ ಕಂಬದ ಮೇಲೆ ಇರಿಸಲು ಅಸಮರ್ಥರಾಗಿರುವರು'' ಎಂದು ಗುಡುಗಾಡಿದನು. ತಕ್ಷಣ ಆಗಂತುಕ ಸವಾರನು ಆ ಇಬ್ಬರು ಸೈನಿಕರೊಂದಿಗೆ ಕಾರ್ಯಕ್ಕೆ ಕೈ ಜೋಡಿಸಿದಾಗ ಆ ಕೆಲಸ ನೆರವೇರಿತು. ಆಗ ಆಗಂತುಕ ಸವಾರನು ಹೇಳಿದನು, ಈ ಕೆಲಸಕ್ಕೆ ಮೂರು ಜನರ ಆವಶ್ಯಕತೆ ಇತ್ತು. ನೀನೇ ಜೊತೆ ಸೇರಿಕೊಂಡು ಕೆಲಸ ಮಾಡುವುದರ ಬದಲು ಆಜ್ಞೆ ಮಾಡುವುದರಿಂದ ಪ್ರಯೋಜನವಿಲ್ಲ. ಹೀಗೆ ಹೇಳಿದ ನಂತರ ಆಗಂತುಕ ಸವಾರನು ತನ್ನ ಗುರುತನ್ನು ಬಹಿರಂಗಪಡಿಸಿ ''ನಾನು ಈ ದೇಶದ ಪ್ರೆಸಿಡೆಂಟ್'' ಆದಾಗ್ಯೂ ನನಗೆ ಸಣ್ಣ ಕೆಲಸದಲ್ಲೂ ಗೌರವವಿದೆ ಎಂದನು. ಅಧಿಕಾರಿಗೆ ನಾಚಿಕೆಯಾಗಿ ಕ್ಷಮೆ ಕೇಳಿಕೊಂಡನು.

೪. ೫ ಸೌಜನ್ಯಶೀಲತೆಯ ನಿರಾಡಂಬರಿಗಳ ವರ್ತನೆ - ಈಶ್ವರಚಂದ್ರ ವಿದ್ಯಾಸಾಗರರು ಒಬ್ಬ ಸರಳ ಜೀವಿಗಳು. ಅವರ ವೇಷ ಭೂಷಣಗಳನ್ನು ನೋಡಿದರೆ ಅವರನ್ನು ಮಹಾವ್ಯಕ್ತಿಗಳೆಂದು ಗುರುತಿಸಲು ಯಾರಿಗೂ ಶಕ್ಯವಿರಲಿಲ್ಲ.

ಒಮ್ಮೆ ಈಶ್ವರಚಂದ್ರ ವಿದ್ಯಾಸಾಗರರು ರೈಲ್ವೆ ನಿಲ್ದಾಣದಲ್ಲಿ ಗಾಡಿಯಿಂದ ಇಳಿದು ಹೊರಟಾಗ ಒಬ್ಬ ಸುಸಜ್ಜಿತ ಸೂಟುಬೂಟಿನ ಅಧಿಕಾರಿಯು ''ಕೂಲೀ ಕೂಲೀ'' ಎಂದು ಕೂಗುತ್ತಾ ತನ್ನದೊಂದು ಬ್ಯಾಗನ್ನು ಹೊರಗಡೆಗೆ ಹೊತ್ತೊಯ್ಯುವುದು ಹೇಗೆಂದು ತಡವರಿಸುತ್ತಿದ್ದನು. ಅದನ್ನು ಕಂಡು ವಿದ್ಯಾಸಾಗರರು ನಿಲ್ದಾಣದ ಹೊರ ವಲಯದವರೆವಿಗೆ ಸಾಮಾನನ್ನು ಒಯ್ದು ಇಳಿಸಿದರು. ಅಧಿಕಾರಿಯು ಈ ಕೂಲಿಗೆ ಕಾಸು ಕೊಡಬೇಕೆಂದು ಕೈನೀಡುವಷ್ಟರಲ್ಲಿ ನಾಲ್ಕೆಂಟು ಜನ ದೊಡ್ಡ ಮನುಷ್ಯರು ಬಂದು, ಈ ಕೂಲಿಯ ಕೊರಳಿಗೆ ಹೂ ಮಾಲೆ ಹಾಕಿ, ಅವರನ್ನು ತಾವು ತಂದ ವಾಹನದತ್ತ ಕರೆದೊಯ್ದರು. ಆಗ ಆ ಬ್ಯಾಗಿನ ಅಧಿಕಾರಿಯು ಕೇಳಿ ತಿಳಿದುಕೊಂಡನು. ತನ್ನ ಗಂಟನ್ನು ಹೊತ್ತು ತಂದವನು ಕೂಲಿಯಾಗಿರದೇ ದೇಶ ವಿಖ್ಯಾತ ಈಶ್ವರಚಂದ್ರ ವಿದ್ಯಾಸಾಗರರೆಂದು. ಬಳಿಕ ಓಡುತ್ತಾ ಅವರು ಕುಳಿತ ವಾಹನದ ಬಳಿಗೆ ಹೋಗಿ ತನ್ನ ಅಚಾತುರ್ಯಕ್ಕೆ ಪಶ್ಚಾತ್ತಾಪಪಟ್ಟು ಅವರ ಕ್ಷಮೆಯಾಚಿಸಿದನು.

ವಿದ್ಯಾಸಾಗರರ ಚರ್ಯೆಗಳು ಮಾತಿಗಿಂತಲೂ ಹೆಚ್ಚು ಪ್ರಬಲವಾದ ಪ್ರಭಾವವನ್ನು ಅಶ್ಲೀಲ ವ್ಯಕ್ತಿಗಳ ಮೇಲೆ ಬೀರಿ ಸಮಾಜದ ಗುಣದೋಷಗಳ ಪರಿವರ್ತನೆಗೆ ಕಾರಣವಾಗಿದ್ದವು.

೫ **ಪಾಂಡಿತ್ಯ ಪ್ರವಚನಗಳ ಮೂಲಕ ಮಾನವೀಯತೆಯ ಚಿಂತನೆಗಳ ಪ್ರಚಾರ -** ಪಂಚ ವಿಕಾರಗಳಾದ ಕಾಮ, ಕ್ರೋಧ, ಲೋಭ, ಮೋಹ ಮತ್ತು ಅಹಂಕಾರಗಳು ದುಃಖ, ಅಶಾಂತಿ ಮತ್ತು ಸಮಸ್ಯೆಗಳಿಗೆ ಕಾರಣ. ಇವುಗಳ ನಿಯಂತ್ರಣಕ್ಕೆ ಸ್ಥಿರ, ದೃಢ ಮತ್ತುತೆರೆದ ಮನಸ್ಸು ಆವಶ್ಯಕ. ಈ ನಿಟ್ಟಿನಲ್ಲಿ ಗುರುಹಿರಿಯರು ಸಂತರು ಪ್ರಪಂಚದಾದ್ಯಂತ ಬೋಧಿಸಿರುವ ತತ್ವಗಳನ್ನು ಪರಿಭಾವಿಸಬೇಕು.

೬ **ಜ್ಞಾನಿಗಳಾದ ಸಂತರು, ಆಧ್ಯಾತ್ಮಿಕ, ಸಾಂಸ್ಕೃತಿಕ, ಪ್ರಕೃತಿಯ ವೈವಿಧ್ಯತೆಗಳ ಚಿಂತನೆಯನ್ನು ಬೋಧಿಸುವುದು -** 'ನೆಮ್ಮದಿ' ಎನ್ನುವುದು ಒಂದು ಸಂತುಷ್ಟ ಸ್ಥಿತಿ, ವಿಶದೀಕರಿಸುವುದಾದರೆ ನೆಮ್ಮದಿ ಅನೇಕ ಗುಣಗಳು ಮತ್ತು ಅವುಗಳ ಅನುಕರಣೆಯನ್ನು ಅವಲಂಬಿಸಿರುವುದು. ಈ ಗುಣಗಳೆಂದರೆ ದೇಹಾರೋಗ್ಯ, ಆರ್ಥಿಕ ಸ್ವಾವಲಂಬನೆ, ಸ್ವಕುಟುಂಬದಲ್ಲಿ ಹೊಂದಾಣಿಕೆ (ಐಕ್ಯತೆ) ಸ್ಥಿರ ಹಾಗೂ ಸಂತುಷ್ಟ ಜೀವನ, ಜೀವನದ ಉದ್ದಕ್ಕೂ ನಡೆದು ಬಂದ ಯಶಸ್ವಿ ಸಾಧನೆಗಳ ಸಂಕುಲನ ಸಮಾಜದಲ್ಲಿ ಹೊಂದಾಣಿಕೆ, ಎಲ್ಲಕ್ಕೂ ಮಿಗಿಲಾದ ಗುಣ ಮಾನಸಿಕ ಸ್ವಸ್ಥತೆ, ಇವುಗಳೆಲ್ಲಾ ನೆಮ್ಮದಿಗೆ ಹೊಂದಿಕೊಂಡ ಅಂಶಗಳು, ಸರ್ವ ಅಂಶಗಳು ಪರಿಪೂರ್ಣವಾಗಿ ಯಶಸ್ವಿಯಾಗದಿದ್ದರೂ ನೆಮ್ಮದಿ ಪಡೆಯುವುದು ಸಾಧ್ಯವೇ ? ಇದು ಒಂದು ಯಕ್ಷ ಪ್ರಶ್ನೆಯಾಗಬಹುದು. ನಮ್ಮ ಪೂರ್ವಜರು, ಗುರುಹಿರಿಯರು, ಅನುಭವಿಗಳು, ಮಹಾಪುರುಷರು, ಇದು ಸಾಧ್ಯವೆಂದು ಬೋಧಿಸಿ ಮಾರ್ಗಸೂಚಕವನ್ನು ಧ್ಯಾನ, ಯೋಗಗಳನ್ನೊಳಗೊಂಡ ಕ್ರಿಯೆಗಳ ಪ್ರಯೋಗಗಳಲ್ಲಿ ಪ್ರತಿಪಾದಿಸಿದ್ದಾರೆ. ಇದನ್ನು ಆಧ್ಯಾತ್ಮಿಕ ಚಿಂತನೆಯೆಂದು ಕರೆದಿದ್ದಾರೆ. ಹಿರಿಯ ನಾಗರಿಕರು ಇದರ ಸಾಧನೆಯನ್ನು ಅಭ್ಯಾಸ ಮಾಡಲು, ಜ್ಞಾನವನ್ನು ತಿಳಿದುಕೊಳ್ಳಲು ಪಕ್ವವಾಗಿರುವುದಲ್ಲದೆ ಸಮಾಜ ಹಾಗೂ ರಾಷ್ಟ್ರಕ್ಕೆ ಪ್ರಚುರಪಡಿಸಲು ಅರ್ಹರಾಗಿರುತ್ತಾರೆ.

ಆಧ್ಯಾತ್ಮಿಕ ಚಿಂತನೆಗೆ ಮೊದಲನೇ ಅಂಶವಾದ ಮಾನಸಿಕ ನೆಮ್ಮದಿ ಅಥವಾ ಸ್ವಸ್ಥತೆ ಪಡೆಯಲು ರಾಜಯೋಗದ ಅನುಸರಣೆ ಮುಖ್ಯ ರಾಜಯೋಗದ ಅಂಶಗಳೆಂದರೆ

೧ ಸದಾಕಾಲ ಆನಂದ, ಶಾಂತಿ, ಉಲ್ಲಾಸ, ಆತ್ಮತೃಪ್ತಿಗಳನ್ನು ಹೊಂದಿ ಪ್ರಸನ್ನತೆಯ ಮನಸ್ಸಿನಿಂದ ಕೂಡಿರುವುದು, ಆತ್ಮ ವಂಚನೆ, ಮನಸ್ಸಿನಲ್ಲಿ ಸಂಘರ್ಷಕ್ಕೆ ಎಡೆ ಕೊಡಬಾರದು.

೨ ಸಹವರ್ತಿಗಳೊಂದಿಗೆ ಹೊಂದಾಣಿಕೆಯಿಂದಿರುವುದು ತನ್ನ ಗುಣ ದೋಷ, ಟೀಕೆಗಳನ್ನು ಸೌಜನ್ಯದಿಂದ ಅಂಗೀಕರಿಸುವುದು.

೩ ಯಾವುದಕ್ಕೂ ಸುಲಭವಾಗಿ ಕಲಕದ ದೃಢ ಮನಸ್ಸು ಇತರರ ಭಾವಾವೇಷಗಳನ್ನು ಅರಿತುಕೊಳ್ಳುವ ಅಂತಃಕರಣ.

೪ ಎಲ್ಲಾ ಕಾರ್ಯಗಳನ್ನೂ ಸಭ್ಯತೆ, ವಿನಯಗಳಿಂದ ಪರಿಗಣಿಸುವ ಸದ್ಗುಣ, ಹೊಸ ಭಾವನೆ ಧ್ಯೇಯಗಳನ್ನು ಪಕ್ಷಪಾತವಿಲ್ಲದೆ ತೆರೆದ ಮನಸ್ಸಿನಿಂದ ಆಹ್ವಾನಿಸುವ ಗುಣ ಪಡೆದಿರಬೇಕು.

೫ ಭಯ, ಕೋಪ, ಉದ್ವೇಗ, ಈರ್ಷೆ, ಚಿಂತೆ, ಮೂಢನಂಬಿಕೆ ಇವುಗಳನ್ನು ನಿಯಂತ್ರಿಸಬೇಕು. ದಯೆ, ಧರ್ಮ, ಮೆದುನುಡಿ, ವಿನಯ, ಸಹಾನುಭೂತಿಗಳನ್ನೊಳಗೊಂಡ ಸಾತ್ವಿಕ ಜೀವನವನ್ನು ಅಳವಡಿಸಿಕೊಳ್ಳಬೇಕು.

೬ ಕಾಮ, ಕ್ರೋಧ, ಲೋಭ, ಮೋಹ ಮತ್ತು ಅಹಂಕಾರಗಳು, ದುಃಖ, ಅಶಾಂತಿಗಳನ್ನು ನಿಯಂತ್ರಿಸಲು ಸ್ಥಿರ, ದೃಢ ಮತ್ತು ತೆರೆದ ಮನಸ್ಸು ಆವಶ್ಯಕ.

ಆಧ್ಯಾತ್ಮಿಕ ಚಿಂತನೆ

ಪರಿಸರ, ಮನಸ್ಸು, ಶರೀರಗಳ ಜಂಜಾಟದಿಂದ ಹೊರ ಬಂದು ಜೀವನದಲ್ಲಿ ನೆಮ್ಮದಿ ತರುವ ಆಚರಣೆಯೇ ಆಧ್ಯಾತ್ಮಿಕ ಚಿಂತನೆ. ಧ್ಯಾನ, ಯೋಗಗಳನ್ನೊಳಗೊಂಡ ಚಿಂತನೆಗಳ ಕೊಡುಗೆಯೇ ಜ್ಞಾನಿಗಳಾಗಿದ್ದ ಸರ್ವಜ್ಞ, ದಾಸರುಗಳು, ಬಸವಣ್ಣನವರೇ ಮುಂತಾದ ಸತ್ಪುರುಷವಾಣಿ.

ರಾಜಯೋಗದಲ್ಲಿ ಆಧ್ಯಾತ್ಮಿಕ ಚಿಂತನವನ್ನು ಈ ರೀತಿ ವಿಶದೀಕರಿಸಿದೆ. ಹಿರಿಯ ನಾಗರಿಕರು ಇದನ್ನು ಮನನ ಮಾಡಿಕೊಂಡು ಪ್ರಚಾರ ಮಾಡಿ ಸಮಾಜದ ಉದ್ಧಾರಕ್ಕೆ ಅನುವಾಗಬೇಕು

೧ ನಾನು ಎನ್ನುವುದು ಒಂದು ಆತ್ಮ ಎಂಬ ಅರಿವಿನ ಕರಾರುವಾಕ್ಕಾದ ಜ್ಞಾನದ ಅನುಭವವನ್ನು ಪಡೆದಿರುವುದು.

೨ ಆತ್ಮವು ಶುದ್ಧವೂ ಹಾಗೂ ಶಾಂತಿದಾಯಕವೂ ಆಗಿರುವುದು.

೩ ಭೌತಿಕ ಪ್ರಪಂಚದ ಯಾವುದೇ ವಸ್ತುವಿನ ಪ್ರಲೋಭನಕ್ಕೆ ಅಂಟಿಕೊಳ್ಳದೇ ಇರುವುದು. ಭ್ರಾತೃಪ್ರೇಮದಿಂದ ಇತರ ಆತ್ಮಗಳಲ್ಲಿ ಹೊಂದಿಕೊಳ್ಳುವುದು.

೪ ಆತ್ಮ-ಪರಮಾತ್ಮಗಳ (ಪ್ರಕೃತಿ) ಸಂಯೋಗ.

ಆತ್ಮದ ಲಕ್ಷಣ, ಆತ್ಮ ಸಂಸ್ಕಾರ, ಆತ್ಮ ಸ್ವರೂಪ ಇವುಗಳ ಸಂಕೇತಗಳನ್ನು ಗಹನವಾಗಿ ಅಭ್ಯಾಸ ಮಾಡಿ ಸಮಾಜಕ್ಕೆ ಅರಿವು ಮಾಡಿಕೊಡಲು ಹಿರಿಯ ನಾಗರಿಕರು ಶ್ರಮ ವಹಿಸಬೇಕು.

ಕನ್ನಡ ಮತ್ತು ಹಿಂದೀ ಭಾಷೆಗಳ ಲಿಂಗ ವ್ಯವಸ್ಥೆ : ಒಂದು ವೈದೃಶ್ಯಾತ್ಮಕ ವಿಶ್ಲೇಷಣೆ

ಡಾ. ಬಿ. ಕೆ. ಸುವರ್ಣಾದೇವಿ

ಯಾವುದಾದರೂ ಎರಡು ಭಾಷೆಗಳ ವೈದೃಶ್ಯಾತ್ಮಕ ಅಂಶಗಳನ್ನು ವಿಶ್ಲೇಷಿಸಿ ವಿವರಿಸಿ ತೋರಿಸುವುದು ವೈದೃಶ್ಯಾತ್ಮಕ ಭಾಷಾ ವಿಜ್ಞಾನ (Contrastive Linguistics) ಎನಿಸಿಕೊಳ್ಳುತ್ತದೆ. ಭಾಷಾವಿಜ್ಞಾನ ಕ್ಷೇತ್ರದಲ್ಲಿ ವೈದೃಶ್ಯಾತ್ಮಕ ಅಧ್ಯಯನ ಆರಂಭಗೊಂಡಿದ್ದು ಇತ್ತೀಚೆಗೆ. ೧೯೫೭ರಲ್ಲಿ ರಾಬರ್ಟ್‌ಲ್ಯಾಡೊ ಎಂಬಾತನ "Linguistics Across culture" ಎಂಬ ಪುಸ್ತಕ ಹೊರಬಂದ ಬಳಿಕ ಭಾಷಾವಿಜ್ಞಾನ ಕ್ಷೇತ್ರದಲ್ಲಿ ವೈದೃಶ್ಯಾತ್ಮಕ ಅಧ್ಯಯನ ಆರಂಭಗೊಂಡಿತು.

ಯಾವುದಾದರೂ ಎರಡು ಭಾಷೆಗಳ ರಚನಾತ್ಮಕ ಅಂಶಗಳನ್ನು ಪರಸ್ಪರ ಹೋಲಿಸಿ ಪರಿಶೀಲಿಸಿದಾಗ ಅವುಗಳಲ್ಲಿ ಪರಸ್ಪರ ಸಮಾನ ಹಾಗೂ ಅಸಮಾನ ಅಂಶಗಳು ಇರುವುದು ಕಾಣಿಸಿಕೊಳ್ಳುತ್ತವೆ. ಈ ಎರಡು ಭಾಷೆಗಳಲ್ಲಿ ತೋರಿಬರುವ ಅಸಮಾನ ಅಂಶಗಳನ್ನೇ ಇಲ್ಲಿ ವೈದೃಶ್ಯಾತ್ಮಕ ಅಂಶಗಳು (Contrastive features) ಎಂದು ಕರೆಯುವರು.

ಯಾವ ಭಾಷೆಗಳಲ್ಲಿ ಸಮಾನ ಅಂಶಗಳು ಸಾಮಾನ್ಯವಾಗಿ ಹೆಚ್ಚಿರುತ್ತವೆಯೋ ಅಂತಹ ಭಾಷೆಗಳು ಸಾಮಾನ್ಯವಾಗಿ ಒಂದೇ ಭಾಷಾವರ್ಗಕ್ಕೆ ಸೇರಿದ ಭಾಷೆಗಳಾಗಿರುತ್ತವೆ. ಯಾವ ಭಾಷೆಗಳಲ್ಲಿ ಅಸಮಾನ ಅಂಶಗಳು ಹೆಚ್ಚಿರುತ್ತವೆಯೋ ಅಂತಹ ಭಾಷೆಗಳು ಸಾಮಾನ್ಯವಾಗಿ ಬೇರೆ ಬೇರೆ ಭಾಷಾವರ್ಗಕ್ಕೆ ಸೇರಿದ ಭಾಷೆಗಳಾಗಿರುತ್ತವೆ.

ಶಿಕ್ಷಣ ಕ್ಷೇತ್ರದಲ್ಲಿ ಭಾರತ ಸರ್ಕಾರ "ತ್ರಿಭಾಷಾ" ಸೂತ್ರವನ್ನು ಜಾರಿಗೆ ತಂದ ಮೇಲೆ ವಿದ್ಯಾರ್ಥಿಯೊಬ್ಬನು ಅನಿವಾರ್ಯವಾಗಿ ತನ್ನ ಮಾತೃಭಾಷೆಯ ಜೊತೆಗೆ ಮತ್ತೆರಡು ಪರಭಾಷೆಗಳನ್ನು ಕಲಿಯಬೇಕಾಗಿ ಬಂದಿತು. ಇದರಿಂದ ವಿದ್ಯಾರ್ಥಿಯು ತನ್ನ ಮಾತೃಭಾಷೆಯ ಜೊತೆಗೆ ಮತ್ತೆರಡು ಭಾಷೆಗಳನ್ನು ಕಲಿಯಲು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಹೀಗೆ ವಿದ್ಯಾರ್ಥಿ ಭಾಷಾ ಕಲಿಕೆಗೆ ಒಂದೇ ವರ್ಗಕ್ಕೆ ಸೇರಿದ ಬೇರೆ ಬೇರೆ ಭಾಷೆಗಳನ್ನು ಆರಿಸಿಕೊಳ್ಳಬಹುದು ಇಲ್ಲವೇ ಬೇರೆ ಬೇರೆ ಭಾಷಾವರ್ಗಕ್ಕೆ ಸೇರಿದ ಬೇರೆ ಬೇರೆ ಭಾಷೆಗಳನ್ನು ಆರಿಸಿಕೊಳ್ಳಬಹುದು.

ವಿದ್ಯಾರ್ಥಿಯು ಆಯ್ಕೆ ಮಾಡಿಕೊಂಡ ಆ ಎರಡು ಭಾಷೆಗಳು ಪರಸ್ಪರ ಒಂದೇ ವರ್ಗಕ್ಕೆ ಸೇರಿದವುಗಳಾಗಿದ್ದರೆ ಅವುಗಳಲ್ಲಿ ಸಮಾನ ಅಂಶಗಳು ಹೆಚ್ಚಿರುತ್ತವೆ. ಹೀಗೆ ಆರಿಸಿಕೊಂಡ ಭಾಷೆಗಳು ಪರಸ್ಪರ ಬೇರೆ ಬೇರೆ ವರ್ಗಕ್ಕೆ ಸೇರಿದ ಭಾಷೆಗಳಾಗಿದ್ದರೆ ಅವುಗಳಲ್ಲಿ ವೈದೃಶ್ಯ ಅಂಶಗಳು ಹೆಚ್ಚಿರುತ್ತವೆ. ಈ ಭಾಷೆಗಳಲ್ಲಿ ಕಾಣಿಸಿಕೊಳ್ಳುವ ಸಮಾನ ಮತ್ತು ಅಸಮಾನ ಅಂಶಗಳನ್ನು ವಿವರಿಸಿಕೊಂಡ ನಂತರವೆ ಅವನ್ನು ಕಲಿಯಲು ಸುಲಭವಾಗುವಂತೆ ಪಠ್ಯಕ್ರಮಗಳನ್ನು ರಚಿಸಿಕೊಳ್ಳಬೇಕಾಗುತ್ತದೆ. ಇಂತಹ ಪಠ್ಯಕ್ರಮಗಳ ತಯಾರಿಕೆಗೆ ವೈದೃಶ್ಯಾತ್ಮಕ ವಿಶ್ಲೇಷಣೆ ಹೆಚ್ಚು ಸಹಾಯಕವಾಗುವುದು.

ವಿದ್ಯಾರ್ಥಿಯು ಭಾಷಾ ಕಲಿಕೆಯ ಸಂದರ್ಭದಲ್ಲಿ ತಾನು ಆಯ್ಕೆ ಮಾಡಿಕೊಂಡ ಭಾಷೆಯನ್ನು ಕಲಿಯಬೇಕಾಗುವುದರಿಂದ ಇಂತಹ ಸಂದರ್ಭದಲ್ಲಿ ತನ್ನ ಮಾತೃಭಾಷೆಯ ಪ್ರಭಾವ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಮಾತೃಭಾಷೆಯ ಪ್ರಭಾವ ತಾನು ಕಲಿಯುವ ಭಾಷೆಯ ಉಚ್ಚಾರ, ಧ್ವನಿ, ಪದ ಮತ್ತು ವಾಕ್ಯಗಳ ಮಟ್ಟದಲ್ಲಿ ಕಾಣಿಸಿಕೊಳ್ಳಬಹುದು. ಇದರಿಂದ ಭಾಷಾ ಕಲಿಕೆಯಲ್ಲಿ ಬಗೆ ಬಗೆಯ ತಪ್ಪುಗಳು (errors) ಕಾಣಿಸಿಕೊಳ್ಳುತ್ತವೆ. ಇಂತಹ ತಪ್ಪುಗಳನ್ನು ದೂರಮಾಡಲು ಮತ್ತು ಅಂತಹ ತಪ್ಪುಗಳನ್ನು ತಿದ್ದಿಕೊಳ್ಳಲು ವೈದೃಶ್ಯಾತ್ಮಕ ವಿಶ್ಲೇಷಣೆ ನೆರವಾಗುತ್ತದೆ.

ಕನ್ನಡ ಭಾಷೆಯನ್ನು ಮಾತೃಭಾಷೆಯನ್ನಾಗಿ ಹೊಂದಿರುವ ಒಬ್ಬ ವಿದ್ಯಾರ್ಥಿ ಹಿಂದಿ ಭಾಷೆಯನ್ನು ಎರಡನೆಯ ಭಾಷೆಯನ್ನಾಗಿ ಕಲಿಯಲು ಹೊರಟಾಗ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ಸಮಸ್ಯೆಗಳನ್ನು ದೂರ ಮಾಡಲು ವಿದ್ಯಾರ್ಥಿಯ ಮಾತೃಭಾಷೆ ಮತ್ತು ಆಯ್ಕೆ ಮಾಡಿಕೊಂಡಿರುವ ಹಿಂದಿ ಭಾಷೆಗಳ ವೈದೃಶ್ಯಾತ್ಮಕ ಅಧ್ಯಯನವನ್ನು ಮಾಡಬೇಕಾಗುತ್ತದೆ. ಇದರಿಂದ ನಿರ್ಧಾರಿತವಾದ ವೈದೃಶ್ಯಾತ್ಮಕ ಅಂಶಗಳನ್ನು ಆಧರಿಸಿ ಹಿಂದಿ ಭಾಷೆಯ ಕಲಿಕೆಗೆ ನೆರವಾಗುವ ಪಠ್ಯಕ್ರಮಗಳನ್ನು ತಯಾರಿಸಬೇಕಾಗುತ್ತದೆ. ಇದರಲ್ಲಿ ಅಧ್ಯಾಪಕನ ಪಾತ್ರ ಮುಖ್ಯವಾದದ್ದು.

ಕನ್ನಡ ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವ ಭಾಷೆ. ಹಿಂದಿ ಉತ್ತರ ಭಾರತದಲ್ಲಿ ಬಳಕೆಯಲ್ಲಿರುವ ಭಾಷೆ. ಇವುಗಳಲ್ಲಿ ಒಂದು ದ್ರಾವಿಡ ಭಾಷಾವರ್ಗಕ್ಕೆ ಸೇರಿದ್ದು, ಇನ್ನೊಂದು ಇಂಡೋ ಆರ್ಯನ್ ಭಾಷಾವರ್ಗಕ್ಕೆ ಸೇರಿದ್ದಾಗಿದೆ.

ಪ್ರಸ್ತುತ ಲೇಖನದಲ್ಲಿ ಕನ್ನಡ ಮತ್ತು ಹಿಂದಿ ಭಾಷೆಗಳ ನಾಮಪದಗಳಲ್ಲಿ ಕಂಡು ಬರುವ ಲಿಂಗವ್ಯವಸ್ಥೆಯ ಸಮಸ್ಯೆಗಳನ್ನು ವಿವರಿಸಿಕೊಳ್ಳಲು ಪ್ರಯತ್ನ ಮಾಡಲಾಗಿದೆ.

ಯಾವ ಭಾಷೆಗಳಲ್ಲಿ ಶಬ್ದಗಳು ಲಿಂಗ, ವಚನ ಮತ್ತು ವಿಭಕ್ತಿ ಪ್ರತ್ಯಯಗಳನ್ನು ಪಡೆಯುತ್ತವೆಯೋ ಅಂತಹ ಶಬ್ದಗಳು ಸಾಮಾನ್ಯವಾಗಿ ನಾಮಪದಗಳಾಗುತ್ತವೆ. ಈ ನಾಮಪದಗಳ ಸ್ವರೂಪ ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ ಬೇರೆ ಬೇರೆಯಾಗಿ ಕಾಣಿಸಿ ಕೊಳ್ಳುತ್ತವೆ. ನಾಮಪದಗಳನ್ನು ಅವು ತೆಗೆದುಕೊಳ್ಳುವ ಲಿಂಗ ಮತ್ತು ವಚನ ಪ್ರತ್ಯಯಗಳನ್ನು ಆಧರಿಸಿ ವರ್ಗೀಕರಿಸಿಕೊಳ್ಳುವುದು ರೂಢಿ. ಹಿಂದಿ ಭಾಷೆಯಲ್ಲಿ ಎರಡು

ಬಗೆಯ ನಾಮಪದಗಳು (ಪುಲ್ಲಿಂಗ ಮತ್ತು ಸ್ತ್ರೀಲಿಂಗ) ಕಾಣಿಸಿಕೊಂಡರೆ, ಕನ್ನಡದಲ್ಲಿ ಮೂರು ಬಗೆಯ (ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ) ನಾಮಪದಗಳು ಕಾಣಿಸಿಕೊಳ್ಳುತ್ತವೆ. ಹಿಂದಿ ಭಾಷೆಯಲ್ಲಿ ನಪುಂಸಕಲಿಂಗ ಸೂಚಕ ನಾಮಪದಗಳಿಲ್ಲ. ಇವು ಪುಲ್ಲಿಂಗ ಇಲ್ಲವೇ ಸ್ತ್ರೀಲಿಂಗ ಸೂಚಕ ನಾಮಪದಗಳಲ್ಲಿಯೇ ಐಕ್ಯವಾಗಿ ಹೋಗುತ್ತವೆ. ಹಿಂದಿ ಭಾಷೆಯಲ್ಲಿ ನಾಮಪದಗಳ ವರ್ಗೀಕರಣ ಶಬ್ದ ಮತ್ತು ವ್ಯಾಕರಣ ಆಧಾರಿತವಾಗಿದ್ದರೆ, ಕನ್ನಡ ಭಾಷೆಯ ನಾಮಪದಗಳ ವರ್ಗೀಕರಣ ಅರ್ಥ ಮತ್ತು ವ್ಯಾಕರಣ ಆಧಾರಿತವಾಗಿರುತ್ತದೆ.

ಕನ್ನಡದಲ್ಲಿ ಲಿಂಗವ್ಯವಸ್ಥೆ ಮಹತ್ ಮತ್ತು ಅಮಹತ್ ವರ್ಗಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಅಮಹತ್ ವರ್ಗಕ್ಕೆ ಸೇರಿದ ನಾಮಪದಗಳು ಕನ್ನಡದಲ್ಲಿ ಸಾಮಾನ್ಯವಾಗಿ ನಪುಂಸಕ ಸೂಚಕ ನಾಮಪದಗಳಾಗುತ್ತವೆ. ಹಿಂದಿ ಭಾಷೆಯಲ್ಲಿ ಈ ವ್ಯವಸ್ಥೆ ಇಲ್ಲ. ಹಿಂದಿ ಭಾಷೆಯಲ್ಲಿ ನಪುಂಸಕಲಿಂಗ ಸೂಚಕ ನಾಮಪದಗಳು ಇಲ್ಲದ ಕಾರಣ ಇವು ಪುಲ್ಲಿಂಗ ಅಥವಾ ಸ್ತ್ರೀಲಿಂಗದಲ್ಲಿ ಸೇರುತ್ತವೆ. ಮಾತ್ರವಲ್ಲದೆ ಕೆಲವು ವೇಳೆ ಪುಲ್ಲಿಂಗ ಸೂಚಕ ನಾಮಪದಗಳು ಸ್ತ್ರೀಲಿಂಗ ಸೂಚಕ ನಾಮಪದಗಳಾಗುತ್ತವೆ. ಮತ್ತೆ ಕೆಲವು ವೇಳೆ ಸ್ತ್ರೀಲಿಂಗ ಸೂಚಕ ನಾಮಪದಗಳು ಪುಲ್ಲಿಂಗ ಸೂಚಕ ನಾಮಪದಗಳಾಗುತ್ತವೆ. ಇವನ್ನು ವ್ಯಾಕರಣ ಮತ್ತು ಶಬ್ದಗಳ ಅಂತ್ಯದ ಸ್ವರ ಅಥವಾ ವ್ಯಂಜನಗಳನ್ನು ಆಧರಿಸಿ ವಿವರಿಸಿಕೊಳ್ಳಬೇಕಾಗುತ್ತದೆ. ಈ ಕಾರಣದಿಂದ ಹಿಂದಿ ಮತ್ತು ಕನ್ನಡ ಭಾಷೆಗಳ ನಾಮಪದಗಳನ್ನು ಅವುಗಳ ರಚನಾತ್ಮಕ ಅಂಶಗಳನ್ನು ಗಮನಿಸಿ ವಿವರಿಸಿಕೊಳ್ಳಬೇಕಾಗುತ್ತದೆ.

ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ ತೋರಿಬರುವ ಲಿಂಗ ಸೂಚಕ ನಾಮಪದಗಳ ವೈಶಿಷ್ಟ್ಯಗಳನ್ನು ಈ ಕೆಳಗೆ ಕಾಣಿಸಿರುವಂತೆ ವಿವರಿಸಿಕೊಳ್ಳಬಹುದು.

ಅ ಕನ್ನಡ

೧ ಕೆಲವು-ಅ ಕಾರಾಂತ್ಯ ನಾಮಪದಗಳು ಪುಲ್ಲಿಂಗವನ್ನು, ಮತ್ತೆ ಕೆಲವು - ಇ ಕಾರಾಂತ್ಯ ನಾಮಪದಗಳು ಸ್ತ್ರೀಲಿಂಗವನ್ನು ಸೂಚಿಸುತ್ತವೆ.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ಹುಡುಗ	ಹುಡುಗಿ
	ಮುದುಕ	ಮುದುಕಿ
	ಕುರುಡ	ಕುರುಡಿ

೨ ಕೆಲವು -ಅಕಾರಾಂತ್ಯ ನಾಮಪದಗಳು ಪುಲ್ಲಿಂಗವನ್ನು, ಮತ್ತೆ ಕೆಲವು - ಎ ಕಾರಾಂತ್ಯ ನಾಮಪದಗಳು ಸ್ತ್ರೀಲಿಂಗವನ್ನು ಸೂಚಿಸುತ್ತವೆ.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ಜಾಣ	ಜಾಣೆ
	ಗುಣವಂತ	ಗುಣವಂತೆ
	ಸಿರಿವಂತ	ಸಿರಿವಂತೆ

೩ ಕೆಲವು -ಗಾರ, ಅಂತ್ಯ ನಾಮಪದಗಳು ಪುಲ್ಲಿಂಗವನ್ನು, ಮತ್ತೆ ಕೆಲವು - ಗಾತಿ, ಅಂತ್ಯ ನಾಮಪದಗಳು ಸ್ತ್ರೀಲಿಂಗವನ್ನು ಸೂಚಿಸುತ್ತವೆ.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ಸಾಲಗಾರ	ಸಾಲಗಾತಿ
	ಮೋಸಗಾರ	ಮೋಸಗಾತಿ
	ಕೊಲೆಗಾರ	ಕೊಲೆಗಾತಿ

೪ ಕೆಲವು-ಇಗ, ಅಂತ್ಯ ನಾಮಪದಗಳು ಪುಲ್ಲಿಂಗವನ್ನು, ಮತ್ತೆ ಕೆಲವು - ಗಿತ್ತಿ, (-ಇತ್ತಿ) ಅಂತ್ಯ ನಾಮಪದಗಳು ಸ್ತ್ರೀಲಿಂಗವನ್ನು ಸೂಚಿಸುತ್ತವೆ. ಇವು ಜಾತಿ, ವರ್ಗ ಮತ್ತು ವೃತ್ತಿಯನ್ನು ನಿರ್ದೇಶಿಸುತ್ತವೆ.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ಗಾಣಿಗ	ಗಾಣಿಗಿತ್ತಿ
	ಒಕ್ಕಲಿಗ	ಒಕ್ಕಲಿಗಿತ್ತಿ
	ಹಾವಾಡಿಗ	ಹಾವಾಡಗಿತ್ತಿ

೫ ಕೆಲವು-ಅನು ಎಂಬ ಅಂತ್ಯ ನಾಮಪದಗಳು ಪುಲ್ಲಿಂಗವನ್ನು, ಕೆಲವು -ಅಳು ಎಂಬ ಅಂತ್ಯ ನಾಮಪದಗಳು ಸ್ತ್ರೀಲಿಂಗವನ್ನು ಸೂಚಿಸುತ್ತವೆ. ಇವು ಸಾಮಾನ್ಯವಾಗಿ ಗುಣವಾಚಕ ಮತ್ತು ಸರ್ವನಾಮರೂಪಗಳಿಂದ ರೂಪುಗೊಂಡ ನಾಮಪದಗಳಾಗಿರುತ್ತವೆ.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ಒಳ್ಳೆಯವನು	ಒಳ್ಳೆಯವಳು
	ದೊಡ್ಡವನು	ದೊಡ್ಡವಳು
	ಚಿಕ್ಕವನು	ಚಿಕ್ಕವಳು

೬ ಕೆಲವು ನಾಮಪದಗಳು ಪುಲ್ಲಿಂಗ ಮತ್ತು ಸ್ತ್ರೀಲಿಂಗ ನಿರ್ದೇಶನಕ್ಕೆ ಗಂಡು ಮತ್ತು ಹೆಣ್ಣು ಎಂಬ ಸ್ವತಂತ್ರ ರೂಪಗಳನ್ನು (ವಿಶೇಷಣ) ಪಡೆಯುತ್ತವೆ.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ಗಂಡುಹುಲಿ	ಹೆಣ್ಣುಹುಲಿ
	ಗಂಡುಮಗು	ಹೆಣ್ಣುಮಗು
	ಗಂಡುಕೋತಿ	ಹೆಣ್ಣುಕೋತಿ

೭ ಕೆಲವು ನಾಮಪದಗಳು ಮೂಲತಃ ಪುಲ್ಲಿಂಗ ಮತ್ತು ಸ್ತ್ರೀಲಿಂಗರೂಪಗಳನ್ನು ಪ್ರತ್ಯೇಕವಾಗಿ ಹೊಂದಿವೆ.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ಎತ್ತು	ಹಸು
	ಕೋಣ	ಎಮ್ಮೆ
	ಹೋತ	ಆಡು
	ಟಗರು	ಕುರಿ
	ಹುಂಜ	ಕೋಳಿ

೮ ಕೆಲವು ನಾಮಪದಗಳು ಪುಲ್ಲಿಂಗ ಮತ್ತು ಸ್ತ್ರೀಲಿಂಗ ಸೂಚನೆಗೆ ಸ್ವತಂತ್ರ ರೂಪಗಳನ್ನು ಪ್ರತ್ಯೇಕವಾಗಿ ಹೊಂದಿರುತ್ತವೆ. ಇವು ಸಾಮಾನ್ಯವಾಗಿ ಸಂಬಂಧ ಸೂಚಕ ರೂಪಗಳಾಗಿರುತ್ತವೆ.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ತಂದೆ	ತಾಯಿ
	ಮಾವ	ಅತ್ತೆ
	ಗಂಡ	ಹೆಂಡತಿ

ಈ ಮೇಲಿನ ಕನ್ನಡ ನಾಮಪದಗಳನ್ನು ಹಿಂದಿ ಭಾಷೆಯ ನಾಮಪದಗಳೊಡನೆ ಹೋಲಿಸಿದಾಗ ಅವು ನಮ್ಮದೇ ಆದ ರೀತಿಯಲ್ಲಿರುವುದು ಕಾಣಿಸಿಕೊಳ್ಳುತ್ತವೆ.

ಆ ಹಿಂದಿ

೧ ಅ-ಕಾರಾಂತ್ಯ ನಾಮಪದಗಳು ಪುಲ್ಲಿಂಗವನ್ನು - ಇ - ಈಕಾರಾಂತ್ಯ ನಾಮಪದಗಳು ಸ್ತ್ರೀಲಿಂಗವನ್ನು ಸೂಚಿಸುತ್ತವೆ.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ಲಡ್ಕ (ಹುಡುಗ)	ಲಡ್ಕಿ (ಹುಡುಗಿ)
	ಮುರ್ಗ (ಹುಂಜ)	ಮುರ್ಗಿ (ಕೋಳಿ)

೨ ಕೆಲವು ನಾಮಪದಗಳು -ಅ-ಆ ಕಾರಾಂತ್ಯವಾಗಿದ್ದರೂ ಸ್ತ್ರೀಲಿಂಗವನ್ನು ಮತ್ತೆ ಕೆಲವು ನಾಮಪದಗಳು -ಇ,-ಈ, ಕಾರಾಂತ್ಯವಾಗಿದ್ದರೂ ಪುಲ್ಲಿಂಗವನ್ನು ಸೂಚಿಸುತ್ತವೆ. ಇವು ಕನ್ನಡದಲ್ಲಿಲ್ಲ. ಇದಕ್ಕೆ ಹಿಂದಿಯಲ್ಲಿ ನಪುಂಸಕಲಿಂಗ ಇಲ್ಲದ್ದು ಮುಖ್ಯ ಕಾರಣ.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ಹಾಥಿ (ಆನೆ)	ಕಲಾ (ಕಲೆ)
	ಮೋತಿ (ಮುತ್ತು)	ಮಾಲಾ (ಮಾಲೆ)
	ಸಾಥಿ (ಸ್ನೇಹಿತ)	ಶಾಲಾ (ಶಾಲೆ)

೩ ಕೆಲವು-ಇಕಾರಾಂತ್ಯ ನಾಮಪದಗಳು ಪುಲ್ಲಿಂಗವನ್ನು ಸೂಚಿಸುತ್ತವೆಯಾದರೂ ಇವು ಜಾತಿ, ವರ್ಗ ಮತ್ತು ವೃತ್ತಿಯನ್ನು ನಿರ್ದೇಶಿಸುತ್ತವೆ.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ಧೋಬಿ (ಅಗಸ)	ಧೋಬಿನ್ (ಅಗಸಗಿತ್ತಿ)
	ಮಾಲಿಕ್ (ಯಜಮಾನ)	ಮಾಲ್ಕಿನ್ (ಯಜಮಾನಿ)

೪ ಆರ್ ನಿಂದ ಅಂತ್ಯವಾಗುವ ಕೆಲವು ನಾಮಪದಗಳು ಪುಲ್ಲಿಂಗವನ್ನು -ಇನ್ ನಿಂದ ಅಂತ್ಯವಾಗುವ ಕೆಲವು ನಾಮಪದಗಳು ಸ್ತ್ರೀಲಿಂಗವನ್ನು ಸೂಚಿಸುತ್ತವೆ.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ಲೋಹಾರ್ (ಆಚಾರಿ)	ಲೋಹಾರಿನ್ (ಆಚಾರ್ತಿ)
	ಸೋನಾರ್ (ಅಕ್ಕಸಾಲಿಗ)	ಸೋನಾರಿನ್ (ಅಕ್ಕಸಾಲಿಗಿತ್ತಿ)

೫ ಅ ಕಾರಾಂತ್ಯ ಕೆಲವು ನಾಮಪದಗಳು ಪುಲ್ಲಿಂಗವನ್ನು - ಇ ಕಾರಾಂತ್ಯ ನಾಮಪದಗಳು ಸ್ತ್ರೀಲಿಂಗವನ್ನು ಸೂಚಿಸುತ್ತವೆ.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ಹಿರಣ್ (ಸಾರಗ)	ಹಿರಣಿ (ಜಿಂಕೆ)

೬ ಕೆಲವು ಸಂಬಂಧವಾಚಕ ನಾಮಪದಗಳು-ರ್ ನಿಂದ ಅಂತ್ಯವಾಗಿ ಪುಲ್ಲಿಂಗವನ್ನು - ಇ ಯಿಂದ ಅಂತ್ಯವಾಗಿ ಸ್ತ್ರೀಲಿಂಗವನ್ನು ಸೂಚಿಸುವುದುಂಟು.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ದೇವರ್ (ಮೈದ)	ದೇವರಾನಿ (ಮೈದ್ನಿ)
	ನೌಕರ್ (ಸೇವಕ)	ನೌಕರಾನಿ (ಸೇವಕಿ)

೭ ಕೆಲವು ನಾಮಪದಗಳು ಅವುಗಳ ಪುಲ್ಲಿಂಗ ಮತ್ತು ಸ್ತ್ರೀಲಿಂಗ ನಿರ್ದೇಶನಕ್ಕೆ ಕೆಲವು ಸ್ವತಂತ್ರ ರೂಪಗಳನ್ನು ಪಡೆಯುತ್ತವೆ. ಈ ಪ್ರಕ್ರಿಯೆ ಕನ್ನಡದಲ್ಲಿಯೂ ಉಂಟು.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ನರ್‌ಕೌವ (ಗಂಡುಕಾಗೆ)	ಮಾದಾಕೌವ (ಹೆಣ್ಣುಕಾಗೆ)

೮ ಕೆಲವು ಸ್ವತಂತ್ರ ರೂಪಗಳು ಪುಲ್ಲಿಂಗ ಮತ್ತು ಸ್ತ್ರೀಲಿಂಗ ಸೂಚನೆಗೆ ಪ್ರತ್ಯೇಕವಾಗಿ ಕನ್ನಡದಂತೆ ಬಳಕೆಯಲ್ಲಿವೆ.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ಬೈಲ್ (ಎತ್ತು)	ಗಾಯ್ (ಹಸು)
	ಭಾಯಿ (ಸಹೋದರ)	ಬಹನ್ (ಸಹೋದರಿ)

ಈ ಮೇಲೆ ವಿವರಿಸಿಕೊಂಡಿರುವ ಪುಲ್ಲಿಂಗ ಮತ್ತು ಸ್ತ್ರೀಲಿಂಗ ಸೂಚಕ ನಾಮಪದಗಳನ್ನು ಗಮನಿಸಿದಾಗ ಕನ್ನಡ ಮತ್ತು ಹಿಂದಿ ಭಾಷೆಗಳೆರಡರಲ್ಲಿಯೂ ಪ್ರತ್ಯಯ ಮತ್ತು ನಾಮಪದಗಳಿಗೆ ನೇರವಾದ ಸಂಬಂಧ ಇದ್ದಂತೆ ಕಂಡುಬರುತ್ತದೆ. ಈ ಸಂಬಂಧ ಅರ್ಥ ಆಧಾರಿತವಲ್ಲ. ವ್ಯಾಕರಣ ಮತ್ತು ಶಬ್ದ ಆಧಾರಿತವಾದದ್ದು. ಈ ವಿಚಾರ ಹಿಂದಿ ಭಾಷೆಗೆ ಹೆಚ್ಚು ಅನ್ವಯವಾಗುತ್ತದೆ.

ಕನ್ನಡ ಮತ್ತು ಹಿಂದಿ ಭಾಷೆಗಳು ಬೇರೆ ಬೇರೆ ಭಾಷೆಗಳಿಂದ ಅನೇಕ ಶಬ್ದಗಳನ್ನು ಎರವಲು ಪಡೆದಿವೆ. ಈ ಶಬ್ದಗಳಲ್ಲಿ ಸಂಸ್ಕೃತ ಶಬ್ದಗಳೇ ಹೆಚ್ಚು. ಕನ್ನಡದಲ್ಲಿ ಸಂಸ್ಕೃತ ಶಬ್ದಗಳು ಹೇರಳವಾಗಿ ಬಳಕೆಯಲ್ಲಿವೆ. ಹಿಂದಿ ಮತ್ತು ಸಂಸ್ಕೃತ ಭಾಷೆಗಳು ಒಂದೇ ವರ್ಗಕ್ಕೆ ಸೇರಿದ ಭಾಷೆಗಳಾದುದರಿಂದ ಹಿಂದಿ ಭಾಷೆಯಲ್ಲಿ ಸಂಸ್ಕೃತ ಶಬ್ದಗಳು ಹೆಚ್ಚು ಬದಲಾವಣೆ ಹೊಂದದೆ ಬಳಕೆಯಲ್ಲಿರುತ್ತವೆ. ಕನ್ನಡದಲ್ಲಿ ಸಂಸ್ಕೃತ ಶಬ್ದಗಳು ಕನ್ನಡ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಒಮ್ಮೊಮ್ಮೆ ಕೆಲವೊಮ್ಮೆ ಬದಲಾವಣೆ ಹೊಂದಿ ಬಳಕೆಯಲ್ಲಿವೆ. ಇದನ್ನು ತಿಳಿಯಲು ಈ ಕೆಳಗಿನ ಉದಾಹರಣೆಗಳನ್ನು ಗಮನಿಸಬಹುದು.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ಬುದ್ಧಿಮಾನ್ (ಬುದ್ಧಿವಂತ)	ಬುದ್ಧಿಮತಿ (ಬುದ್ಧಿವಂತೆ)
	ಧನವಾನ್ (ಹಣವಂತ)	ಧನಮತಿ (ಹಣವಂತೆ)

ಹಿಂದಿ ಭಾಷೆಯಲ್ಲಿ ಸಂಸ್ಕೃತ ಶಬ್ದಗಳು ಮೂಲದಂತೆಯೇ ಬಳಕೆಯಲ್ಲಿದ್ದರೆ ಕನ್ನಡದಲ್ಲಿ ಅವು ಮೂಲಕ್ಕಿಂತ ಸ್ವಲ್ಪ ಭಿನ್ನವಾಗಿರುವಂತೆ ಕಾಣಿಸಿಕೊಳ್ಳುತ್ತವೆ.

ಉದಾ :	*ಪುಲ್ಲಿಂಗ*	*ಸ್ತ್ರೀಲಿಂಗ*
	ಅಭಿನೇತಾ	ಅಭಿನೇತ್ರಿ
	ಧಾತಾ	ಧಾತ್ರಿ
	ಸೇವಕ್ (ಸೇವಕ)	ಸೇವಕಿ
	ಬಾಲಕ್ (ಬಾಲಕ)	ಬಾಲಕಿ
	ಪ್ರಿಯತಮ್ (ಪ್ರಿಯತಮ)	ಪ್ರಿಯತಮೆ.

ಹೀಗೆ ಮೂಲದಲ್ಲಿ ಕಾಣಿಸಿಕೊಂಡ ಹೆಚ್ಚು ಸಂಸ್ಕೃತ ಶಬ್ದಗಳು ಹಿಂದಿ ಭಾಷೆಯಲ್ಲಿ ಹೆಚ್ಚು ಬದಲಾಗದೆ ಬಳಕೆಯಲ್ಲಿದ್ದರೆ ಕನ್ನಡದಲ್ಲಿ ಅಲ್ಪಸ್ವಲ್ಪ ಬದಲಾವಣೆಯೊಡನೆ ಬಳಕೆಯಲ್ಲಿರುವುದನ್ನು ಈ ಮೇಲಿನ ಉದಾಹರಣೆಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದು.

ಹಿಂದಿ ಭಾಷೆಯನ್ನು ಕಲಿಯಲು ಹೊರಟ ಕನ್ನಡಿಗ ಬಾಲಕ್, ಸೇವಕ್, ಪ್ರಿಯತಮ್ ಎಂಬ ಪದಗಳನ್ನು ಬಾಲಕ (ಬಾಲಕಿ), ಸೇವಕ (ಸೇವಕಿ), ಪ್ರಿಯತಮ (ಪ್ರಿಯತಮೆ) ಎಂದು ಬಳಸುತ್ತಾನೆ. ಇದಕ್ಕೆ ಅವನ ಮಾತೃಭಾಷೆಯ ಪ್ರಭಾವ ಕಾರಣ.

ಕೆಲವು ವೇಳೆ ಹಿಂದಿ ಮತ್ತು ಕನ್ನಡ ಭಾಷೆಗಳ ಲಿಂಗ ವ್ಯವಸ್ಥೆ ಒಂದೇ ಬಗೆಯಲ್ಲಿರುವುದಿಲ್ಲ ಎಂಬುದನ್ನು ವೈದೃಶ್ಯ ಅಂಶಗಳಿಂದ ಖಚಿತಪಡಿಸಿಕೊಳ್ಳಬಹುದು. ಎಲ್ಲಿ ಕಲಿಕೆ ಸಮಸ್ಯೆಯಾಗುತ್ತದೆ ಎಂಬುದನ್ನು ಗಮನಿಸಿಯೇ ಭಾಷಾಕಲಿಕೆಯನ್ನು ಮುಂದುವರಿಸಬೇಕಾಗುತ್ತದೆ.

ಆಧಾರಗ್ರಂಥಗಳು

1 *Chaturvedi. M.G. 1973, A Contrastive study of Hindi and English phonology. Delhi*

2 *Fisiak . J.(ed) 1981, Contrastive linguistics and the language teacher. Oxford.*

3 *Ganesan. S.N. 1975, A Contrastive Grammar of Hindi and Tamil, University of Madras. Madras. (Chennai)*

4 *Geeta kumari. V. 1996, A Contrastive Analysis of Hindi and Malayalam. University of Kerala, Kerala.*

5 *Nickel. G. 1971, Papers in Contrastive linguistics Cambridge, London.*

6 *Subramaniam. V.I. and Parameswara, H. 1976, Gender in Hindi. A pedagogical point of view in IJDL. Vol. 5. No.1.*

ಬಸವಣ್ಣನವರ ಸಾಧನೆ : ಸಿದ್ಧಿ ಮತ್ತು ವ್ಯಕ್ತಿತ್ವ

ಪ್ರೊ . ಎಂ. ರಾಮಚಂದ್ರ

ಕನ್ನಡ ನಾಡಿನ ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಪ್ರಮುಖವಾಗಿ ಅಲ್ಲಿ ಅನೇಕ ಮಹಾಪುರುಷರು ಗೋಚರಿಸುತ್ತಾರೆ. ಸಂತರು, ಧಾರ್ಮಿಕರು ಶರಣರ ದಾಸರ, ಕವಿಗಳ, ಸಾಧಕರ, ಕಲಾವಿದರ, ಸಮಾಜ ಸುಧಾರಕರ-ಹಲವಾರು ಕ್ಷೇತ್ರಗಳಲ್ಲಿ ಆಧ್ಯಾತ್ಮಿಕ ಪರಂಪರೆ ಹೊಂದಿದ್ದು ವಿಶ್ವಧರ್ಮಗಳ ದರ್ಶನಕ್ಕೆ ಮತ್ತು ಧರ್ಮ ಸಮನ್ವಯಕ್ಕೆ ತಮ್ಮ ಅಪಾರ ಕೊಡುಗೆಯನ್ನು ಕೊಟ್ಟಿದೆ. ನಾಡಿನ ಜನತೆಗಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡು ಅಮರರಾಗಿರುವ ನೂರಾರು ಜನರ ಹೆಸರುಗಳು ಅಲ್ಲಿವೆ. ವಾಸ್ತವವಾಗಿ ನೋಡಿದರೆ ಇವರ ಇತಿಹಾಸವೇ ಕನ್ನಡ ನಾಡಿನ ಇತಿಹಾಸ. ಇವರಿಂದಲೇ ಆ ಇತಿಹಾಸ ಮಾನ್ಯವಾಗಿರುವುದು. ಇವರಿಂದಲೇ ಕನ್ನಡ ನಾಡು ಹೆಮ್ಮೆಯಿಂದ ತಲೆಯೆತ್ತಿ ನಿಲ್ಲುವ ಸಾಮರ್ಥ್ಯವನ್ನು ಪಡೆದುಕೊಂಡಿರುವುದು. ಇವರೇ ಕನ್ನಡ ನಾಡಿನ ಆಸ್ತಿ. ಈ ಮಹನೀಯರ ಸಾಲಲ್ಲಿ ಬಸವಣ್ಣನವರ ಹೆಸರು ಧ್ರುವತಾರೆಯಂತಿದೆ.

ಬಸವಣ್ಣನವರು ಒಂದು ಮಹಾನ್ ಶಕ್ತಿ. ಅವರ ವ್ಯಕ್ತಿತ್ವ ಬಹುಮುಖವಾದುದು. ಅವರ ಜೀವನ ಹಲವು ಕ್ಷೇತ್ರಗಳಲ್ಲಿ ಹರಿಯಿತು. ಬಿಜ್ಜಳನ ಆಸ್ಥಾನದಲ್ಲಿ ಅಧಿಕಾರಿಯಾಗಿ ಕೆಲಸ ಮಾಡಿದರು : ತಮ್ಮ ಧರ್ಮವನ್ನು ಪ್ರಚಾರ ಮಾಡಲು ಶ್ರಮಿಸಿದರು. ಸಮಾಜ ಸುಧಾರಣೆಗೆ ಕೈಹಾಕಿದರು. ವಚನಗಳನ್ನು ಬರೆದರು, ವೈಯಕ್ತಿಕವಾದ ಸಾಧನೆಯನ್ನು ಕೈಗೊಂಡರು. ಅವರ ವ್ಯಕ್ತಿತ್ವವು, ಸಾಧನೆ ಸಿದ್ಧಿಗಳು ಅವರು ತಮ್ಮ ಪರಿಸರದೊಂದಿಗೆ ನಡೆಸಿದ ಹೋರಾಟವು ಅವರಿಗೆ ಹಿನ್ನೆಲೆಯಾಗಿದ್ದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಪರಿಸ್ಥಿತಿಗಳು ಮಹತ್ವವಾದವುಗಳು.

ಹನ್ನೆರಡನೆಯ ಶತಮಾನದಲ್ಲಿ ಮಹಾಮಾನವತಾವಾದಿ ಬಸವಣ್ಣನವರ ನಾಯಕತ್ವದಲ್ಲಿ ಕಲ್ಯಾಣವನ್ನು ಕೇಂದ್ರವಾಗಿಟ್ಟುಕೊಂಡು ನಾಡಿನಾದ್ಯಂತ ನಡೆದ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಹಿತ್ಯಿಕ ಕ್ರಾಂತಿ - ಇಡೀ ಜಗತ್ತಿನಲ್ಲಿಯೇ ಅದ್ವಿತೀಯವಾದುದು. ಅವರು ಸಾರಿದ ಮಾನವೀಯ ಮೌಲ್ಯಗಳು ನಿತ್ಯನೂತನ ಸತ್ಯವಾಗಿವೆ. ಆಧ್ಯಾತ್ಮಿಕ ತಳಹದಿಯ ಮೇಲೆ ಜಾತ್ಯಾತೀತ ವರ್ಗರಹಿತ ಸಮಾಜವನ್ನು ಕಟ್ಟುವ ಪ್ರಯೋಗವನ್ನು ಅವರು ೧೨ನೆಯ ಶತಮಾನದಲ್ಲಿಯೇ ಮಾಡಿದರು. ಅವರು

ಅರಿತು ಆಚರಿಸಿದ ತತ್ವಗಳು ಇಂದಿನ ಪ್ರಗತಿಪರ ವೈಜ್ಞಾನಿಕ ಯುಗವೂ ಕೂಡ ಜೀರ್ಣಿಸಿಕೊಳ್ಳಲಾಗದಷ್ಟು ಮುಂದುವರಿದವುಗಳಾಗಿವೆ. ಅಸ್ಪೃಶ್ಯತಾ ನಿವಾರಣೆ, ಸ್ತ್ರೀಯರಿಗೆ ಸಮಾನ ಹಕ್ಕು, ಆಧ್ಯಾತ್ಮಿಕ ತಳಹದಿಯ ಮೇಲೆ ಸರ್ವಸಮಾನತೆಯನ್ನು ಅಳವಡಿಸಿಕೊಂಡು ಸಮಾಜ ರಚನೆ ಮುಂತಾದ ಅವರ ತತ್ವಗಳನ್ನು ಇಂದು ಭಾರತ ರಾಷ್ಟ್ರವಲ್ಲದೆ, ಇಡೀ ವಿಶ್ವವೇ ಅನುಸರಿಸಿದರೆ ಮಾನವ ಸಮಾಜದ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ದೊರಕುವಂತಿದೆ. ಅವರ 'ಕಾಯಕವೇ ಕೈಲಾಸ' ಎಂಬ ತತ್ವವಂತೂ ನಮ್ಮ ರಾಷ್ಟ್ರದ ಮೂಲಧ್ಯೇಯವಾಗಬೇಕೆಂದು ಅನುಭವಿಗಳು ಸಾರಿದ್ದಾರೆ.

ಮಹಾತ್ಮ ಬಸವಣ್ಣನವರು "ಯುಗಪುರುಷ", "ಯುಗ ಪ್ರವರ್ತಕ", "ಯುಗ ನಿರ್ಮಾಪಕ"(An epoch maker) ಎಂದೆಲ್ಲಾ ಕರೆದಿದ್ದಾರೆ. "ಕಾಯಕ ಯೋಗಿ" "ಕ್ರಾಂತಿಯೋಗಿ" "ಕಾರಣಿಕ ಪುರುಷ" "ಅವತಾರ ಪುರುಷ" ಎಂದು ವರ್ಣಿಸಿದ್ದಾರೆ. ವೀರಶೈವ ಮತೋದ್ಧಾರಕ, "ವೀರಶೈವಧರ್ಮ ಪ್ರವರ್ತಕ" "ವೀರಶೈವ ಧರ್ಮ ಸಂಸ್ಥಾಪಕ" "ಮಹಾಮಾನವತಾವಾದಿ" ಎಂದು ಕೊಂಡಾಡಿದ್ದಾರೆ. ಹಾಗೆಯೇ ಅವರನ್ನು "ಮಹಾನುಭಾವಿ" ಎಂದೂ ಪ್ರಶಂಸಿಸಿದ್ದಾರೆ. ಬಸವಣ್ಣನವರ ಬಹುಮುಖ ವ್ಯಕ್ತಿತ್ವ ಲೋಕೋತ್ತರ ವ್ಯಕ್ತಿತ್ವಗಳು ಬಹು ಸ್ಫುಟವಾಗಿ ಕಂಗೊಳಿಸುತ್ತಿವೆ. ಅವರ ಇಂತಹ ವ್ಯಕ್ತಿತ್ವದ ಹಿಂದೆ ಅವರ ಅದ್ಭುತ ಸ್ವಯಂ ಸಾಧನೆ-ಸಿದ್ಧಿಗಳಿಗಿರುವಂತೆಯೇ, ಅವರ ಅಗಾಧವಾದ ಗುರುಸೇವೆಯ ಪರಮಪವಿತ್ರ ಪ್ರತಿಫಲವೂ ಇದೆ.

ಬಸವಣ್ಣನವರ "ಕಾಯಕದರ್ಶನ" "ಸಮಾಜದರ್ಶನ" ಮೊದಲಾದ ಪದ ಪ್ರಯೋಗಗಳಂತೆಯೇ "ಬಸವಣ್ಣನವರ ಅನುಭವದರ್ಶನ" ಎಂಬುದೂ ಒಂದಾಗಿರುತ್ತದೆ. ಬಸವಣ್ಣನವರ ಜೀವನವೊಂದು ದೊಡ್ಡ ಹೋರಾಟದ ಕಥೆ. ಈ ಹೋರಾಟವನ್ನು ಎರಡು ಮೌಲ್ಯಗಳಲ್ಲಿ ಗುರುತಿಸಬಹುದು. ಒಂದು-ಅವರು ಬಾಹ್ಯಜಗತ್ತಿನೊಡನೆ ನಡೆಸಿದ ಹೋರಾಟ, ಇನ್ನೊಂದು ಅವರು ಭಕ್ತಿಸಾಧನೆಯಲ್ಲಿ ತಮ್ಮಲ್ಲೇ ತಾವು ನಡೆಸಿದ ಹೋರಾಟ. ಈ ಎರಡು ಹೋರಾಟಗಳು ಅವರ ಜೀವನವನ್ನು ರೂಪಿಸಿದೆ. ಬಸವಣ್ಣನವರ ಸಾಧನೆ ಅವರ ಬಾಲ್ಯದಿಂದಲೇ ಆರಂಭವಾಗಿದ್ದರೂ ಅದು ನಿರ್ದಿಷ್ಟ ಗುರಿಯೊಡನೆ ಪ್ರಾರಂಭವಾದದ್ದು ಕಪ್ಪಡಿ ಸಂಗಮದಲ್ಲೇ ಎಂದು ಹೇಳಬಹುದು. ಮುಂದೆ ಅವರ ಬದುಕಿನ ಪರಮಗುರಿಯಾದ ಪರಮಾತ್ಮನ ಸಾಕ್ಷಾತ್ಕಾರವಾಗುವ ತನಕ ಅಪಾರವಾದ ಮಾನಸಿಕ ಯಾತನೆಯನ್ನು, ಏಳು-ಬೀಳುಗಳನ್ನು ಅನುಭವಿಸಿದರು. ಅವರು ತಮಗಿಂತ ಭಿನ್ನವಾಗಿರುವ ಲೋಕವನ್ನು ಎಷ್ಟು ತೀಕ್ಷ್ಣವಾಗಿ ಕಂಡು ಅದರ ಲೋಪದೋಷಗಳನ್ನು ಉಗ್ರವಾಗಿ ಖಂಡಿಸಿದ್ದಾರೋ ತಮ್ಮ ಸ್ವಂತ ವಿಷಯದಲ್ಲೂ ಅಷ್ಟೇ ತೀಕ್ಷ್ಣವಾಗಿ ಪರೀಕ್ಷೆ ಮಾಡಿಕೊಂಡರು. ಅವರು ಹುಟ್ಟುತ್ತಲೇ ಸಿದ್ಧರಾಗಿ ಹುಟ್ಟಲಿಲ್ಲ. ಮನಸ್ಸು ಹತ್ತಿಯ ಹಣ್ಣಿನಂತೆ ನೋಡಲು ಬಹು ಆಕರ್ಷಕ. ಆದರೆ ಬಿಚ್ಚಿದರೆ ಹುಳುಗಳ ಬ್ರಹ್ಮಾಂಡವೇ ಅಲ್ಲಿ ಅಡಗಿರುತ್ತದೆ. ಮನಸ್ಸನ್ನು ಶುದ್ಧ

ಮಾಡುವುದು ಅತ್ಯಾವಶ್ಯಕ. ಏಕೆಂದರೆ ಶುದ್ಧ ಮನಸ್ಸು ಮಾತ್ರ ಪರಮಾತ್ಮನ ವಾಸಕ್ಕೆ ಯೋಗ್ಯವಾಗಿರುತ್ತದೆ.

ನಾವು ಯಾರನ್ನೋ ನೋಡಲು ಬಹುಕಾಲದ ಬಳಿಕ ಅವರ ಮನೆಗೆ ಹೋಗುತ್ತೇವೆ. ಅಲ್ಲಿ ಮನೆಯ ಹೊಸ್ತಿಲಲ್ಲೇ ಹುಲ್ಲು ಹುಟ್ಟಿಕೊಂಡಿದೆ. ಎಲ್ಲೆಲ್ಲೂ ಧೂಳು ತುಂಬಿಕೊಂಡಿದೆ. ಮನೆಯಲ್ಲಿ ಮನೆಯ ಒಡೆಯ ಇದ್ದಾನೆಂದೇ ಇಲ್ಲವೇ ಎಂದು ಮತ್ತೆ ವಿಚಾರಿಸಬೇಕೇನು? ಅಂತೆಯೇ ಕಲ್ಮಷವಾಗಿರುವ ಮನಸ್ಸಿನಲ್ಲಿ ಮನದ ಒಡೆಯ ಖಂಡಿತ ಇರುವುದಿಲ್ಲ. ಆ ಮನದ ಒಡೆಯನ ವಾಸಕ್ಕೆ ಯೋಗ್ಯವಾಗುವಂತೆ ನಮ್ಮ ಮನಸ್ಸನ್ನು ಶುದ್ಧಗೊಳಿಸುವುದೊಂದೇ ಮಾರ್ಗ. ಆದರೆ ಮನಸ್ಸಿನ ಸ್ವರೂಪವಾದರೂ ಎಂತಹುದು-ಮನಸ್ಸು ಕೋತಿಯಂತೆ, ನಿಂತಲ್ಲಿ ನಿಲ್ಲದು. ಅದನ್ನು ಪರಮಾತ್ಮನ ಧ್ಯಾನದಲ್ಲಿ ನಿಲ್ಲಿಸಿದ್ದೇನೆ ಎಂದು ಹೇಳಿಕೊಳ್ಳುತ್ತಿರುವಷ್ಟರಲ್ಲಿಯೇ ನಮಗೆ ತಿಳಿಯದಂತೆ ಇನ್ನೆಲ್ಲಿಗೋ ಹೋಗಿರುತ್ತದೆ. ಮನಸ್ಸಿನಂತಹ ಆತ್ಮವಂಚಕ ಮತ್ತೊಬ್ಬನಿಲ್ಲ.

ಬಸವಣ್ಣನವರಿಗೆ ಈ ಎಲ್ಲದರ ಅನುಭವವಿತ್ತು. ಲೋಕದ ತುಂಬ ಅನೇಕ ಆಕರ್ಷಣೆಗಳಿವೆ. ಅವುಗಳನ್ನು ಮನಸ್ಸು ಬಯಸುತ್ತದೆ. ಪಡೆದು ಸವಿಯುತ್ತದೆ. ಆದರೆ ಆ ಸಮಯ ಬೆನ್ನು ಹತ್ತಿ ನೋವು ಬರುತ್ತದೆ. ತುಪ್ಪದ ಸವಿಗಾಗಿ ಅದನ್ನು ಸವರಿರುವ ಕತ್ತಿಯ ಅಲಗನ್ನು ನೆಕ್ಕುವ ನಾಯಿಯಂತೆ ಕಷ್ಟಪಡುತ್ತದೆ. ಮನಸ್ಸು ಇಂದ್ರಿಯಗಳ ಮೂಲಕ ಕ್ಷಣಿಕವಾದ ಸುಖಗಳತ್ತ ಹರಿಯುತ್ತಿರುತ್ತದೆ. ನಾವು ಲೋಕದ ಡೊಂಕನ್ನು ತಿದ್ದುವ ಮೊದಲು ನಮ್ಮನ್ನು ನಾವು ಮೊದಲು ತಿದ್ದಿಕೊಳ್ಳಬೇಕು. ಬಸವಣ್ಣನವರು ಮಾಡಿದ್ದು ಇದನ್ನೇ. ಅವರು ಮಂಗಳವೇಡ, ಕಲ್ಯಾಣಗಳಲ್ಲಿ ಮಹಾ ಧಾರ್ಮಿಕ ಸುಧಾರಣೆಗಳಿಗೆ ಕೈಹಾಕಿ ಸಮಾಜವನ್ನು ತಿದ್ದಲು ಆರಂಭಿಸುವ ಮೊದಲು ತಮ್ಮನ್ನು ತಾವು ತಿದ್ದಿಕೊಂಡರು - ಬಸವಣ್ಣನವರು ಪರಮಾತ್ಮನ ದರ್ಶನಕ್ಕಾಗಿ ಭಕ್ತಿಯ ಹಾದಿಯನ್ನು ಹಿಡಿದರು. ಈ ಪಥ ಅವರಿಗೆ ಬಹುಪ್ರಿಯವಾದದ್ದು. ಭಗವಂತನು ಸಂಗೀತಕ್ಕೆ ಮರುಳಾಗುವುದಿಲ್ಲ. ವೇದಗಳ ಅಧ್ಯಯನದಿಂದಲೂ ಅವನು ಲಭ್ಯವಾಗುವುದಿಲ್ಲ. ಅವನು ಭಕ್ತಿಗೆ ಸುಲಭವಾಗಿ ವಶನಾಗುತ್ತಾನೆ.

ಭಕ್ತಿಯ ಸಾಧನೆ ಒಂದು ರೀತಿಯಲ್ಲಿ ಸುಲಭ, ಆದರೆ ಅಷ್ಟೇ ಕಷ್ಟ. ಶುದ್ಧ ಮನಸ್ಸಿನಿಂದ, ವಿನಯದಿಂದ, ದಾಸ್ಯ ಮನೋಭಾವದಿಂದ, ಸರ್ವ ಸಮರ್ಪಣ ಬುದ್ಧಿಯಿಂದ ಸದಾ ಪರಮಾತ್ಮನಿಗಾಗಿ ಹಂಬಲಿಸುವುದು. ಅವನ ನಾಮ ಸಂಕೀರ್ತನೆಯನ್ನು ಮಾಡುವುದು. ಅವನಲ್ಲಿ ಅಚಲವಾದ ಪ್ರೇಮವನ್ನಿಡುವುದೇ ಭಕ್ತಿ. ಇಂತಹ ಭಕ್ತನ ಹಂಬಲವೂ ಬಹು ಬೇಗ ಬೇಗ ಭಗವಂತನಿಗೆ ಕೇಳಿಸುತ್ತದೆ. ಭಕ್ತನನ್ನು ಭಗವಂತ ಹಲವು ವಿಧವಾಗಿ ಪರೀಕ್ಷೆ ಮಾಡುತ್ತಾನೆ. ಕೊಟ್ಟು ನೋಡುತ್ತಾನೆ. ಕಿತ್ತುಕೊಂಡು ನೋಡುತ್ತಾನೆ. ಎಲ್ಲದರಲ್ಲಿಯೂ ಭಕ್ತನು ಏಕ ರೀತಿಯಿಂದ ಪ್ರೇಮವನ್ನಿಟ್ಟುಕೊಂಡಿದ್ದರೆ ಭಗವಂತನು ಒಲಿಯುತ್ತಾನೆ.

ಬಸವಣ್ಣನವರು ಕೂಡಲಸಂಗಮನಿಗಾಗಿ ಬಹುವಾದ ವ್ಯಾಕುಲವನ್ನು ಅನುಭವಿಸಿದರು. ತಾಯಿ ತಂದೆಯನ್ನು ಮೊದಲೇ ಕಳೆದುಕೊಂಡು ಬಂಧು ಬಳಗವೆಲ್ಲವನ್ನೂ ತ್ಯಜಿಸಿ, ಕಪ್ಪಡಿ ಸಂಗಮಕ್ಕೆ ಬಂದ ಅವರಿಗೆ ಶಿವನಲ್ಲದೆ ಮತ್ಯಾರೂ ದಿಕ್ಕಿರಲಿಲ್ಲ. ಶಿವನನ್ನೇ ಸಮಸ್ತವೆಂದು ಭಾವಿಸಿದರು. ತಮ್ಮನ್ನು ತಾವು ಅವನಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡರು. "ಇದೋ ನನ್ನನ್ನು ನಾನು ನಿನಗೆ ಕೊಟ್ಟು ಕೊಂಡಿದ್ದೇನೆ. ನನ್ನನ್ನು ಹಾಲಲ್ಲಾದರೂ ಹಾಕು, ನೀರಲ್ಲಾದರೂ ಹಾಕು" ಎಂದು ಕೇಳಿಕೊಂಡರು. ಭಗವಂತನ ದರ್ಶನಕ್ಕಾಗಿ ಬಹುವಾಗಿ ಹಾತೊರೆದರು. ಹಂಬಲಿಸಿ ಹಂಬಲಿಸಿ ಕರೆದರು. ತಮ್ಮ ಕರೆಗೆ ಓಗೊಡದೆ ಮೌನದಿಂದ ಇದ್ದು ಬಿಡುತ್ತಿದ್ದ ಶಿವ, ಅವರು ಅವನನ್ನು ವಿಧವಿಧವಾಗಿ ಕರೆದದ್ದು ಮಾತ್ರವಲ್ಲದೆ ಬೇಡಿ, ಅತ್ತು ಗೋಳಾಡಿದರು. ತಮ್ಮನ್ನು ತಾವು ಪಶುವೆಂದು ಭಾವಿಸಿದರು. ಕೆಸರಲ್ಲಿಬಿದ್ದ ಪಶು ನಾನು ಎಂದುಕೊಂಡರು. ಅಡವಿಯಲ್ಲಿ ದಿಕ್ಕುಗೆಟ್ಟು, ಕೂಗಿಡುತ್ತಾ ದಿಕ್ಕು ದಿಕ್ಕಿಗೆ ಅಲೆಯುವ ಪಶು ನಾನು ಎಂದುಕೊಂಡರು. ಯಾರಿಗಾರೂ ಇಲ್ಲ, ಕೆಟ್ಟವರಿಗೆ ಕೆಳೆ ಇಲ್ಲ- ಇದು ಅವರ ಹಿಂದಿನ ಕಹಿ ಅನುಭವ. ಆದ್ದರಿಂದ "ಜಗದ ನೆಂಟ" ಕೂಡಲ ಸಂಗಮ ದೇವನನ್ನೇ ಭದ್ರವಾಗಿ ಹಿಡಿದರು. ಭಗವಂತ ದುರ್ಬಲರಿಗೆ ಬಲ ; ಅನಾಥರಿಗೆ ನಾಥ; ಬಿದ್ದವರ ಊರುಗೋಲು, ನೊಂದವರ ಸಮಾಧಾನ, 'ನುಡಿಗೆ ತಕ್ಕ ನಡೆಯ ಕಂಡೊಡೆ ಕೂಡಲ ಸಂಗಮ ದೇವನೊಳಗಿರ್ಪನಯ್ಯ'- ಇದು ಹಿಂದಿನ ಶರಣರ ಜೀವನದಲ್ಲಿ ಸಾಧಿತವಾಗಿರುವ ಸತ್ಯ. ಆದ್ದರಿಂದ ಮತ್ತೆ ಮತ್ತೆ ಆ ಶರಣರನ್ನು ಸ್ಮರಿಸಿದರು. ಸಿಂಧು ಬಲ್ಲಾಳನ ವಧುವನ್ನು ಶಿವನನ್ನು ಬೇಡಿದಾಗ ಅವನು ಅವಳನ್ನು ಕೊಟ್ಟಿದ್ದನ್ನು ನೆನೆದರು. ಸಿರಿಯಾಳನನ್ನು ನಿನ್ನ ಮಗನ ಮಾಂಸದ ಅಡಿಗೆ ಮಾಡಿ ಬಡಿಸು ಎಂದು ಕೇಳಿದ್ದನ್ನು ನೆನೆದರು. ದಾಸಿಮಯ್ಯನು ಬಹು ಶ್ರಮದಿಂದ ನೆಯ್ದು ಮಾರಲು ತೆಗೆದುಕೊಂಡು ಹೋಗುತ್ತಿದ್ದ ವಸ್ತ್ರವನ್ನು ಜಂಗಮರೂಪಿಯಾದ ಶಿವ ಕೇಳಿ ಪಡೆದದ್ದು, ಅದನ್ನು ಹರಿದು ಹಾಕಿದ್ದು, ಇವೆಲ್ಲವನ್ನೂ ನೆನೆದರು. ಆ ಹಿಂದಿನ ಪುರಾತನರಂತೆ ತಮಗೂ ವಿಶ್ವಾಸ, ಶ್ರದ್ಧೆ, ಅರ್ಪಣ ಬುದ್ಧಿಗಳು ಬರಲಿ ಎಂದು ಹಾರೈಸಿದರು.

ಈ ಮಧ್ಯೆ ಅವರು ತಮ್ಮ ಸಂಸಾರವನ್ನು ಕಟ್ಟಿಕೊಂಡರು. ಲೋಕ ಸಂಸಾರವನ್ನು ಕಟ್ಟಿಕೊಂಡರು. ರಾಜಕಾರ್ಯದಲ್ಲಿ ಅವರು ಪಡೆದ ಅನುಭವಗಳು ನೂರಾರು. ಅವುಗಳಲ್ಲಿ ಕಹಿಯೇ ಹೆಚ್ಚು. ಅವರು ತಮ್ಮ ಲೌಕಿಕ ಜೀವನದಲ್ಲಿ ಅನೇಕ ಕಷ್ಟಗಳನ್ನು ಎದುರಿಸಿದರು. ಸಮಾಜವನ್ನು ತಿದ್ದಲು ಹೊರಟ ಅವರಿಗೆ ಅನೇಕ ನೋವಿನ ಅನುಭವಗಳಾದವು. ಇದರಿಂದ ಅವರು ಕಂಗೆಡಲಿಲ್ಲ. ಅವರು ತಮಗೆ ಬಂದೊದಗಿದ ಕಷ್ಟಗಳನ್ನು ಪರಮಾತ್ಮನು ಒಡ್ಡಿದ ಪರೀಕ್ಷೆಗಳೆಂದೇ ಭಾವಿಸಿದರು. ಕಷ್ಟ-ಕಾರ್ಪಣ್ಯಗಳು ಅವರ ಸಾಧನೆಯನ್ನು ದೃಢಪಡಿಸಿದುವೇ ಹೊರತು, ಅದನ್ನು ಕುಗ್ಗಿಸಲಿಲ್ಲ.

ಬಿಜ್ಜಳನಲ್ಲಿ ಭಂಡಾರಿಯಾಗಿ ಸೇರಿಕೊಂಡ ಅವರಿಗೆ ಬಿಡುವೂ ಇಲ್ಲದಷ್ಟು ಕೆಲಸ.

ಅದು ಅವರ ಪ್ರವೃತ್ತಿಗೆ ಒಗ್ಗದ ವೃತ್ತಿ: ಆದರೂ ಆ ಕಾಯಕವನ್ನು ಅಗತ್ಯವಾಗಿ ಮುಂದುವರಿಸಿದರು. ಈ ಕೆಲಸ ಕಾರ್ಯಗಳ ಮಧ್ಯೆ ಅವರಿಗೆ ಗುರುಲಿಂಗ ಜಂಗಮ ಸೇವೆಗೆ ಸಮಯವೇ ದೊರಕುತ್ತಿರಲಿಲ್ಲ. ಬಸವಣ್ಣನವರು ಲೌಕಿಕಾನುಭವದಲ್ಲೇ ಇದ್ದುಕೊಂಡರು. ತಮ್ಮ ಉದ್ಧಾರದ ಜೊತೆಗೆ ಲೋಕವೂ ಉದ್ಧಾರವಾಗಬೇಕೆಂದು ಹಿರಿಯ ಆಸೆ ಅವರದು. ಆದ್ದರಿಂದಲೇ ಅವರು ಲೌಕಿಕವನ್ನು ಪಾರಲೌಕಿಕಕ್ಕೆ ಮೆಟ್ಟಿಲನ್ನಾಗಿ ಮಾಡಿಕೊಂಡರು. ಅಧಿಕಾರದಲ್ಲಿದ್ದಾಗ ಒಮ್ಮೊಮ್ಮೆ ಅವರಿಗೆ ತಾವು ಜನ್ಮತಃ ಬ್ರಾಹ್ಮಣರೆಂಬ ಅಧಿಕಾರದಲ್ಲಿ ತಾವು ಇತರರಿಗಿಂತ ದೊಡ್ಡವರೆಂಬ ಅಹಂಕಾರವೂ ತಲೆದೋರುತ್ತಿದ್ದಿತು. ಅಂತಹ ಸಮಯದಲ್ಲಿ "ಉತ್ತಮ ಕುಲದಲ್ಲಿ ಹುಟ್ಟಿದನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ" ಎಂದು ಶಿವನನ್ನು ಬೇಡಿಕೊಂಡರು. "ತನು ಭಕ್ತನಾಯಿತ್ತು : ಎನ್ನ ಮನ ಭಾವಿ" ಎಂದು ಮಿಡುಕಿದರು. ಇತರರ ಹೊಗಳಿಕೆ ಅವರನ್ನು ಕಂಗೆಡಿಸುತ್ತಿದ್ದಿತು. ಆದರೆ ಅವರು ಸದಾ ಎಚ್ಚರವಾಗಿದ್ದರು. ತಮ್ಮನ್ನು ಹೊಗಳಿ ಹೊಗಳಿ ಹೊನ್ನಶೂಲದಲ್ಲಿಡಬೇಡಿರೆಂದು ಬೇಡಿಕೊಂಡರು. ಕುಲ ಮದಧನಮದಗಳನ್ನು ಗೆದ್ದರು. ಕೀರ್ತಿಯೆನ್ನುವುದು ಬಹು ಸೂಕ್ಷ್ಮ ಶತ್ರು. ಅದರಷ್ಟು ಅಪಾಯಕಾರಿಯಾದುದು ಮತ್ತೊಂದಿಲ್ಲ. ಅದರ ವಿಷಯದಲ್ಲಿಯೂ ಎಚ್ಚರದಿಂದಿದ್ದರು.

ಬಸವಣ್ಣನವರು ತಮ್ಮ ಅಂತರಂಗವನ್ನು ಶುದ್ಧಿಪಡಿಸಿಕೊಂಡರು. ಶಿವನಲ್ಲಿ ನಂಬಿಕೆಯನ್ನು ಬೆಳೆಸಿಕೊಂಡರು. ವೀರವ್ರತವನ್ನು ಹೋಲುವ ಏಕನಿಷ್ಠೆಯ ಅಗತ್ಯತೆಯನ್ನು ತಿಳಿಸಿದರು. ಅವರ ಸಾಧನೆ ಬಹಿರಂಗದಿಂದ ಕ್ರಮೇಣ ಅಂತರಂಗಕ್ಕೆ ತಿರುಗಿತು. ಭಗವಂತನು ಅವರ ಭಕ್ತಿ ಸಾಧನೆಗೆ ಒಲಿದ, ಸಾಧಕನು ತಾನು ಬಯಸಿ ಬಯಸಿ ಹಂಬಲಿಸಿದ ಬೆಳಕನ್ನು ಕಾಣುವ ಮೊದಲು ಅಪಾರವಾದ ಕತ್ತಲಲ್ಲಿ ತೊಳಗಬೇಕಾಗುತ್ತದೆ. ಆಗ, ತನ್ನ ಸಾಧನೆಯೆಲ್ಲವೂ ವ್ಯರ್ಥ ತನ್ನಿಂದ ಬೆಳಕನ್ನು ಕಾಣಲು ಸಾಧ್ಯವಿಲ್ಲ. ತನ್ನನ್ನು ಪರಮಾತ್ಮ ಕೈ ಬಿಟ್ಟಿದ್ದಾನೆ ಎಂಬ ನಿರಾಶೆಯಿಂದ ಅವನ ಮನಸ್ಸು ಕುಗ್ಗಿ ಹೋಗುತ್ತದೆ. ಈ ನಿರಾಶೆಯ ಮಹಾತಪಸ್ಸಿನಲ್ಲಿ ನಾನು ಪೂರ್ಣವಾಗಿ ಮುಳುಗಿ ಹೋಗುತ್ತಿದ್ದೇನೆ ಎಂಬ ಹತಾಶೆಯ ಅಂಚಿನಲ್ಲಿಯೇ ಬೆಳಕು ಮೂಡುತ್ತದೆ. ಬಸವಣ್ಣನವರು ಇಂತಹ ನಿರಾಶೆಯನ್ನು ಅನುಭವಿಸಿದರು. ಈ ಇಹಲೋಕ ದುಃಖಿಯನ್ನು ಪರಲೋಕ ದೂರನನ್ನು ಏಕೆ ಹುಟ್ಟಿಸಿದೆ ಎಂದು ಅವರು ಗೋಳಾಡಿರುವುದು ಎಂಥವರ ಮನಸ್ಸನ್ನೂ ಕರಗಿಸುತ್ತದೆ. ತಾವು ಸಂಸಾರವೆಂಬ ಸಾಗರದಲ್ಲಿ ಇನ್ನೇನು ಮುಳುಗಿದೆ, ಅದರಿಂದ ಪಾರಾಗುವುದಿಲ್ಲ ಎಂಬ ನಿರಾಶೆ ಅವರಲ್ಲಿ ಕಾಣಿಸಿಕೊಂಡಿತು.

ಭಕ್ತಿಸಾಧನೆ ಮೇಲಕ್ಕೆ ಎತ್ತುತ್ತಿದೆ. ಮುಳುಗುವಂತಿಲ್ಲ, ತೇಲುವಂತಿಲ್ಲ. ಇದು ಬಹಳ ಯಾತನೆಯನ್ನುಂಟುಮಾಡುವ ಸನ್ನಿವೇಶ. ಆದರೆ ಈ ವಿಷಯ ನಿರಾಶೆಯ

ಕುದಿತದಿಂದಲೇ ಬೆಳಕಿನ ಉದ್ಭವವಾಗಿ ದರ್ಶನವಾಯಿತು. ಕೂಡಲ ಸಂಗಮ ಕೊನೆಗೆ ಅವರಿಗೆ ಒಲಿದ. ಭಗವಂತ ಇಲ್ಲಿಯವರೆಗೆ ಅವರ ಹೃದಯದಲ್ಲೇ ನಿಧಾನ ಅಥವಾ ಗುಪ್ತಧನದಂತೆ ಇದ್ದ. ಅಂಗೈ ಮೇಲೆ ಇದ್ದ ಇಷ್ಟಲಿಂಗವು ಭಾವಲಿಂಗವಾಯಿತು. ಪರಮಾತ್ಮ ತನ್ನಿಂದ ಹೊರಗೆ ಇಲ್ಲ. ತನ್ನಲ್ಲೇ ಇದ್ದಾನೆಂದು ಅರಿವಾಯಿತು. ಭಗವಂತ ಅವರಿಗೆ ತನ್ನ ಸ್ವರೂಪದಲ್ಲಿ ಕಾಣಿಸಿಕೊಂಡ. ಈ ಮಹಾದರ್ಶನವಾದಾಗ ಅವರಿಗೆ ಆಗಿರಬಹುದಾದ ಆನಂದಾನುಭವ ಅವರ್ಣನೀಯ. ಆ ಅನುಭವದಲ್ಲಿ ಕಾಲವೇ ಮರೆಯಾಗಿ ಹೋಗುತ್ತದೆ. ಅವರು ತಮ್ಮನ್ನು ತಾವು ಸಂಪೂರ್ಣವಾಗಿ ಮರೆತರು. ಶಿವನ "ನೋಟವನಂತ ಸುಖ, ಕೋಟಿ ಪರಮಸುಖ" ವಾಯಿತು. 'ನದಿಯೊಳಗೆ ನದಿ ಬೆರೆಸಿ'ದಂತಾಯಿತು. ಬಸವಣ್ಣನವರ ಸಾಧನೆ ದ್ವೈತದಿಂದ ಆರಂಭವಾಯಿತು. ನಾನು ಪಶು, ಅವನು ಪಶುಪತಿ ಎಂಬುದೇ ಅವರ ಆರಂಭದ ನಂಬಿಕೆ. ಭೃತ್ಯ-ಭರ್ತ್ಯ ಸಂಬಂಧವಿದು. ಅವರು ತಮ್ಮನ್ನು ತಾವು ಸತಿಯೆಂದೂ, ಪರಮಾತ್ಮ ಪತಿಯೆಂದೂ ಭಾವಿಸಿ ಸಾಧನೆ ಮಾಡಿದರು. ಇದನ್ನು "ಮಧುರ ಭಾವ"ಎಂದು ಕರೆಯುತ್ತಾರೆ. ಬಸವಣ್ಣನವರು ಚನ್ನಬಸವಣ್ಣನವರಿಗೆ ಉಪದೇಶ ಮಾಡಿದಾಗ, ತನ್ನದು ಶಿವನೊಡನೆ ಮದುವೆಯಾಯಿತು ಎಂದು ಹೇಳಿಕೊಳ್ಳುವ ಸಂಬಂಧದಲ್ಲಿ ಚನ್ನಬಸವಣ್ಣನವರು ಹೀಗೆ ಹೇಳುತ್ತಾರೆ. "ಕೂಡಲಸಂಗಯ್ಯನೊಬ್ಬನೆ ಅಚಲ, ನಾವೆಲ್ಲರೂ ನಿತ್ಯ ಮುತ್ತೈದೆಯರಾಗಿ" ಭಗವಂತನಿಗೆ ಎಂದೂ ಸಾವಿಲ್ಲವಾದ್ದರಿಂದ ಸಾಧಕರೆಲ್ಲರೂ ನಿತ್ಯ ಮುತ್ತೈದೆಯರು. ವೀರಶೈವ ಸಾಧಕರಲ್ಲಿ ಅಕ್ಕಮಹಾದೇವಿ, ಗಣೇಶ, ಮಸಣಯ್ಯ, ಉರಿಲಿಂಗದೇವ ಮುಂತಾದವರು ಈ ಮಾರ್ಗದಲ್ಲಿ ಸಾಧನೆ ಮಾಡಿದರು. ಬಸವಣ್ಣನವರು ಈ ಭವದಲ್ಲಿದ್ದರು. "ಲಿಂಗ ಗೆಲುವೆಡೆ ಶರಣ ಸತಿ ಲಿಂಗಪತಿ ಎಂಬುದೊಂದಲಗುಸಾಲದೆ" - ಸತಿಪತಿ ಭಾವದಿಂದ ಪರಮಾತ್ಮನನ್ನು ಸುಲಭವಾಗಿ ಗೆಲ್ಲಬಹುದು ಎಂದು ಒಂದೇ ಕಡೆ ಹೇಳಿದ್ದಾರೆ.

ಪರಮಾತ್ಮ ತನ್ನನ್ನು ಒಲಿಯುವುದಿಲ್ಲ ಎಂದು ಸಾಧಕನಿಗೆ ಅನ್ನಿಸಿದಾಗ ಆ ನೋವು ಸಾವಿಗಿಂತಲೂ ಕಡೆ. ಆ ಅನುಭವ, ಅಕ್ಕಮಹಾದೇವಿಯ ಮಾತಿನಲ್ಲಿ ಹೇಳುವುದಾದರೆ- 'ಕಿಚ್ಚಿಲ್ಲದೆ ಬೇಗೆ - ಏರಿಲ್ಲದ ಗಾಯ' ಇಂತಹ ವಿರಹದ ಭಾವನೆ ಬಸವಣ್ಣನವರ ಹಲವಾರು ವಚನಗಳಲ್ಲೂ ಬಂದಿದೆ. ತನ್ನ ಗಂಡ ಬರಬೇಕೆಂದು ತನ್ನ ಅಂತರಂಗದ ಮನೆಯನ್ನು ಶೃಂಗರಿಸಿ, ಕಂಗಳೇ ಪ್ರಾಣವಾಗಿ ಕಾಯುತ್ತಿದ್ದುದಾಗಿ, ಅವನು ಬರುವನೋ ಬಾರನೋ ಎಂದು ಉಮ್ಮಳದಲ್ಲಿದ್ದುದಾಗಿ ಒಂದು ವಚನದಲ್ಲಿ ಹೇಳಿಕೊಂಡಿದ್ದಾರೆ. ಆದರೆ ಪರಮಾತ್ಮ ದಯಾಪರ, ತನ್ನ ಸತಿ ಕಾಯಾ, ವಾಚಾ, ಮನಸಾ ಶುಭ್ರಳಾಗಿರುವ ಸಂಗತಿ ತಿಳಿಯಿತು. ಬಂದು ಕೂಡಿಕೊಂಡ. ಹೀಗೆ ದಾಸ್ಯಭಾವದಿಂದ ಸತಿ-ಪತಿ ಭಾವದಿಂದ ಬಸವಣ್ಣನವರು ಭಗವಂತನ ಸಾಕ್ಷಾತ್ಕಾರವನ್ನು ಪಡೆದರು. ಈ ಸಾಧನೆ ಅಲ್ಲಿಗೆ ನಿಲ್ಲದೆ, ಇನ್ನೂ ಮುಂದುವರಿಯಿತು. ಮುಂದುವರಿದಂತೆ ತಾವು ಭಗವಂತನೂ ಬೇರೆ

ಬೇರೆಯಲ್ಲವೆಂದು ಅದ್ವೈತದ ಅನುಭವ ಒದಗಿತ್ತು. ಪರಮಾತ್ಮ ತತ್ವ ಮೊದಲು ಒಂದಾಗಿದ್ದುದು ಎರಡಾಗಿ ಒಡೆದಿತ್ತು. ಈಗ ಎರಡೂ ಒಂದಾಯಿತು. ತಾವೇ ಭಗವಂತನ ಸ್ವರೂಪವಾಗಿರುವಾಗ, ತಮ್ಮನ್ನು ಕುರಿತು ತಾವೇ ಹಾಡಿಕೊಂಡರು.

ಕಲ್ಲಮಠದ ಪ್ರಭುದೇವರು "ಭಕ್ತಿಯೆಂಬುದೇ ಎರಡಿಲ್ಲದ ಕೂಟ. ಆ ಎರಡಿಲ್ಲದ ಕೂಟವೇ ಮುಕ್ತಿ" ಎಂದಿದ್ದಾರೆ. ಬಸವಣ್ಣನವರು ಇಂತಹ ಮುಕ್ತಿಯನ್ನು ಪಡೆದು ಜೀವನ್ಮುಕ್ತರಾದರು. ದ್ವೈತದಿಂದ ಪ್ರಾರಂಭವಾದ ಅವರ ಸಾಧನೆ ಅದ್ವೈತದಲ್ಲಿ ಸಿದ್ಧಿಯಲ್ಲಿ ಕೊನೆಗೊಂಡಿತು. ಅವರ ಆತ್ಮದ ತಳಮಳ ನಿಂತು ಪ್ರಶಾಂತವಾಯಿತು. ಹೀಗೆ ಬೆಳಕನ್ನು ಕಂಡವರಿಗೆ ಆ ಒಳ ಎಚ್ಚರದ ಅನುಭವದಲ್ಲೇ ಯಾವಾಗಲೂ ಇದ್ದು ಬಿಡಲು ಮನಸ್ಸಾಗುತ್ತದೆ. ಅಂತಹ ಮೋಹಕತೆ ಅಲ್ಲಿದೆ. ಬೌದ್ಧಧರ್ಮದ ಮಹಾಯಾನ ಪಂಥದ ಪ್ರಕಾರ ಬುದ್ಧನು ಸುಮೇರು ಪರ್ವತದ ತುದಿಯಲ್ಲಿ ಕುಳಿತು, ತನ್ನ ಅಸಾಧಾರಣವಾದ ಸಾಧನೆಯ ಫಲವಾಗಿ ಪಡೆದ 'ನಿರ್ವಾಣದಲ್ಲಿ ಕರಗಿ ಹೋಗಲಿರುವಾಗ, ಬುದ್ಧ ತಮ್ಮಿಂದ ಎಂದೆಂದೂ ಅಗಲಿ ಹೋಗುವನೆಂದು ಕೆಳಗಿದ್ದ ಲೋಕದ ಜನರು ಆಕ್ರಂದನ ಮಾಡಲು ತೊಡಗಿದರು. ಆಗ ತನಗೆ ಲಭ್ಯವಾಗಿದ್ದ 'ನಿರ್ವಾಣ'ವನ್ನು ತ್ಯಜಿಸಿ ಲೋಕದಲ್ಲಿ ಕಷ್ಟಕಾರ್ಪಣ್ಯಗಳಿರುವವರೆಗೆ ತನಗೆ ಅದು ಬೇಡವೆಂದು ಹೇಳಿ ಅಲ್ಲಿಂದ ಇಳಿದು ಬಂದು ಜಗತ್ತಿಗಾಗಿ ಮತ್ತೆ ದುಡಿಯಲು ಆರಂಭಿಸಿದಂತೆ. ಅಂತೆಯೇ ಬಸವಣ್ಣನವರು ತಮಗೆ ಒದಗಿದ ಅತ್ಯುಚ್ಚ ಅನುಭವದಲ್ಲೇ ಮಗ್ನರಾಗಿ ಬಿಡದೆ, ಲೋಕಕ್ಕಾಗಿ ಲೌಕಿಕವಾಗಿ ಉಳಿದರು, ಶ್ರಮಿಸಿದರು.

ಬಸವಣ್ಣನವರು ಭಕ್ತಿ ಸಾಧನೆಗಾಗಿ ಲೋಕವನ್ನು ತ್ಯಜಿಸಲಿಲ್ಲ. ಲೌಕಿಕ ಮತ್ತು ಅಲೌಕಿಕ ಜೀವನಗಳ ಸಾಮರಸ್ಯವನ್ನು ನಿರ್ಮಿಸಿದರು. ಅವರ ವ್ಯಕ್ತಿತ್ವ ಅಸಾಧಾರಣವಾದುದು. ರಾಜನೀತಿ ವಿಶಾರದರಾಗಿ ಬಿಜ್ಜಳನ ರಾಜ ಕಾರ್ಯದಲ್ಲಿ ಭಾಗಿಗಳಾದರು. ಕ್ರಾಂತಿಕಾರಿಯಾಗಿ ಸಮಾಜ ಸುಧಾರಕರಾಗಿ ಹೊಸ ಸಾಮಾಜಿಕ ಮೌಲ್ಯಗಳನ್ನು ಕೊಟ್ಟರು. ಧರ್ಮವೆಂದರೆ ಕೇಂದ್ರ ವ್ಯಕ್ತಿಯಾಗಿ ಅದರ ಪ್ರಸಾರಕ್ಕೆ ಶ್ರಮಿಸಿದರು. ಸಾಧಕರಾಗಿ ವೈಯಕ್ತಿಕ ಸಾಧನೆಯ ಪಥದಲ್ಲಿ ಸಿದ್ಧಿಯನ್ನು ಪಡೆದರು. ವಚನಕಾರರಾಗಿ ವಚನಗಳನ್ನು ಬರೆದರು. ಹೀಗೆ ಅವರ ವ್ಯಕ್ತಿತ್ವ ಬಹುಮುಖವಾದುದು. ಬಸವಣ್ಣನವರು ನಮ್ಮಂತೆಯೇ ಹುಟ್ಟಿ ಬೆಳೆದವರು. ಅವರಲ್ಲಿ ಮನುಷ್ಯ ಸಹಜವಾದ ಎಲ್ಲಾ ದೌರ್ಬಲ್ಯಗಳೂ ಇದ್ದವು. ಅವರೂ ಎಲ್ಲರಂತೆಯೇ ಕಾಮ, ಕ್ರೋಧ ಮುಂತಾದ ಭಾವರಾಗಗಳಿಗೆ ಒಳಗಾಗುತ್ತಿದ್ದರು. ಆದರೆ ಅವರು ದೌರ್ಬಲ್ಯಗಳನ್ನು ಮೀರಿ ನಡೆದರು. ಅವುಗಳನ್ನು ಗೆದ್ದರು. ಅವರು ಮನುಷ್ಯತ್ವದಿಂದ ದೇವತ್ವಕ್ಕೆ ಏರಿದ ಮಹನೀಯರು. ಬಸವಣ್ಣನವರ ಮನೋಧರ್ಮ ಪ್ರಮುಖವಾಗಿ ತನ್ನನ್ನು ತಾನು ಮೊದಲು ತಿದ್ದಿಕೊಳ್ಳಬೇಕು ಎಂಬುದು. ತಮ್ಮನ್ನು ಪರೀಕ್ಷೆಗೆ ಒಳಪಡಿಸಿಕೊಂಡರು. ಅನ್ಯರ ವಿಷಯದಲ್ಲಿ ಸ್ವಲ್ಪ ರಿಯಾಯಿತಿಯನ್ನು ತೋರಿಸಿಯಾರು. ಶಿವಭಕ್ತರ ವಿಷಯದಲ್ಲಿ

ಇನ್ನೂ ಹೆಚ್ಚು ರಿಯಾಯಿತಿಯನ್ನು ತೋರಿಸಿಯಾರು. ಅವರು ತಮ್ಮ ಜೀವನವನ್ನು ತೆರೆದ ಪುಸ್ತಕವಾಗಿಸಿದರು. ತಮ್ಮಲ್ಲಿನ ಒಳ್ಳೆಯ ಗುಣಗಳನ್ನಂತೆ ಅಂತೆಯೇ ದುರ್ಗುಣಗಳನ್ನೂ ಬಹು ಸ್ಪಷ್ಟವಾಗಿ ಆಡಿತೋರಿಸಿದರು. ಅವರ ಮನಸ್ಸೊಂದು ಗಾಜಿನ ಪಾತ್ರೆ. ಒಳಗಿರುವುದೆಲ್ಲ ಅಲ್ಲಿ ಕಾಣುತ್ತದೆ. ಅವರ ಈ ತೆರೆದ ಮನಸ್ಸು ಬಹು ಬೇಗ ಎಲ್ಲರನ್ನೂ ಆಕರ್ಷಿಸಿತು. ಏಕೆಂದರೆ ಅವರ ಅಂತರಂಗಕ್ಕೆ ಎಲ್ಲರಿಗೂ ಯಾವಾಗಲೂ ಪ್ರವೇಶವಿತ್ತು. ಒಮ್ಮೊಮ್ಮೆ ತಮ್ಮ ನಡೆಯಂತೆ ನುಡಿ ಇಲ್ಲದಿರುವುದು ಅವರಿಗೆ ಬಹಳ ಸಂಕಟವುಂಟುಮಾಡುತ್ತಿತ್ತು. ಹೆಂಡದ ಮಡಿಕೆಯನ್ನು ಹೊರಗೆ ತೊಳೆದರೆ ಏನು ಪ್ರಯೋಜನ? ಆದ್ದರಿಂದ ಲೋಕದ ಡೊಂಕನ್ನು ತಿದ್ದುವ ಮೊದಲು ತಮ್ಮ ಡೊಂಕನ್ನು ತಿದ್ದಿಕೊಳ್ಳಲು ಪ್ರಯತ್ನಿಸಿದರು. ತಿದ್ದಿಕೊಂಡರು. ಮನೆಯೊಳಗೆ ಭಕ್ತರು ಲಿಂಗಾರ್ಚನೆಯಲ್ಲಿ ತೊಡಗಿರುವಾಗ ಬಸವೇಶ್ವರರು ಬಾಗಿಲು ಕಾಯುತ್ತಿದ್ದರು. ತಮಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲವೆಂದು ಅವರು ದೃಢವಾಗಿ ನಂಬಿದ್ದರು. ಅವರ ಮಾತಿನಲ್ಲಿ ಸುಸಂಸ್ಕೃತಿ ಎದ್ದು ಕಾಣುತ್ತದೆ. "ಅಯ್ಯಾ ಎಂದೊಡೆ ಸ್ವರ್ಗ, ಎಲವೋ ಎಂದೊಡೆ ನರಕ ; ಮೃದು ವಚನವೇ ಸಕಲ ಜಪಂಗಳಯ್ಯ ಮೃದು ವಚನವೇ ಸಕಲ ತಪಂಗಳಯ್ಯ"– ಅವರು ಯಾವಾಗಲೂ ತಾವೇ ಹೇಳಿಕೊಂಡಿರುವಂತೆ ಬಾಗಿದ ತಲೆಯ ಮುಗಿದ ಕೈಯ ವ್ಯಕ್ತಿಯಾಗಲು ಬಯಸಿದರು. ಅತಿಥಿದೇವೋಭವದ ಮಹತ್ವ ತಿಳಿದಿದ್ದರು. ಒಳ್ಳೆಯದನ್ನು ಒಳ್ಳೆಯವರನ್ನೂ ಕಂಡಾಗ ಅವರು ಎಷ್ಟು ಮೃದುವಾಗಬಲ್ಲರೋ ಕೆಟ್ಟದ್ದನ್ನು ಭವಿಗಳನ್ನು ಕಂಡಾಗ ಅಷ್ಟೇ ಕಠೋರವಾಗಬಲ್ಲರು. ಅವರ ಹೃದಯ ಎಷ್ಟು ಪರಿಶುದ್ಧವೋ ಅಷ್ಟೇ ಕೋಮಲ. ಜಗತ್ತನ್ನು ಕಂಡು ಬಹುವಾಗಿ ಮರುಗಿದರು. ಪಾಪಕರ್ಮಗಳನ್ನು ಮಾಡುತ್ತಿರುವವರನ್ನು ಕಂಡು 'ಒಮ್ಮೆ ಶರಣೆನ್ನಿ ನಿಮ್ಮ ಪಾಪಗಳೆಲ್ಲವೂ ಹಾರಿಹೋಗುತ್ತದೆ' ಎಂದು ವಿನಯದಿಂದ ಕೇಳಿಕೊಂಡಿದ್ದಾರೆ. ಕೇವಲ ಮಾನವರ ವಿಷಯದಲ್ಲಿ ಮಾತ್ರವೇ ಅಲ್ಲ, ಪ್ರಾಣಿಗಳ ವಿಷಯದಲ್ಲೂ ಅವರಿಗೆ ಅಪಾರವಾದ ದಯೆಯಿತ್ತು. ಯಜ್ಞಯಾಗಗಳಲ್ಲಿ ಪ್ರಾಣಿ ಬಲಿಯನ್ನು ಉಗ್ರವಾಗಿ ವಿರೋಧಿಸಿದರು. ತಮ್ಮ ಅನುಯಾಯಿಗಳಲ್ಲಿ ಮಾಂಸಾಹಾರವನ್ನು ಬಿಡಿಸಿ ಸಸ್ಯಾಹಾರವನ್ನು ಬಳಕೆಗೆ ತಂದರು.

ಅವರ ಸ್ವಭಾವದ ಪರಿಶೀಲನೆಯನ್ನು ಮಾಡಿದರೆ ಬಸವಣ್ಣನವರಲ್ಲಿ ಒಬ್ಬ ಶ್ರೇಷ್ಠ ನಾಯಕನ ಎಲ್ಲ ಗುಣಗಳು ಸಮನ್ವಿತವಾಗಿರುವ ಅಂಶ ಕಂಡುಬರುತ್ತದೆ. ನಿಸ್ವಾರ್ಥ, ವಿನಯ, ತ್ಯಾಗ, ಸದುದ್ದೇಶ, ಮೃದುತ್ವ ಮತ್ತು ಕಠೋರತೆ, ಭಾವಾವೇಶ ಮತ್ತು ವಾಕ್ಶಕ್ತಿ, ನಿರ್ಭೀತಿ, ಬಿಚ್ಚು ಮನಸ್ಸು, ಸೇವಾಮನೋಧರ್ಮ, ಸ್ಪಷ್ಟ ಆಲೋಚನೆ ಇವೆಲ್ಲವೂ ಶ್ರೇಷ್ಠ ನಾಯಕನ ಗುಣಗಳು. ಅವರು ಶ್ರೇಷ್ಠ ನಾಯಕರೂ ಹೌದು. ಕ್ರಾಂತಿಕಾರಿಯೂ ಹೌದು. ಅವರ ವ್ಯಕ್ತಿತ್ವಕ್ಕೆ ಮಾರು ಹೋದ ಮರುಳ ಶಂಕರ ಎಂಬಾತ "ಬಸವಣ್ಣ ನಡೆದುದೇ ಮಾರ್ಗ, ಅಖಿಲ ಗುಣಗಳಿಗೆ ಬಸವಣ್ಣ ನುಡಿದುದೇ ವೇದ"

ಎಂದನು. ನಾನು ಬಸವನಾಗಿ ಹುಟ್ಟಬಾರದಿತ್ತೆ ಎಂದು ಅಲ್ಲಮಪ್ರಭು ಹಂಬಲಿಸಿದರು. ಅದೇ ಅಲ್ಲಮ ಪ್ರಭುಗಳು- "ಜಗವರಿಯೆ ಶಿವಾಚಾರ ಧ್ವಜವನೆತ್ತಿಸಿ, ಮರ್ತ್ಯಲೋಕ ಶಿವಲೋಕವೆರಡಕ್ಕೂ ನಿಚ್ಚಣಿಗೆಯಾದಾನು" ಎಂದು ಹೊಗಳಿದರು. ಇದೇ ಮಾತನ್ನು ಚೆನ್ನಬಸವಣ್ಣ ಪುನರುಚ್ಚರಿಸಿದರು. 'ಮರ್ತ್ಯಲೋಕವೆಂಬುದೊಂದು ನಿಜ್ಜಣಿಗೆ ಯಾದಾವು ನೋಡಾ, ನೀವೀ ಕಲ್ಯಾಣಕ್ಕೆ ಬಂದವತರಿಸಿದಲ್ಲಿ_ _ _ _' ಆ ಕಾಲದಲ್ಲೇ ಬಸವಣ್ಣನವರು ಪವಾಡ ಪುರುಷರೆಂದು ಕೀರ್ತಿವೆತ್ತರಾದರು.

ಜಾನಪದ ತಜ್ಞರಾಗಿ ಸಿ. ಪಿ. ಕೆ.

ಡಾ. ಜಿ. ಆರ್. ತಿಪ್ಪೇಸ್ವಾಮಿ

ಕನ್ನಡ ಸಾಹಿತ್ಯ ಲೋಕದಲ್ಲಿ ಖ್ಯಾತನಾಮರಾಗಿರುವ ಸಿ. ಪಿ. ಕೆ. ಅವರು ಹುಟ್ಟಿದ್ದು ೧೯೩೯ ಏಪ್ರಿಲ್ ೮ ರಂದು. ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನ ಚಿಕ್ಕ ನಾಯಕನಹಳ್ಳಿ ಇವರ ಸ್ವಂತ ಊರು. ಇವರ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾಭ್ಯಾಸ ಜರುಗಿದ್ದು ಚಿಕ್ಕನಾಯಕನಹಳ್ಳಿ ಮತ್ತು ಸಾಲಿಗ್ರಾಮದಲ್ಲಿ. ಶಿವಮೊಗ್ಗದಲ್ಲಿ ಇಂಟರ್ ಮೀಡಿಯೆಟ್ ಶಿಕ್ಷಣವನ್ನು ಮುಗಿಸಿದ ಸಿ. ಪಿ. ಕೆ. ೧೯೬೦ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ ಬಿ. ಎ. ಆನರ್ಸ್ ಪದವಿಯನ್ನು ೧೯೬೧ರಲ್ಲಿ ಮಾನಸ ಗಂಗೋತ್ರಿಯಲ್ಲಿ ಎಂ. ಎ. ಪದವಿಯನ್ನು ಗಳಿಸಿದರು. ಈ ಎರಡರಲ್ಲೂ ಅವರದು ಪ್ರಥಮ ದರ್ಜೆ ಮತ್ತು ಪ್ರಥಮ ಶ್ರೇಣಿ.

ಹಲವಾರು ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ ಸಿ. ಪಿ. ಕೆ. ಅವರು ೧೯೬೧ ರಿಂದ ೧೯೬೪ರವರೆಗೆ ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ ಸಂಶೋಧನ ಸಹಾಯಕರಾಗಿಯೂ ಮಹಾರಾಜ ಕಾಲೇಜಿನಲ್ಲಿ ಮೂರುವರ್ಷ ಕನ್ನಡ ಅಧ್ಯಾಪಕರಾಗಿಯೂ ಸೇವೆ ಸಲ್ಲಿಸಿದರು. ೧೯೬೭ರಲ್ಲಿ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕರಾಗಿ ನೇಮಕ ಗೊಂಡರು. ೧೯೬೯ರಲ್ಲಿ ಪ್ರವಾಚಕರಾಗಿ ಸುಮಾರು ಹದಿಮೂರು ವರ್ಷ ಅದೇ ಹುದ್ದೆಯಲ್ಲಿ ಸೇವೆ ಸಲ್ಲಿಸಿದರು. ೧೯೭೪ರಲ್ಲಿ ಸಿ. ಪಿ. ಕೆ. ತಮ್ಮ 'ನಾಗವರ್ಮನ ಕರ್ಣಾಟಕ ಕಾದಂಬರಿ : ಒಂದು ತೌಲನಿಕ ಮತ್ತು ವಿಮರ್ಶಾತ್ಮಕ ಅಧ್ಯಯನ' ಎಂಬ ಮಹಾ ಪ್ರಬಂಧಕ್ಕಾಗಿ ಮೈಸೂರು ವಿ.ವಿ.ಯಿಂದ ಪಿಎಚ್. ಡಿ. ಪದವಿಯನ್ನು ಪಡೆದರು. ೧೯೮೦ರಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡ ಸಿ. ಪಿ. ಕೆ . ಅವರು ೧೯೯೯ರಲ್ಲಿ ನಿವೃತ್ತರಾದರು. ಈ ನಡುವೆ ಅವರು ಎರಡು ವರ್ಷ (೧೯೮೯-೯೧) ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದರು. ೧೯೮೦ರಿಂದ ೧೯೯೯ರವರೆಗೆ ಮೈ. ವಿ. ವಿ.ದ ಶಿಕ್ಷಣ ಮಂಡಳಿಯ ಸದಸ್ಯರಾಗಿಯೂ ೧೯೯೦ರಿಂದ ೧೯೯೩ರವರೆಗೆ ಸೆನೆಟ್ ಸದಸ್ಯರಾಗಿಯೂ ಒಂದು ವರ್ಷ ಸಿಂಡಿಕೇಟ್ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದರು.

ನಿವೃತ್ತಿಯ ತರುವಾಯ ಒಂದು ವರ್ಷ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕುವೆಂಪು ಕಾವ್ಯಾಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಸಿ. ಪಿ. ಕೆ. ಮೈಸೂರು ವಿ. ವಿ. ಪ್ರಸಾರಾಂಗದ ಗ್ರಂಥ ಪ್ರಕಟಣ ಸಮಿತಿ ಸದಸ್ಯರಾಗಿ, ಪ್ರಬುದ್ಧ ಕರ್ನಾಟಕ ಪತ್ರಿಕೆಯ ಸಂಪಾದಕರಾಗಿ, 'ಪುಸ್ತಕ ಪ್ರಪಂಚ' ಪತ್ರಿಕೆಯ ಸಂಪಾದಕ ಮಂಡಲಿ, ಸಮಗ್ರ ವಚನ ಸಂಪುಟಗಳ ಸಂಪಾದಕ ಮಂಡಲಿ, ರಾಜ್ಯಗ್ರಂಥಾಲಯ ಇಲಾಖೆಯ ಪುಸ್ತಕ ಆಯ್ಕೆ ಉನ್ನತ ಸಮಿತಿ, ಪಂಪ ಪ್ರಶಸ್ತಿ ಆಯ್ಕೆ ಸಮಿತಿ, ಕರ್ನಾಟಕ ವಿಶ್ವವಿದ್ಯಾಲಯ ಕನಕ ಪೀಠದ ಸಲಹಾ ಸಮಿತಿ – ಇವುಗಳ ಸದಸ್ಯರಾಗಿಯೂ ಸಿ. ಪಿ. ಕೆ. ಅವರು ಸೇವೆ ಸಲ್ಲಿಸಿದ್ದಾರೆ. ಕೆಲವು ಕಾಲ ಮೈಸೂರಿನ ಜ್ಞಾನೋದಯ ಪರಿಷತ್ತಿನ ಗೌರವಾಧ್ಯಕ್ಷರಾಗಿದ್ದರು.

ರಾಜ್ಯಮಟ್ಟದಲ್ಲಿ ಹಾಗೂ ರಾಷ್ಟ್ರಮಟ್ಟದಲ್ಲಿ ನಡೆದ ಹಲವಾರು ಸಮ್ಮೇಳನಗಳಲ್ಲಿ, ಕಮ್ಮಟಗಳಲ್ಲಿ, ವಿಚಾರಸಂಕಿರಣಗಳಲ್ಲಿ ಉದ್ಘಾಟಕರಾಗಿ, ಅಧ್ಯಕ್ಷರಾಗಿ, ಪ್ರಬಂಧಕರಾಗಿ ಸಿ. ಪಿ. ಕೆ. ಭಾಗವಹಿಸಿದ್ದಾರೆ. 'ಶಿವಮೊಗ್ಗೆಯಲ್ಲಿ ನಡೆದ ಅಖಿಲ ಭಾರತ ೪೯ನೆಯ ಕ. ಸಾ. ಸಮ್ಮೇಳನದ ಭಾಷಾಂತರ ಗೋಷ್ಠಿಯ ಅಧ್ಯಕ್ಷರಾಗಿದ್ದರು. ೧೯೭೧ ರಲ್ಲಿ ನಾಗಮಂಗಲದಲ್ಲಿ ನಡೆದ ಜಾನಪದ ಸಮ್ಮೇಳನದ ಸಾಹಿತ್ಯಗೋಷ್ಠಿಯ ಅಧ್ಯಕ್ಷರಾಗಿದ್ದರು. ೧೯೯೦ರಲ್ಲಿ ನಡೆದ ತಿ. ನರಸಿಪುರ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಅದೇ ವರ್ಷ ಜರುಗಿದ ಮಂಡ್ಯ ಜಿಲ್ಲಾ ಕ. ಸಾ. ಸಮ್ಮೇಳನದ ಅಧ್ಯಕ್ಷತೆ, ೧೯೯೪ರಲ್ಲಿ ಮಂಡ್ಯದಲ್ಲಿ ನಡೆದ ಅಖಿಲ ಭಾರತ ಕ. ಸಾ. ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ, ೧೯೯೭ರಲ್ಲಿ ಗುಂಡ್ಲುಪೇಟೆಯಲ್ಲಿ ನಡೆದ ಮೈಸೂರು ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ – ಇವೂ ಕೂಡ ಸಿ. ಪಿ. ಕೆ. ಅವರ ಪಾಲಿಗೆ ಬಂದಗೌರವಗಳು. ಲಕ್ನೋದಲ್ಲಿ ನಡೆದ ೧೯೯೪ರ ಅಖಿಲ ಭಾರತ ಗಣರಾಜ್ಯೋತ್ಸವ ಕವಿಗೋಷ್ಠಿಯಲ್ಲಿ ಅವರು ಕನ್ನಡವನ್ನು ಪ್ರತಿನಿಧಿಸಿದ್ದರು.

ಕಾವ್ಯ, ನಾಟಕ, ಪ್ರಬಂಧ, ವಿಮರ್ಶೆ, ವಿಚಾರ, ಸಂಶೋಧನೆ, ಭಾಷಾಂತರ, ಜಾನಪದ, ವ್ಯಕ್ತಿಚಿತ್ರ, ಹಾಸ್ಯ-ವಿಡಂಬನೆ, ಗ್ರಂಥಸಂಪಾದನೆ, ಮಕ್ಕಳಸಾಹಿತ್ಯ-ಮುಂತಾದ ಕ್ಷೇತ್ರಗಳಲ್ಲಿ ಇನ್ನೂರ ಇಪ್ಪತ್ತಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಹೊರತಂದಿರುವ ಸಿ.ಪಿ.ಕೆ. ಸುಮಾರು ೭೦ಕ್ಕೂ ಹೆಚ್ಚು ಕೃತಿಗಳನ್ನು ಸ್ವತಃ ಪ್ರಕಟಿಸಿಕೊಂಡಿದ್ದಾರೆ. 'ಚಿತ್ರಭಾನು: ಪ್ರಕಾಶನ'ದ ಮೂಲಕ ಕೃತಿಗಳನ್ನು ಹೊರತಂದಿರುವ ಇವರು ಲೇಖಕರು ಮಾತ್ರವಲ್ಲ ಪ್ರಕಾಶಕರೂ ಆಗಿದ್ದಾರೆ. 'ಸಂಶೋಧನೆ ವಿದ್ವತ್ತಿನ ಮಟ್ಟವನ್ನು ನಿರ್ಣಯಿಸುವ ಅಳತೆಗೋಲು. ಸಿ. ಪಿ. ಕೆ. ಸಂಶೋಧನ ಕ್ಷೇತ್ರದಲ್ಲಿ ಮೌಲ್ಯವುಳ್ಳ ಕೆಲಸ ಮಾಡಿದ್ದಾರೆ. ತಮ್ಮ ಕಾವ್ಯಾಭಿರುಚಿ ಮತ್ತು ಚಿಂತನಶೀಲ ಪ್ರವೃತ್ತಿಗಳಿಂದ ಅವರು ಸಂಶೋಧನೆಗೆ ಹೊಸ ತಿರುವನ್ನು ಕೊಟ್ಟಿದ್ದಾರೆ' (ಸಿ. ಪಿ. ಕೆ. ಇನ್ನೂರು, ಇನ್ನಷ್ಟು ಕೃತಿಸೂಚಿ, ಪುಟ. ೩೫). ಆದರ್ಶ ಪ್ರಾಧ್ಯಾಪಕರಾಗಿ, ಉತ್ತಮ ಭಾಷಣಕಾರರಾಗಿ,

ಸ್ನೇಹಮಯಿಯಾಗಿ ಹೆಸರಾಗಿರುವ ಸಿ. ಪಿ. ಕೆ. ಅವರಿಗೆ ಸಂದಗೌರವಗಳು, ಪ್ರಶಸ್ತಿ ಪುರಸ್ಕಾರಗಳು ಹಲವಾರು. ೧೯೭೭ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತನ್ನ ವಜ್ರಮಹೋತ್ಸವ ಸಂದರ್ಭದಲ್ಲಿ ಸಿ. ಪಿ. ಕೆ. ಅವರನ್ನು ಭಾಷಾಂತರ ಕ್ಷೇತ್ರದಲ್ಲಿ ಅವರು ಸಲ್ಲಿಸಿದ ಸೇವೆಗಾಗಿ ಸನ್ಮಾನಿಸಿತು. ೧೯೯೧ರಲ್ಲಿ ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ಕ.ಸಾ.ಸ.ದಲ್ಲೂ ಸನ್ಮಾನಿತರಾದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೮೮ರಲ್ಲಿ ಗೌರವ ಪ್ರಶಸ್ತಿ ನೀಡಿ ಪುರಸ್ಕರಿಸಿದರೆ ೧೯೯೪ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 'ಜಾನಪದತಜ್ಞ' ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರ ೧೯೯೭ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಸಿ. ಪಿ. ಕೆ. ಅವರ ಹಲವು ಪುಸ್ತಕಗಳಿಗೆ ಹಲವು ಪ್ರಶಸ್ತಿಗಳು, ಗೌರವಗಳು ಸಂದಿವೆ. ಅರಣ್ಯ ಪರ್ವ, ಕಾವ್ಯವಿವೇಕ, ಪಾಶ್ಚಾತ್ಯ ಕಾವ್ಯಚಿಂತನ, ಪ್ರೇಮತತ್ತ್ವ-ಈ ಕೃತಿಗಳಿಗೆ ಸಾಹಿತ್ಯ ಅಕಾಡೆಮಿ ಬಹುಮಾನ ಲಭಿಸಿದೆ. 'ಐವರು ವಚನಕಾರರು' ಕೃತಿಗೆ ಇಳಕಲ್ಲಿನ ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ, ವೀರಶೈವಗ್ರಂಥ ಬಹುಮಾನ "ಕುವೆಂಪು ಸಾಹಿತ್ಯ: ಕೆಲವು ಮುಖಗಳು" ಕೃತಿಗೆ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಬಹುಮಾನ, 'ತಾರಾಸಖಿ' ಕೃತಿಗೆ ರಾಜ್ಯ ಸರ್ಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ಬಹುಮಾನ. ವಚನ ವಿಲೋಚನಕ್ಕೆ ಬಸವವೇದಿಕೆಯ ಕಾವ್ಯಾನಂದ ಪುರಸ್ಕಾರ ಲಭ್ಯ ವಾಗಿದೆ. ಚಿತ್ರದುರ್ಗ ಬೃಹನ್ಮಠದ 'ವಿದ್ವತ್ ಶಿರೋಮಣಿ' ಪ್ರಶಸ್ತಿಯೂ ಮುಕ್ತಕ ಸಾಹಿತ್ಯ ಅಕಾಡೆಮಿಯ "ಹನಿಗವನದ ಹರಿಕಾರ" ಪ್ರಶಸ್ತಿಯೂ ಸಿ. ಪಿ. ಕೆ. ಅವರಿಗೆ ಸಂದಿದೆ.

ಅಧ್ಯಯನದ ನೆಲೆ ಬೆಲೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ ಸಾಹಿತ್ಯ ಚಳವಳಿಗೆ ನವ್ಯ ಪ್ರತಿಕ್ರಿಯಿಸುತ್ತಿದ್ದ ದಿನಗಳು. ೧೯೨೦-೪೫ರ ಸುಮಾರಿಗೆ ಸಂಭ್ರಮದಿಂದ ಸೃಷ್ಟಿಯಾದ ನವೋದಯದಲ್ಲಿ ಕೇವಲ ಕನಸುಗಾರಿಕೆ ಆದರ್ಶ ಶಬ್ದಾಡಂಬರ ಇದೆ ಎಂದೂ ೧೯೪೫ರಿಂದ ೧೯೫೦ರ ಸಮಯದಲ್ಲಿ ಸೃಷ್ಟಿಯಾದ ಪ್ರಗತಿಶೀಲರ ಸಾಹಿತ್ಯದಲ್ಲಿ ಕೇವಲ ವಾಸ್ತವದ ಅತಿರಂಜಿತ ಅಶ್ಲೀಲತೆ ಇದೆ ಎಂಬುದಾಗಿಯೂ ಆರೋಪಿಸಿ ೧೯೫೦ರ ಅನಂತರದ ನವ್ಯರು ಸಾಹಿತ್ಯ ರಚನೆಗೆ ತೊಡಗಬೇಕಾಯಿತು. ಕಾಲಕಾಲಕ್ಕೆ ಹೊಸ ಸಾಹಿತ್ಯ ಪ್ರಕಾರ ಹುಟ್ಟಿಕೊಂಡು ಆ ಸಾಹಿತ್ಯ ಪ್ರಕಾರವನ್ನು ಸಮರ್ಥಿಸಿಕೊಳ್ಳುವುದು ಅದೇ ಲೇಖಕರು ಬರೆದಂಥ ವಿಮರ್ಶೆಯಲ್ಲಿ ಗೋಚರವಾಯಿತು. ನವ್ಯವೂ ಇದರಿಂದ ಹೊರತಾಗಲಿಲ್ಲ.

ನವ್ಯಸಾಹಿತ್ಯಕ್ಕೂ ಓದುಗರಿಗೂ ಅಂತರವಿತ್ತು. ಈ ಅಂತರವನ್ನು ಸರಿಪಡಿಸ ಬೇಕಾದರೆ ವಿಮರ್ಶಕರ ಸಹಾಯಬೇಕಿತ್ತು. ಹಾಗಾಗಿ ಈ ಪಂಥದ ಲೇಖಕರಿಗಿಂತ

ವಿಮರ್ಶಕರಿಗೆ ಹೆಚ್ಚಿನ ಪ್ರಾಧಾನ್ಯತೆ ದೊರಕಿತು. ಸಹಜವಾಗಿ ಈ ವಿಮರ್ಶೆಯಲ್ಲಿ ಅನೇಕ ಮಾರ್ಗಗಳು ಕಾಣಿಸಿಕೊಂಡವು. ನವ್ಯರು ಬರೆದ ಕಾವ್ಯವನ್ನು ಕಾವ್ಯವೆಂದು ಒಪ್ಪಲಾರದ ಸ್ಥಿತಿ ಇತ್ತು. ಕಾವ್ಯಕ್ಕೆ ಅನೇಕ ಸವಾಲುಗಳೂ ಎದುರಾದುವು. ಹಾಗಾದರೆ ಅದನ್ನ ಅಳೆಯ ಬೇಕಾದ ಮಾನದಂಡಗಳು ಯಾವ ಬಗೆಯವು ಎಂಬುದನ್ನು ತಿಳಿಯುವ ಕುತೂಹಲ ಹೆಚ್ಚಾಯಿತು. ಜೊತೆಗೆ ನವ್ಯ ವಿಮರ್ಶಕ ನಮ್ಮ ಸಂಸ್ಕೃತಿಯಿಂದ ದೂರ ಸಾಗಿ ಪಾಶ್ಚಾತ್ಯೀಕರಣಗೊಂಡ ಆಧುನೀಕರಣದ ಎಲ್ಲ ಗೊಂದಲಗಳನ್ನು ಸಂಕಷ್ಟಗಳನ್ನು ದಾಖಲಿಸಿತು. ಪಾಶ್ಚಾತ್ಯೀಕರಣದ ಪ್ರಭಾವವಿಲ್ಲದ್ದನ್ನು ತಿರಸ್ಕಾರದಿಂದ ಕಂಡಿತು. ಸನಾತನ ಮೌಲ್ಯಧಾರೆಯನ್ನ ಹೊಸಪರಿಭಾಷೆಗಳಲ್ಲಿ ಊರ್ಜಿತಗೊಳಿಸುವ ಮನೋಧರ್ಮವೂ ನವ್ಯವಿಮರ್ಶೆಯಲ್ಲಿ ಕಾಣಿಸಿತು. ಇದನ್ನೇ 'ವ್ಯಕ್ತಿವಿಶಿಷ್ಟ ಅಭಿವ್ಯಕ್ತಿ ವಿಧಾನ' ಎಂದು ಕರೆದು ಸಿದ್ಧಾಂತವನ್ನಾಗಿ ಮಾಡಲಾಯಿತು. ವಿಮರ್ಶೆ ವ್ಯಕ್ತಿಕೇಂದ್ರಿತ ನೆಲೆಯಿಂದ ಕೃತಿ ಕೇಂದ್ರಿತ ನೆಲೆಗೆ ವರ್ಗಾಂತರವಾದಾಗ ಕೃತಿಯ ಭಾಷೆ, ಲಯ ವಿನ್ಯಾಸಗಳು ಎಷ್ಟರಮಟ್ಟಿಗೆ ಬಳಕೆಯಾಗಿವೆ ಎಂಬುದು ಕೃತಿಯ ಮೌಲ್ಯಮಾಪನದ ಸಂದರ್ಭದಲ್ಲಿ ಗಮನಿಸಲಾಯಿತು. 'ಏಕೀಕೃತ ಸಂವೇದನೆ, ಶಿಲ್ಪ, ಬಂಧ ಮತ್ತು ವ್ಯಂಗ್ಯ ಮುಂತಾದ ಪಾಶ್ಚಾತ್ಯ ಪರಿಕಲ್ಪನೆಗಳಿಗೆ ಹೆಚ್ಚು ಒತ್ತುಕೊಡಲಾಯಿತು. ಹೊರಗಿನ ಪರಿಕಲ್ಪನೆಗಳನ್ನು ಅಳವಡಿಸಿಕೊಂಡರೂ ನವ್ಯ ವಿಮರ್ಶೆ ಕನ್ನಡದ ಸಂದರ್ಭಕ್ಕೆ ಹೊಂದಿಸಿಕೊಂಡು ಭಾವಾವೇಶಕ್ಕೆ ಬದಲಾಗಿ ಸಂಯಮವನ್ನು ರೂಢಿಸಿಕೊಂಡಿತು. ತೀಕ್ಷ್ಣವಾದ ವಿವಾದಗಳಿಗೆ ಆಸ್ಪದ ಮಾಡಿಕೊಟ್ಟಿತು. ಸಂಕೀರ್ಣತೆ, ಸಮಗ್ರತೆ, ಅನುಭವ ಪ್ರಾಮಾಣ್ಯ, ಅಧಿಕೃತತೆ, ಸತ್ಯಶೋಧನೆ, ಅಂತರಂಗದ ಅಭಿವ್ಯಕ್ತಿ, ಪ್ರತಿಮಾ ನಿಷ್ಠತೆ ಮತ್ತು ಮೌಲ್ಯಶೋಧನೆ ಇವೆಲ್ಲ ಒಂದು ಕೃತಿಯ ಮಹತ್ವವನ್ನು ಗುರುತಿಸುವಲ್ಲಿ ನವ್ಯ ವಿಮರ್ಶಕರಿಗೆ ಬಹಳ ಮುಖ್ಯವಾದ ಸಂಗತಿಗಳಾದುವು. ಶಿಷ್ಟಸಾಹಿತ್ಯದ ಮಾನದಂಡಗಳಿಂದಲೇ ಜಾನಪದವನ್ನು ಪರಾಮರ್ಶಿಸುವ ಪರಿಪಾಠವೂ ಆರಂಭವಾಯಿತು.

ಜಾನಪದ ಚಟುವಟಿಕೆಗಳು ೭೦ರ ದಶಕದಲ್ಲಿ ಇನ್ನೂ ಆರಂಭದ ದೆಸೆಯಲ್ಲಿರುವಾಗ ಜಾನಪದ ಸಾಹಿತ್ಯವನ್ನು ಶಿಷ್ಟದ ನೆಲೆಯಲ್ಲಿಯೇ ನೋಡಲಾಗುತ್ತಿತ್ತು. ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದವರೆಲ್ಲ ಶುದ್ಧ ಸಾಹಿತಿಗಳಾದುದರಿಂದ ಅದರಲ್ಲಿನ ಸಾಹಿತ್ಯಿಕ ಅಂಶಗಳ ಕಡೆಗೆ ತಮ್ಮ ಅಧ್ಯಯನವನ್ನು ಕೇಂದ್ರೀಕರಿಸಲಾಗಿತ್ತು. ಇಂಥ ಸಂದರ್ಭದಲ್ಲಿ ಸಿಪಿಕೆ ಅವರು ಕನ್ನಡ ಜಾನಪದ ಕ್ಷೇತ್ರದಲ್ಲಿ ಕಾಣಿಸಿಕೊಂಡರು. ಭಾರತೀಯ ಕಾವ್ಯಮೀಮಾಂಸೆಯ ನೆಲೆಯಲ್ಲಿ ಜನಪದ ಕಾವ್ಯವನ್ನೂ ಅದರ ಬೇರೆ ಬೇರೆ ಸಂಗತಿಗಳನ್ನೂ ನಿರ್ಣಯಿಸುವ ಪರಿಪಾಠವಿತ್ತು. ಹಾಗೆ ಮಾಡುವುದರ ಮೂಲಕ ಜನಪದಕಾವ್ಯವೂ ಶಿಷ್ಟಕಾವ್ಯಕ್ಕಿಂತ ಯಾವುದರಲ್ಲೂ ಕಡಿಮೆಯಿಲ್ಲ ಎಂಬುದನ್ನು ಸಾಬೀತುಪಡಿಸುವ ಸಂದರ್ಭ ಅದು. ಜನಪದ ಸಾಹಿತ್ಯದ ಹಿರಿಮೆ ಗರಿಮೆಗಳು ಶಿಷ್ಟಸಾಹಿತ್ಯದ ಸಮಕ್ಕೆ ನಿಲ್ಲುವಂಥವು ಎಂಬುದರ

ಸಮರ್ಥನೆಯಲ್ಲಿ ಜನಪದ ಸಾಹಿತ್ಯ ವಿಮರ್ಶೆ ನಡೆಯಿತು. ಸಾಹಿತ್ಯಿಕ ನೆಲೆಯಲ್ಲಿ ಕಾವ್ಯಗುಣಗಳನ್ನು ಎತ್ತಿಹಿಡಿದು ಜಾನಪದದ ಸ್ಥಾನಮಾನಗಳನ್ನು ನಿರ್ಣಯಿಸುವ ವಿಮರ್ಶೆಯ ವಿಷಯದಲ್ಲಿ ಸಿಪಿಕೆ ಅವರ ಸಾಧನೆ ಹಿರಿದು. ಜೀಶಂಪ ಅವರ ಮಾತಿನಲ್ಲಿ ಹೇಳುವುದಾದರೆ "ಜನಪದಗೀತೆಗಳನ್ನು ಕಾವ್ಯವಿಮರ್ಶೆಯ ಸೂತ್ರಗಳಲ್ಲಿ ಶಾಸ್ತ್ರೀಯ ವಿವೇಚನೆಗೆ ಒಳಪಡಿಸಿ ವಿಶ್ಲೇಷಿಸಿರುವ ಪ್ರತಿಭಾಪೂರ್ಣ ಪ್ರಯತ್ನಗಳನ್ನು ಸಿಪಿಕೆ ಅವರ ಪ್ರಬಂಧಗಳಲ್ಲಿ ಕಾಣಬಹುದು. ಅವರ 'ಜಾನಪದ ಪ್ರತಿಭೆ' ಈ ದೃಷ್ಟಿಯಿಂದ ಅತ್ಯಂತ ಉತ್ಕೃಷ್ಟ ಕೃತಿಯಾಗಿದೆ."

೧೯೭೬ರಲ್ಲಿ ಹೊರಬಂದ ಈ ಕೃತಿಯಲ್ಲಿ ಎಂಟು ಲೇಖನಗಳಿವೆ. ಒಗಟುಗಳು, ಜನಪದಕಾವ್ಯದಲ್ಲಿ ಧ್ವನಿ, ಒಂದು ಭಾವಗೀತೆ : ಮಳೆಯ ಹಾಡು, ಜನಪದ ಕವಿಗಳಲ್ಲಿ ಶಿವಪ್ರಜ್ಞೆ, ಸ್ವಾತಂತ್ರ್ಯೋತ್ತರ ಜನಪದಸಾಹಿತ್ಯ ಸಂಗ್ರಹ, ಕೆಲವು ಜನಪದಗೀತ ಸಂಕಲನಗಳು, ಜನಪದ ಸಾಹಿತ್ಯದ ಒಂದು ಗಡಿಕಲ್ಲು- ಇವೇ ಅದರಲ್ಲಿರುವ ಎಂಟು ಲೇಖನಗಳು. "ಕವಿ ಸಹಜವಾದ ಆರ್ದ್ರ ಹೃದಯದಿಂದ ಜನಪದ ಸಾಹಿತ್ಯವನ್ನು ಅಭ್ಯಸಿಸಿ ಅದರ ಸಾಹಿತ್ಯ ಸೌಂದರ್ಯವನ್ನು ಅನುಭವಿಸಿ, ಪಾಂಡಿತ್ಯ ಪೂರ್ಣವಾದ ಎಂಟು ಲೇಖನಗಳನ್ನು ಈ ಪುಟ್ಟ ಪುಸ್ತಿಕೆಯಲ್ಲಿ ನೀಡಿದ್ದಾರೆ" (ತ. ಸು. ಶಾಮರಾಯ). ಯಾವುದೇ ವಿಷಯದ ಬಗೆಗೆ ಬರೆಯುವಾಗಲೂ ಆ ವಿಷಯದ ಹಿಂದೆ ಹೋಗಿ ಅದರ ಪ್ರಾಚೀನ ಸಂಗತಿಗಳ ಶೋಧದಲ್ಲಿ ತೊಡಗುವುದರ ಜೊತೆಯಲ್ಲೇ ಅರ್ವಾಚೀನ ಸಂಗತಿಗಳ ಬೆಲೆ ಕಟ್ಟುವುದು ಸಿಪಿಕೆ ಬರವಣಿಗೆಯ ವೈಶಿಷ್ಟ್ಯ. ಅದೇ ರೀತಿ ಈ ಕೃತಿಯ ಒಗಟುಗಳನ್ನು ಕುರಿತ ಬರಹದಲ್ಲಿ ಜನಪದ ಭಾಷೆ ಸಾಹಿತ್ಯದ ಪ್ರಾಮುಖ್ಯ ಪ್ರಾಶಸ್ತ್ಯ, ನಿಷ್ಪತ್ತಿ, ಸ್ವಾರಸ್ಯ ಸೌಂದರ್ಯದ ಬಗೆಗಳು, ಇತಿಹಾಸ-ಇವೆಲ್ಲದರ ಬಗೆಗೆ ಚರ್ಚಿಸುತ್ತಾ ಒಗಟುಗಳೂ ಸಹ ಕಾವ್ಯದ ಪ್ರಕಾರವೆಂದು ಸಂಭಾವಿಸಿ ವಿವೇಚಿಸಿರುವ ರೀತಿ ಗಮನಾರ್ಹವಾದುದು.

"ರಸ ಧ್ವನಿ ಔಚಿತ್ಯ-ಇವು ಭಾರತೀಯ ಕಾವ್ಯ ಮೀಮಾಂಸೆ ದೀರ್ಘಕಾಲದ ಚಿಂತನ ಮಂಥನಗಳಿಂದ ಸಾಧಿಸಿದ ಗಾಯತ್ರಿ ; ಜಾಗತಿಕ ಕಾವ್ಯಮೀಮಾಂಸೆಗೆ ನೀಡಿರುವ ಅಮೂಲ್ಯವಾದ ಕೊಡುಗೆ. ಈ ತತ್ತ್ವತ್ರಯದಲ್ಲಿ ಧ್ವನಿಗೇ ಪರಮ ಪ್ರಾಶಸ್ತ್ಯ. ಅದೇ ಕಾವ್ಯ ಜೀವಿತ, ಒಂದು ರೀತಿಯಲ್ಲಿ ರಸತತ್ತ್ವವನ್ನು ಅದು ಒಳಗೊಳ್ಳಬಲ್ಲದು" ಎಂದು ಹೇಳುವ ಸಿಪಿಕೆ 'ಜನಪದಕಾವ್ಯದಲ್ಲಿ ಧ್ವನಿ' ಎಂಬ ಲೇಖನದಲ್ಲಿ ಧ್ವನಿಯೇ ಕಾವ್ಯದ ಆತ್ಮ. ರಸ ಎಷ್ಟೋ ಕಡೆ ಧ್ವನಿತವಾಗಬಹುದು. ಆದರೆ ರಸವಿಲ್ಲದೆಡೆಯಲ್ಲಿ ಧ್ವನಿಯ ಬಲದಿಂದಲೇ ಕಾವ್ಯತ್ವ ಸಿದ್ಧಿಸಬಲ್ಲದು ಎಂಬುದನ್ನು ಪ್ರತಿಪಾದಿಸುತ್ತಾರೆ.

ಜನಪದಕಾವ್ಯದ ಜೀವಂತಿಕೆ ನಿಂತಿರುವುದು ಜನಪದಕವಿಗಳ ಪ್ರತಿಭೆಯಿಂದ ಶಿಷ್ಟ ಕವಿಗಳ ಕಾವ್ಯ ಸೃಜನಶೀಲತೆಯನ್ನು ಹೀಯಾಳಿಸುವ ರೀತಿಯಲ್ಲಿ ಅದಕ್ಕೂ ಒಂದು ಕೈಮಿಗಿಲೆಂಬಂತೆ ಜನಪದರ ಕಾವ್ಯ ಮೂಡಿಬಂದಿರುವ ಬಗೆಯನ್ನು ಸಾಹಿತ್ಯಿಕ ನೆಲೆಯಲ್ಲಿ

ಪರಿಭಾವಿಸಿರುವ ರೀತಿ ಔಚಿತ್ಯಪೂರ್ಣವಾಗಿದೆ. ಭಕ್ತಿ, ವಾತ್ಸಲ್ಯ, ತವರು, ದಾಂಪತ್ಯ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಹಲವು ತ್ರಿಪದಿಗಳು ಇಲ್ಲಿ ವಿಮರ್ಶೆಗೆ ಒಳಗಾಗಿವೆ. ಕಾವ್ಯದ ಮಹತ್ವದ ದೃಷ್ಟಿಯಿಂದಲೂ ಅವು ಮುಖ್ಯವಾಗಿವೆ. 'ಮಳೆಯ ಹಾಡು' ಕುರಿತ ಲೇಖನದಲ್ಲಿ ಕಲೆ ಮತ್ತು ಸಂಸ್ಕೃತಿ ದೃಷ್ಟಿಯಿಂದ ಕಾವ್ಯವನ್ನು ನೋಡಿರುವ ದೃಷ್ಟಿ ಮುಖ್ಯವಾಗಿದೆ. ಜಾನಪದ ಮನೋಧರ್ಮದ ಅನ್ವೇಷಣೆಗೆ ತೊಡಗಿ ಮಲ್ಲಿಗೆ ದಂಡೆ ಸಂಕಲನದ ಮಳೇಹಾಡನ್ನು ಪ್ರಾಯೋಗಿಕ ವಿಮರ್ಶೆಗೆ ಒಳಪಡಿಸುವುದರ ಮೂಲಕ ಬಳಕೆಯಲ್ಲಿದ್ದ ವಿಮರ್ಶನ ಪದ್ಧತಿಯನ್ನು ಸಹೃದಯರ ಗಮನಕ್ಕೆ ಬಿಡಲಾಗಿದೆ. ಒಟ್ಟಾರೆ ಕ್ಷಾಮದ ಪರಿಣಾಮಗಳನ್ನು ಗುರುತಿಸುವಲ್ಲಿ ಲೇಖನ ಯಶಸ್ಸು ಪಡೆದಿದೆ. ಜನಪದ ಕವಿಗಳು, ಶಿವನನ್ನು ಪ್ರಾರ್ಥಿಸಿದ ಸಂಗತಿಗಳನ್ನು 'ಜನಪದಕವಿಗಳಲ್ಲಿ ಶಿವಪ್ರಜ್ಞೆ' ಯಲ್ಲಿ ಚಿತ್ರಿಸಲಾಗಿದೆ. ಮೃತ್ಯು ಮತ್ತು ಪ್ರಣಯದ ಬಗ್ಗೆ ಜನಪದ ಕವಿಗಳ ಕಾವ್ಯಕಲ್ಪನೆಯನ್ನು ವಿಶ್ಲೇಷಿಸಲಾಗಿದೆ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಆದ ಬೆಳವಣಿಗೆಗಳನ್ನು 'ಸ್ವಾತಂತ್ರ್ಯೋತ್ತರ ಜನಪದ ಸಾಹಿತ್ಯ ಸಂಗ್ರಹ' ಲೇಖನದಲ್ಲಿ ದಾಖಲಿಸಲಾಗಿದೆ. ಜಾನಪದವೆಂದರೆ ಹಾಡುಗಳು ಎಂಬ ಭಾವನೆ ಇದ್ದದ್ದರಿಂದ ಆ ಕ್ಷೇತ್ರದಲ್ಲಿ ಮಾತ್ರ ಸಾಕಷ್ಟು ಕೆಲಸ ನಡೆಯಿತು. ಉಳಿದ ವಿಷಯಗಳ ಮೇಲೆ ಅಷ್ಟಾಗಿ ಗಮನಹರಿಯಲಿಲ್ಲ. ಕನ್ನಡ ನವೋದಯ ಪ್ರಾರಂಭವಾದಾಗ ಅದರ ಅಂಗವಾಗಿ ಜನಪದ ಸಾಹಿತ್ಯ ಸಂಗ್ರಹ ಸಂಪಾದನೆಯ ಕೆಲಸ ನಡೆಯಿತು. ಇದರ ಚಾರಿತ್ರಿಕ ಬೆಳವಣಿಗೆಗಳನ್ನು ಸಿ.ಪಿ.ಕೆ. ಅವರು ಗುರುತಿಸಿ ನಿರೀಕ್ಷಿತ ಪ್ರಮಾಣದಲ್ಲಿ ಸರ್ವಾಂಗ ಪುಷ್ಟವಾಗಿ ಬಂದಿಲ್ಲದಿರುವುದನ್ನು ಹೇಳದೆ ಬಿಟ್ಟಿಲ್ಲ. ಆರಂಭದಲ್ಲಿನ ಮುಖ್ಯ ಸಂಕಲನಗಳನ್ನು ಸಿ.ಪಿ.ಕೆ. ಗಮನಿಸಿದ್ದಾರೆಂಬುದಕ್ಕೆ 'ಕೆಲವು ಜನಪದಗೀತ ಸಂಕಲನಗಳು' ಲೇಖನ ಸಾಕ್ಷಿ. ಶ್ರೀಚಂದ್ರಶೇಖರನಾಥಸ್ವಾಮೀಜಿ ಅವರ 'ಆದಿಚುಂಚನಗಿರಿಯ ಜನಪದಗೀತೆಗಳು', ಕರಾಕೃ ಅವರ'ಜಾನಪದ ಕಥನ ಗೀತೆಗಳು' 'ಜೇನಹನಿಗಳು' 'ಜಾನಪದ ಪ್ರೇಮಗೀತೆಗಳು' 'ಅಂಬಿಗರ ಗಂಗ' 'ಮಲ್ಲಿಗೆ ನಗುತಾವೆ' ''ಆಯ್ದ ಮುತ್ತುಗಳು'' 'ಆಯ್ದ ಜಾನಪದ ಗೀತೆಗಳು' 'ಗುಡ್ಡಾಡಿನ ಹಾಡ್ಗತೆಗಳು' – ಈ ಸಂಕಲನಗಳು ಸಮೀಕ್ಷೆಗೆ ಒಳಪಟ್ಟಿದ್ದು ಈ ಹಾಡುಗಳಲ್ಲಿ ಜನರ ಭಕ್ತಿ ಸಂಪನ್ನತೆಯನ್ನು ಸುಸಂಸ್ಕೃತಿಯನ್ನು ಗುರುತಿಸಿದ್ದಾರೆ. 'ಬಾಂದಿನವರಹಾಡು' ಗ್ರಾಮೀಣರ ಅಜ್ಞಾನ ಮುಗ್ಧತೆಗಳನ್ನು ವ್ಯಕ್ತಪಡಿಸುವ ಒಂದು ವಿನೋದಕರ ಗೀತೆಯಾಗಿ ತೋರುತ್ತದಷ್ಟೆ. ಆದರೆ ಅದು ಜನಜೀವನದಲ್ಲಿ ಘಟಿಸಿದ ಮಹಾಸಂಕ್ರಮಣದ ಸಾಹಿತ್ಯಿಕ ದಾಖಲೆಯಾಗಿದೆ. ಜಮೀನುಗಳನ್ನು ವಿಂಗಡಿಸಿ ಬಾಂದು ಕಲ್ಲುಗಳನ್ನು ನೆಡುವ ಸರ್ವೆ ಇಲಾಖೆಯ ಮಂದಿ ಬರುತ್ತಾರೆಂದು ತಿಳಿದಾಗ ಜನರಲ್ಲಿ ಉಂಟಾದ ಗಲಿಬಿಲಿ ಕಳವಳಗಳು ಈ ಪದ್ಯ ಕುರಿತ ಲೇಖನದಲ್ಲಿ ಪ್ರಕಟಿತವಾಗಿವೆ.

ಸಿ. ಪಿ. ಕೆ. ಅವರ 'ಜಾನಪದ ಸರಸ್ವತಿ' ೧೯೭೩ರಲ್ಲಿ ಹೊರಬಂದ ಕೃತಿ.

ಜನಪದ ಸಾಹಿತ್ಯ ಕುರಿತ ಕೆಲವು ಭಾಷಣ ಲೇಖನ, ಮುನ್ನುಡಿಗಳನ್ನು ಒಳಗೊಂಡಿದ್ದು. ಇದು 'ಜಾನಪದ ಪ್ರತಿಭೆ'ಯ ಮುಂದುವರಿಕೆ. ಅಂದರೆ ಅದರಲ್ಲಿ ನಡೆದಂತೆ ಇದರಲ್ಲೂ ಆನ್ವಯಿಕ ವಿಮರ್ಶೆ ನಡೆದಿದೆ. ಇದರಲ್ಲಿ ಹನ್ನೊಂದು ಲೇಖನಗಳಿವೆ. 'ಜನಪದ ಸಾಹಿತ್ಯ ಕುರಿತ ಕೆಲವು ವಿಚಾರಗಳು' ನಾಗಮಂಗಲದಲ್ಲಿ ನಡೆದ ತೃತೀಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷ ಭಾಷಣ, ಜನಪದ ಸಾಹಿತ್ಯದ ಮಹತ್ವ, ಹಲವು ದೃಷ್ಟಿಗಳಿಂದ ಅದರ ಅಧ್ಯಯನ, ಸಾಗಬೇಕಾದ ಅನಿವಾರ್ಯತೆ, ಜನಪದ ಕಾವ್ಯಮಿಮಾಂಸೆಯ ಅಗತ್ಯ ಅದರ ಕಲಾತ್ಮಕತೆ- ಸಂಕೇತ ನಿಷ್ಠತೆ-ಮುಂತಾದ ಹಲವು ಸಂಗತಿಗಳು ಇದರಲ್ಲಿ ಚರ್ಚೆಗೊಳಪಟ್ಟಿವೆ. "ಅಲಂಕಾರ ರೀತಿ ವಕ್ರೋಕ್ತಿ, ಸ್ವಭಾವೋಕ್ತಿ, ಧ್ವನಿ ರಸ ಪ್ರತಿಮೆ-ಮುಂತಾದ ತತ್ತ್ವಗಳ ಬೆಳಕಿನಲ್ಲಿ ಜನಪದಕಾವ್ಯವನ್ನು ವ್ಯಾಖ್ಯಾನಿಸ ಬಹುದು. ಅದಕ್ಕಿಂತ ಮಿಗಿಲಾಗಿ ಕೆಲವು ಮೂಲ ತತ್ತ್ವಗಳನ್ನು ಜನಪದ ಕಾವ್ಯಾನು ಶೀಲನದಿಂದ ರೂಪಿಸುವ ಸಾಧ್ಯತೆಯಿದೆ. ಕಾವ್ಯನಿರ್ಮಿತಿ ಜಾಗ್ರತ ಮನಸ್ಸಿನ ಕ್ರಿಯೆಯೇ ಸುಪ್ತಮನಸ್ಸಿನದೇ ಎಂಬುದು ಮನಶ್ಶಾಸ್ತ್ರ ಕಾವ್ಯಮೀಮಾಂಸೆಗಳೆರಡಕ್ಕೂ ಸೇರಿದ ಚರ್ಚಾಸ್ಪದ ಪ್ರಶ್ನೆ. ಈ ಮೂಲಭೂತ ವಿಷಯದ ಮೇಲೆ ಜನಪದ ಕಾವ್ಯ ಪ್ರಾಯಃ ನಿರ್ಣಾಯಕವಾಗಿ ಬೆಳಕು ಚೆಲ್ಲಬಹುದು". ಹೀಗೆ ಸಿ.ಪಿ.ಕೆ. ಕಾವ್ಯದ ಮೌಲ್ಯಮಾಪನವನ್ನು ಮಾಡುವ ಬಗೆ ಅನನ್ಯವಾದುದು. ತ್ರಿಪದಿಗಳ ಕಲಾತ್ಮಕತೆ, ಸೌಂದರ್ಯದರ್ಶನ ಕೌಟುಂಬಿಕ ಸಾಮರಸ್ಯ ಸಾಂಕೇತಿಕತೆ ಇತ್ಯಾದಿ ಗುಣಗಳನ್ನು ತ್ರಿಪದಿಗಳಲ್ಲಿ ಅನ್ವೇಷಿಸಿದ್ದಾರೆ. ಜನಪದ ಕವಿತೆಯ ಸೊಗಸುಗಾರಿಕೆಯನ್ನು ಪ್ರತ್ಯೇಕವಾಗಿ ಕೆಲವು ನಿದರ್ಶನಗಳೊಂದಿಗೆ ವಿಶ್ಲೇಷಿಸಿರುವ ರೀತಿಯೂ ಗಮನಾರ್ಹ. ಪ್ರೌಢಕವಿಗಳಿಗಿಂತ ಇದು ಏನೇನೂ ಕಡಿಮೆಯದಲ್ಲ ಎಂದು ಉನ್ನತಿಯನ್ನು ಸಾರುವಂತಿದೆ. ನಾಡಪದ ಗಳು ಸಂಕಲನದ 'ಅಕ್ಕನ ಮನೆಯಲ್ಲಿ ತಂಗಿ' ಮತ್ತು 'ಭಾವ ನಾದಿನಿಯರ ಸರಸ' – ಈ ಎರಡೂ ಗಮನ ಸೆಳೆಯುವಂಥವು. ಇವುಗಳ ತೌಲನಿಕ ವಿಮರ್ಶೆ 'ಜನಪದ ಕಾವ್ಯದಲ್ಲಿ ಭಾವ ನಾದಿನಿಯರ ಎರಡು ಪ್ರಸಂಗಗಳು' ಬರಹದಲ್ಲಿ ನಡೆದಿದೆ. ಗರತಿಗಂಗವ್ವ, ಜೀವನ ಮೌಲ್ಯದ ದೃಷ್ಟಿಯಿಂದ ಅಪೂರ್ವ ಕಥನ ಕವನ. ಇದರ ಬಗ್ಗೆ ಸಾಕಷ್ಟು ಚರ್ಚೆ ನಡೆದಿದ್ದರೂ ಸಾಮಾಜಿಕ, ಸಾಹಿತ್ಯಿಕದೃಷ್ಟಿ ಇದರ ಮಹತ್ವವನ್ನು ಹೆಚ್ಚಿಸಿದೆ. ವಿದ್ಯಾದೇವತೆ ಸರಸ್ವತಿ ಸ್ತವನ ಶಿಷ್ಟಕವಿಗಳಲ್ಲಿ ಕೇವಲ ಸಂಪ್ರದಾಯದ ಅಂಗವಾಗದೆ ಅದೊಂದು ಬೌದ್ಧಿಕ ಕ್ರಿಯೆಯಾಗಿ ಮೆರೆದಿದೆ. "ಸರಸ್ವತಿ ಕೃಪೆಯಿಲ್ಲದೆ ಕಾವ್ಯರಚನೆ ಸಾಧ್ಯವೇ ಇಲ್ಲ ಎನ್ನುವಂತಹ ಅನಿವಾರ್ಯತೆಯನ್ನು ನಮ್ಮ ದೊಡ್ಡ ದೊಡ್ಡ ಕವಿಗಳು ಅನುಭವಿಸಿದಂತೆ ತೋರುವುದಿಲ್ಲ. ಆ ಸಂವೇದನೆಯನ್ನು ನಾವು ಜಾನಪದ ಕವಿಗಳಲ್ಲಿ ವಿಶೇಷವಾಗಿ ನೋಡುತ್ತೇವೆ. ಅವರ ಪಾಲಿಗೆ ಸರಸ್ವತಿ 'ಪರಮಜಿನೇಂದ್ರ ವಾಣಿ' ಯಂಥ ಅಮೂರ್ತ ತತ್ತ್ವವೂ ಅಲ್ಲ, ಕೇವಲ ಸುಂದರ ಸ್ತ್ರೀಯೂ ಅಲ್ಲ. ಅವಳು ಅತ್ಯಂತ ಆತ್ಮೀಯಳಾದ, ಆದರೆ ಅಷ್ಟೇ ಪೂಜ್ಯಳಾದ ದೇವಿ.

ಅವಳು ಒಲಿಯದಿದ್ದರೆ ಹಾಡು ಮೂಡದು.'' ಹೀಗೆ 'ಜಾನಪದ ಸರಸ್ವತಿ', ಲೇಖನದಲ್ಲಿ ಸರಸ್ವತಿಯನ್ನು ಪ್ರೌಢಕವಿಗಳು ಕಂಡ ರೀತಿಗೂ ಜಾನಪದ ಕವಿಗಳು ಕಂಡ ರೀತಿಗೂ ಇರುವ ವ್ಯತ್ಯಾಸವನ್ನು ಗುರುತಿಸಲಾಗಿದೆ. ಸಮರ್ಥನೆಗೆ ಅವಕಾಶವಾದಾಗಲೆಲ್ಲಾ ಶಿಷ್ಟದ ವಿವರಗಳನ್ನು ಸಿಪಿಕೆ ಒದಗಿಸಿ ಬಿಡುತ್ತಾರೆ. ಡಿ. ಕೆ. ರಾಜೇಂದ್ರ ಅವರ 'ಜಾನಪದ ಸಮೀಕ್ಷೆ' ನಂ. ತಪಸ್ವೀಕುಮಾರರ 'ಜಾನಪದ ಸಂಸ್ಕೃತಿ' ಕೃತಿಗಳಿಗೆ ಬರೆದ ಎರಡು ಮುನ್ನುಡಿಗಳೂ ಇದರಲ್ಲಿವೆ. ಒಟ್ಟಾರೆ ಸಿಪಿಕೆ 'ಜಾನಪದ ಪ್ರತಿಭೆ' ಮತ್ತು 'ಜಾನಪದ ಸರಸ್ವತಿ' ಕೃತಿಗಳ ಮೂಲಕ ಜನಪದಗೀತೆಗಳ ಶಕ್ತಿ ಮತ್ತು ಭಾವಸಂಪತ್ತನ್ನು ಎತ್ತಿಹಿಡಿದರು. ಜಾನಪದ ಪರಂಪರೆಯ ಹಿನ್ನೆಲೆಯಲ್ಲಿ ಅವುಗಳ ಮೌಲ್ಯಮಾಪನ ಮಾಡಿದರು.

೧೯೭೫ರಲ್ಲಿ ಪ್ರಕಟವಾದ ಕೃತಿ 'ಜನಪದಗೀತೆ' ಜನಪದ ಗೀತೆಯ ಹುಟ್ಟು. ಅದರ ಲಕ್ಷಣ ಸ್ವರೂಪ ವರ್ಗೀಕರಣ ಕ್ರಿಯಾತ್ಮಕತೆ ಅದರ ಅಗ್ಗಳಿಕೆ-ಇತ್ಯಾದಿಗಳನ್ನು ಈ ಕೃತಿಯಲ್ಲಿ ಚರ್ಚಿಸಲಾಗಿದೆ. ಜನಪದ ಗೀತೆಗೆ ಪ್ರವೇಶಿಕೆಯಂತಿರುವ ಇದರಲ್ಲಿ ವಿವಿಧ ವಿದ್ವಾಂಸರ ವ್ಯಾಖ್ಯಾನಗಳನ್ನು ನೀಡಲಾಗಿದೆ. "ಕೇವಲ ಮೂವತ್ತು ಪುಟಗಳ ವ್ಯಾಪ್ತಿಯಲ್ಲಿ ಹಲವಾರು ಇಂಗ್ಲಿಷ್ ಮತ್ತು ಕನ್ನಡ ಜಾನಪದ ವಿದ್ವಾಂಸರ ಅಭಿಪ್ರಾಯಗಳನ್ನು ಸಂಗ್ರಹವಾಗಿ ವಿವೇಚಿಸಿದ್ದಾರೆ. ಸ್ವಂತ ನಿಲುವುಗಳೂ ಇವೆ. ಸಮಗ್ರವಾದ ಸಮೀಕ್ಷೆಯೊಂದನ್ನು ಈ ಕೃತಿಯಲ್ಲಿ ಕಾಣಬಹುದು'' (ಡಾ. ಕೆ. ಮರುಳ ಸಿದ್ದಪ್ಪ). ಸೋಮಶೇಖರ ಇಮ್ರಾಪೂರರ ಮಾತುಗಳೂ ಸಹ ಈ ಅಭಿಪ್ರಾಯಕ್ಕೆ ಪೂರಕ ವಾಗಿಯೇ ಇದೆ. ಈ ಕೃತಿಯಲ್ಲಿ ಜಾನಪದ ಅಧ್ಯಯನದ ವ್ಯಾಪ್ತಿಯಲ್ಲಿ ಜನಪದಗೀತೆ ಗಳ ಮೂಲವಿಕಾಸ ಮತ್ತು ಬೃಹತ್ತುಗಳೆಲ್ಲವನ್ನು ಸೈದ್ಧಾಂತಿಕವಾಗಿ ವಿಶ್ಲೇಷಿಸಿರುವುದು ಅವರ ಆಳವಾದ ಚಿಂತನೆಯ ಪ್ರತೀಕವಾಗಿದೆ.

೧೯೮೧ರಲ್ಲಿ ಪ್ರಕಟವಾದ ಸಿಪಿಕೆ ಅವರ 'ಜನಪದ ಸಾಹಿತ್ಯ ಪ್ರವೇಶಿಕೆ'ಯಲ್ಲಿ ಗೀತೆ, ಕಥನಗೀತೆ, ಲಾವಣಿ, ಗಾದೆ, ಒಗಟು, ಕಥೆಗಳನ್ನು ಕುರಿತಂತೆ ಪರಿಚಯಾತ್ಮಕ ಲೇಖನಗಳಿವೆ. ಹೊಸಬರ ಕುತೂಹಲ ಕೆರಳಿಸುವ ಈ ಕೃತಿಯನ್ನು ಕುರಿತು ಪಿ.ಕೆ. ರಾಜಶೇಖರ ಅವರು 'ಜನಪದ ಸಾಹಿತ್ಯ ಪ್ರವೇಶಿಕೆ ಶಾಸ್ತ್ರೀಯ ಗ್ರಂಥ ಕನ್ನಡಕ್ಕೆ ಸಂದ ಅಪೂರ್ವ ಕೊಡುಗೆ' ಎಂದಿದ್ದಾರೆ. 'ಗಂಧದಕೋಟೆ ಗಮಗಮ' (೧೯೮೨), 'ಚೆಲುವಯ್ಯ ವರನಂದಿ' (೧೯೮೭) - ಈ ಎರಡೂ ಗದ್ಯಾನುವಾದ ಕೃತಿಗಳು. ಮೊದಲ ಕೃತಿಯಲ್ಲಿ ಕರಾಕೃ ಅವರ ಜೇನಹನಿಗಳು ಮತ್ತು ಜಾನಪದ ಪ್ರೇಮಗೀತೆಗಳು ಸಂಕಲನಗಳ ಕೆಲವು ಗೀತೆಗಳನ್ನು ಆಯ್ದು ಅವುಗಳ ಗದ್ಯಾನುವಾದವನ್ನು ಒದಗಿಸಿದ್ದಾರೆ. ಎರಡನೆಯದರಲ್ಲಿ ಜನಪದ ಕಥನಗೀತೆಯ ಗದ್ಯಾನುವಾದವಿದೆ. ಚೆಲುವಯ್ಯ ವರನಂದಿಯರ ಆದರ್ಶ ಪ್ರೇಮವನ್ನು ಜನಪದ ಕವಿಗಳು ಸ್ವಾರಸ್ಯಪೂರ್ಣವಾಗಿ ವರ್ಣಿಸಿರುವ ರೀತಿ ಇದೆ. ೧೯೮೭ರಲ್ಲಿ ಪ್ರಕಟವಾದ 'ಜಾನಪದಜಾಗರ'ದಲ್ಲಿ ೧೫

ಲೇಖನಗಳಿವೆ. ಜನಪದ ಸಾಹಿತ್ಯ ಪ್ರಕಾರಗಳಿಗೆ ಸಂಬಂಧಿಸಿದ ಮಾಮೂಲಿ ಬರಹಗಳೊಂದಿಗೆ ಆ ಕಾಲಕ್ಕೆ ಹೊಸದಾಗಿದ್ದ 'ವೃತ್ತಿ ಜಾನಪದ', 'ಜನಪದಗೀತೆಗಳಲ್ಲಿ ಸಂಸ್ಕೃತಿ' 'ಗೊಂಡ ಪ್ರೇಮ ಗೀತೆಗಳು ಇತ್ಯಾದಿ ವಿಷಯಗಳ ಪ್ರಸ್ತಾಪವಿದೆ. ಶೃಂಗಾರ, ಹಾಸ್ಯ, ಮಕ್ಕಳ ಚಿತ್ರ' - ಮುಂತಾದ ವಿಷಯಗಳ ಮೌಲಿಕ ಚರ್ಚೆಯನ್ನು ಇದರಲ್ಲಿ ಸಿ.ಪಿ.ಕೆ. ನಡೆಸಿದ್ದಾರೆ. ಜನಪದ ಸಾಹಿತ್ಯ ಪ್ರಕಾರಗಳನ್ನು ಶುದ್ಧ ಸಾಹಿತ್ಯಿಕ ನೆಲೆಯಲ್ಲಿ ನೋಡುತ್ತಿದ್ದ ದಿನಗಳಲ್ಲಿ ಜನಪದ ಸಾಹಿತ್ಯದ ಸಾಹಿತ್ಯಿಕ ಮೌಲ್ಯವನ್ನು ಶೋಧಿಸುವಲ್ಲಿ ಸಿ.ಪಿ.ಕೆ. ಅವರ ಪಾತ್ರ ಹಿರಿದು. ಹಾಗಾಗಿ ಅವರ ಜಾನಪದ ವಿಮರ್ಶೆ ಕನ್ನಡ ಸಾಹಿತ್ಯ ವಿಮರ್ಶೆಯ ಒಟ್ಟು ಸಂದರ್ಭದಲ್ಲಿ ನೋಡಿದಾಗಲೂ ಗಂಭೀರವಾದುದಾಗಿಯೇ ಗೋಚರವಾಗುತ್ತದೆ. ಈ ಬಗೆಯ ವಿಮರ್ಶೆ ಇಷ್ಟು ಪ್ರಮಾಣದಲ್ಲಿ ಸದ್ಯಕ್ಕೆ ಇನ್ನೊಬ್ಬರಲ್ಲಿ ದೊರೆಯದು (ರಾಗೌ) ಎಂಬ ಮಾತು ನಿಜವೆನಿಸುತ್ತದೆ.

ಚುಂಚನಗಿರಿ, ಹಬ್ಬಲಿ ಅವರ ರಸಬಳ್ಳಿ, ಮುತ್ತು ತುಂಬೇವು ಕಣಜಾಕೆ ಮುಂತಾದ ಸ್ಮರಣ ಸಂಚಿಕೆಗಳ ಸಂಪಾದಕರಾಗಿಯೂ ಸಿ.ಪಿ.ಕೆ. ಗಮನ ಸೆಳೆದಿದ್ದಾರೆ. ೧೯೮೮ರಲ್ಲಿ 'ಕಾಡಿನ ಹಾಡುಗಳು' (ಮೂಲ ಸಂಗ್ರಾಹಕರು ವೆರಿಯರ್ ಎಲ್ವಿನ್, ಶಾಮಲಾನ್ ಹೋಲ್). ಸ್ಮಿಥ್ ಥಾಂಸನ್ನನ 'ಜನಪದ ಕಥೆ' ರಾಗೌ ಅವರೊಡನೆ, 'ಕಾಡಿನ ಎಲೆಗಳು' (ವೆರಿಯರ್ ಎಲ್ವಿನ್ನರ ದಿನಚರಿ) ಮುಂತಾದ ಕೃತಿಗಳನ್ನು ಅನುವಾದಿಸಿ ಜಾನಪದ ಅಧ್ಯಯನ ಶ್ರೀಮಂತಿಕೆಗೆ ಕಾರಣರಾಗಿದ್ದಾರೆ.

ಸಿ.ಪಿ.ಕೆ. ಅವರ ಈ ಸಾಧನೆಯನ್ನು ಗಮನಿಸಿದರೆ ಚದುರಂಗರ ಮಾತುಗಳು ನೆನಪಾಗದಿರದು. "ಜಾನಪದ ಕ್ಷೇತ್ರದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ವಿದ್ವತ್ಪೂರ್ಣ ಕೃತಿಗಳನ್ನು ರಚಿಸಿ ಇಲ್ಲೂ ತಾವು ಯಾರಿಗೂ ಎರಡನೆಯ ಸ್ಥಾನದಲ್ಲಿಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ". ಒಟ್ಟಾರೆ ಹೇಳುವುದಾದರೆ ಕನ್ನಡ ಜಾನಪದದಲ್ಲಿ ಸಂಗ್ರಹಕಾರ್ಯ ಶಾಸ್ತ್ರೀಯವಾಗಿ ನಡೆಯದಿದ್ದ ದಿನಗಳಲ್ಲಿ ಸಿ.ಪಿ.ಕೆ. ಜನಪದ ಸಾಹಿತ್ಯವನ್ನು ಕುರಿತಂತೆ ತಾತ್ತ್ವಿಕವಾಗಿ ಚಿಂತನೆ ಮಾಡಿದ ಅಗ್ರಗಣ್ಯರು. ಆಗಿನ ಕೃತಿಗಳಿಗೆ ಹಿನ್ನುಡಿ-ಮುನ್ನುಡಿ ಬರೆಯುವ ಮೂಲಕ ಕೃತಿಕಾರರ ಬೆನ್ನು ತಟ್ಟಿ ಇಡೀ ಜಾನಪದವನ್ನು ಬೌದ್ಧಿಕ ಜಿಜ್ಞಾಸೆಗೆ ಒಳಪಡಿಸಿದ ಗಂಭೀರ ವಿಮರ್ಶಕರಾಗಿ ಕಂಡರು. "ಕಾವ್ಯ, ವಿಮರ್ಶೆ, ಸಂಶೋಧನೆ, ಜಾನಪದ ಮತ್ತು ಅನುವಾದ ಕ್ಷೇತ್ರಗಳಲ್ಲಿ ಅತ್ಯಂತ ಗಟ್ಟಿಯಾದ ಮತ್ತು ಮೌಲಿಕವಾದ ಕೃಷಿಯನ್ನು ಮಾಡಿ ಕನ್ನಡ ಓದುಗರ ಬೆರಗಿಗೂ ಗೌರವಕ್ಕೂ ಪಾತ್ರರಾಗಿದ್ದಾರೆಂಬ ಪ್ರಶಂಸೆಗೆ ಸಿಪಿಕೆ ಕಾರಣರಾದರು. ದಿನನಿತ್ಯ ಘಟನೆಗಳಿಗೆ, ಪ್ರಸಂಗಗಳಿಗೆ ಸಿಪಿಕೆ ಸ್ಪಂದಿಸಿದಷ್ಟು, ಯಾರೂ ಸ್ಪಂದಿಸಲಾರರು. ಅಷ್ಟರಮಟ್ಟಿಗೆ ಅವರ ಬರಹಗಳು, ಭಾಷಣಗಳು, ಮುಖ್ಯವಾಗಿ ಚುಟುಕುಗಳು ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತವೆ. ದಿನನಿತ್ಯದ ಬದುಕನ್ನು ವಸ್ತುವನ್ನಾಗಿ ಆಶಯವನ್ನಾಗಿ ಮಾಡಿಕೊಂಡಿರುವುದು ಅವರ ಬರವಣಿಗೆಗಳಿಂದ ತಿಳಿಯುತ್ತದೆ. ಇತ್ತೀಚೆಗೆ ಹೊರಬಂದ

ಅವರ ಸಮಗ್ರ ಕಾವ್ಯದಲ್ಲೂ ಜಾನಪದ ಆವರಣವಿರುವುದನ್ನು ಸಹೃದಯರು ಗಮನಿಸಬಹುದು.

ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಜಾನಪದ ಅಧ್ಯಯನದ ವಿಷಯವಾಗಿ ತಲೆಯೆತ್ತುತ್ತಿದ್ದ ದಿನಗಳಲ್ಲಿ ಶಿಷ್ಟ ಮತ್ತು ಪರಿಶಿಷ್ಟ ಸಾಹಿತ್ಯದಲ್ಲಿ ಪಾಂಡಿತ್ಯಗಳಿಸಿದ್ದ ಸಿ.ಪಿ.ಕೆ. ಅವರು ಭಾರತೀಯ ಕಾವ್ಯಮೀಮಾಂಸೆಯ ಹಿನ್ನೆಲೆಯಲ್ಲಿ ಜನಪದ ಕಾವ್ಯ ಗುಣಗಳ ಬೆಲೆ ಕಟ್ಟುತ್ತಿದ್ದ ರೀತಿ ಜಾನಪದ ವಿಮರ್ಶೆಯೇ ಹೊಸದು. ಗಿರಡ್ಡಿ ಗೋವಿಂದರಾಜರಂಥ ನವ್ಯ ವಿಮರ್ಶಕರು ಜನಪದಕಾವ್ಯವನ್ನು ನವ್ಯ ವಿಮರ್ಶೆಯ ಮಾನದಂಡಗಳಿಂದ ಮೌಲ್ಯಮಾಪನ ಮಾಡುತ್ತಿದ್ದ ಕಾಲದಲ್ಲಿ ಸಿ.ಪಿ.ಕೆ. ಅವರ ಜಾನಪದ ವಿಮರ್ಶೆ ನವ್ಯದವರ ಧೋರಣೆಗಳಿಗೆ ಪ್ರತಿಕ್ರಿಯಾ ರೂಪದಲ್ಲಿ ಗೋಚರವಾಯಿತು. ಜಾನಪದದ ಸಾಹಿತ್ಯಿಕ ಮೌಲ್ಯ ಪ್ರತಿಪಾದನೆಯಲ್ಲಿ ಅಗ್ರಗಣ್ಯಸ್ಥಾನ ಗಿಟ್ಟಿಸಿಕೊಂಡಿದ್ದ ಸಿ.ಪಿ.ಕೆ. ಅವರ ಮುನ್ನುಡಿ, ಬೆನ್ನುಡಿಗಳು, ಅನೇಕರಿಗೆ ಜಾನಪದ ಕ್ಷೇತ್ರದಲ್ಲಿ ಅತ್ಯುತ್ಸಾಹದಿಂದ ಕಾರ್ಯನಿರ್ವಹಿಸುವಂತೆ ಪ್ರೋತ್ಸಾಹ ನೀಡಿದವು. ಜೀಶಂಪ, ಡಿ. ಕೆ. ರಾಜೇಂದ್ರ ಅಂಥ ವಿದ್ವಾಂಸರೂ ಸಿಪಿಕೆಯವರ ಮುನ್ನುಡಿಗಳನ್ನು, ಬೆನ್ನುಡಿಗಳನ್ನು ಬಯಸುವಂತಾಯಿತು. ಸಿಪಿಕೆ ಅವರ ಈ ಬಗೆಯ ವಿಮರ್ಶೆಯೂ ಸಹ ಕನ್ನಡ ಜಾನಪದ ಕ್ಷೇತ್ರ ಕಾರ್ಯದ ಮುಂದುವರಿಕೆಗೆ ಮತ್ತು ಹೊಸ ರೀತಿಯ ಅಧ್ಯಯನಕ್ಕೆ ಹುಮ್ಮಸ್ಸನ್ನು ನೀಡಿತು ಎಂಬುದು ಬಹಳ ಮುಖ್ಯವಾದ ಸಂಗತಿ.

ಸಿ.ಪಿ.ಕೆ. ಜಾನಪದ ಕೃತಿಗಳ ವಿವರ

೧ *ಜಾನಪದ ಪ್ರತಿಭೆ : ತ. ವೆಂ. ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು-೯, ೧೯೬೯, ಬೆಲೆ : ೭.೫೦ ರೂ.*

೨ *ಜಾನಪದ ಸರಸ್ವತಿ : ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೩, ಬೆಲೆ : ೪. ರೂ.*

೩ *ಜನಪದಗೀತೆ : ಸಂವಹನ ೧೨-೧, ಈವ್‌ನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ೧೯೭೫, ಬೆಲೆ ೬.ರೂ.*

೪ *ಜನಪದ ಸಾಹಿತ್ಯ ಪ್ರವೇಶಿಕೆ: ಭಾರತಿ ಪ್ರಕಾಶನ, ಸರಸ್ವತಿಪುರಂ, ಮೈಸೂರು-೯, ೧೯೮೧.*

೫ *ಗಂಧದ ಕೋಟೆ ಗಮಗಮ (ಗದ್ಯಾನುವಾದ): ಜನಪದ ಅಕಾಡೆಮಿ ಕಾರ್ಟು ರಸ್ತೆ, ರಾಜಾಜಿನಗರ, ಬೆಂಗಳೂರು-೧೦, ೧೯೮೨*

೬ *ಚೆಲುವಯ್ಯ ವರನಂದಿ : ಜನಪದ ಅಕಾಡೆಮಿ, ಬೆಂಗಳೂರು-೧೦, ೧೯೮೭*

೭ ಜಾನಪದ ಜಾಗರ: ಚಿತ್ರಭಾನು ಪ್ರಕಾಶನ, ವಿನಾಯಕನಗರ, ಮೈಸೂರು-೧೨, ೧೯೮೭.

೮. ಚುಂಚನಗಿರಿ (ಮೂರನೆಯ ಜಾನಪದ ಸಮ್ಮೇಳನ ನಾಗಮಂಗಲ ನೆನಪಿನ ಸಂಚಿಕೆ) ೧೯೭೧- ಸಹ ಸಂಪಾದಕರು ಜೀಶಂಪ

೯. ಹಬ್ಬಲಿ ಅವರ ರಸಬಳ್ಳಿ : ಮೈಸೂರು ಜಿಲ್ಲಾ ಜನಪದ ಕಲಾ ಮಹೋತ್ಸವ, ಮೈಸೂರು, ಸ್ಮರಣ ಸಂಪುಟ, ೧೯೭೬.

ಗಡಿನಾಡಿನ ಜನಪದ ಕಲೆಗಳು ಮತ್ತು ಸವಾಲುಗಳು

ಡಾ. ಡಿ. ಕೆ. ಚಿತ್ತಯ್ಯಪೂಜಾರ್

ಜನಪದ ಕಲೆ ಎಂದರೇನು ? ಎಂಬ ಪ್ರಶ್ನೆಗೆ ಉತ್ತರ ಹುಡುಕುವುದು ಸುಲಭದ ಮಾತಲ್ಲ. 'ಜನವಾಣಿ ಬೇರು ಕವಿವಾಣಿ ಹೂವು' ಎಂಬ ಮಾತಿನಂತೆ ಓದಲು ಬರೆಯಲು ಬರದೇ ಇರುವ ಗ್ರಾಮೀಣ ಜನ ತಮ್ಮ ಬದುಕಿನ ಶ್ರಮವನ್ನು ಕಳೆದುಕೊಳ್ಳುವುದಕ್ಕಾಗಿ ಸೃಷ್ಟಿಸಿಕೊಂಡ ಕಲಾ ಪ್ರಕಾರಗಳನ್ನೇ ಜನಪದ ಕಲೆಗಳು ಎಂದು ಹೇಳಬಹುದು. ಆದರೆ ನಮ್ಮ ಜನ ಸೃಷ್ಟಿಸಿದ ಸಾಹಿತ್ಯ ಮತ್ತು ಕಲೆಗಳ ಮೌಲ್ಯ ಇಷ್ಟೇ ಎಂದು ಗುರುತಿಸಿದರೆ ಅಥವಾ ಬೆಲೆಕಟ್ಟಿದರೆ ಅವು ತಮ್ಮ ಅರ್ಥವಂತಿಕೆಯನ್ನೇ ಕಳೆದುಕೊಳ್ಳುತ್ತವೆ. ಜನಪದ ಕಲೆಗಳು ವಿವೇಚಿಸಿದಷ್ಟೂ ಆಳ, ಅರ್ಥ ಮಾಡಿದಷ್ಟೂ ವಿಸ್ತಾರ. ಹಾಗೆ ನೋಡಿದರೆ ಅಸಾಧಾರಣ ಪ್ರತಿಭೆಯ ವಿರಾಟದರ್ಶನವೇ ಆಗುತ್ತದೆ. ಅವರ ಒಂದೊಂದು ಕಲೆಗೂ ಒಂದೊಂದು ನುಡಿಗೂ ತಮ್ಮದೇ ಆದ ಹಿನ್ನೆಲೆಯಲ್ಲಿ ಸಮಷ್ಟೀ ಕ್ಷೇಮದ ಚಿಂತನೆ ಇದೆ.

ಒಂದು ಪ್ರದೇಶದ ಸಂಸ್ಕೃತಿಯ ಜೀವನಾಡಿಯನ್ನು ಗುರುತಿಸಬೇಕಾದರೆ ನಾವು ಜನಪದ ಕಲೆಗಳಿಗೇ ಹೋಗಬೇಕು. ಸಂಸ್ಕೃತಿಯ ಮೂಲ ಸೆಲೆ ತನ್ನ ಎಲ್ಲ ವೈವಿಧ್ಯತೆಗಳೊಂದಿಗೆ ಸಹಜವಾಗಿ ಕಾಣಿಸಿಕೊಳ್ಳುವುದೇ ಜನಪದ ಕಲೆಗಳಲ್ಲಿ. ಇಡೀ ಪ್ರದೇಶದ ಸಾಂಸ್ಕೃತಿಕ ನಾಡಿಮಿಡಿತವನ್ನು ಜನಪದ ಕಲೆಗಳಲ್ಲಿ ಗುರುತಿಸಬಹುದು. ಆದರೆ ಒಂದು ಪ್ರದೇಶದ ಕಲೆಗಳ ರೂಪ ವೈಲಕ್ಷಣ್ಯಗಳನ್ನು ರೂಪಿಸುವುದು ಆಯಾ ಜಿಲ್ಲೆಯ ಭೂಗುಣ-ಹವಾಗುಣ, ರಾಜಕೀಯ ಚರಿತ್ರೆ, ಅಲ್ಲಿ ಆಳಿಬಾಳಿದ ಜನವರ್ಗ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಬೇಕು.

ಜನಪದ ಕಲೆಗಳು ಗ್ರಾಮೀಣ ಜನಜೀವನದ ಸೂತ್ರಧಾರಿಗಳಾಗಿ, ಜನರ ಸಂಪತ್ತಾಗಿ, ನಾಡಿನ ಸಂಸ್ಕೃತಿಯ ಪ್ರತೀಕಗಳಾಗಿ, ಪರಂಪರೆಯಲ್ಲಿ ಸಾವಿರಾರು ವರ್ಷಗಳಿಂದ ಬದುಕಿಗೆ ಬೆಳಕಾಗಿ, ನೋವು ನಲಿವುಗಳೆಲ್ಲ ಅಂತರಂಗದ ಅಭಿವ್ಯಕ್ತಿಯಾಗಿ ಬೆಳೆದು ಉಳಿದು ನಮ್ಮ ಅಮೂಲ್ಯ ರತ್ನಗಳಾಗಿವೆ. ಪರಮಾತ್ಮನನ್ನು ಮನದಲ್ಲಿ ನೆನೆದು, ಕಾಯಕದಲ್ಲಿ ತತ್ಪರರಾಗಿ ಹಗಲಿರುಳು ಅನುಭವಿಸಿದ ಸುಖ ದುಃಖಗಳನ್ನು ಜನ ಸಮೂಹದಲ್ಲಿ ಹಾಡಿನ ಮತ್ತು ಕುಣಿತದ ಮೂಲಕ ಹಂಚಿಕೊಂಡು ತಾವೂ ಬದುಕಿ ಇತರರನ್ನೂ ಬದುಕಿಸಿದ್ದಾರೆ. ಸಾಮಾನ್ಯವಾಗಿ ಕರ್ನಾಟಕವೇ ಏಕೆ ಭಾರತದ ಸಂದರ್ಭ

ದಲ್ಲಿಯೂ ಸಹ ಜನಪದ ಕಲೆಗಳಿಲ್ಲದ ಊರು ಇಲ್ಲವೆನ್ನಬಹುದು. ಅದರಲ್ಲಿಯೂ ಕರ್ನಾಟಕದ ಗಡಿ ಭಾಗವಂತೂ ಜನಪದ ಕಲೆಗಳ ತವರೂರೆಂದರೂ ತಪ್ಪಾಗಲಾರದು.

ಜಾನಪದದ ಬಗ್ಗೆ, ಜನಪದ ಕಲೆಗಳ ಬಗ್ಗೆ, ಮಾತನಾಡುವಾಗ ಸಾಮಾನ್ಯವಾಗಿ ಬರುವ ಒಂದು ಅಭಿಪ್ರಾಯವೆಂದರೆ, ನಾಗರಿಕತೆಯ ಪ್ರಭಾವದಿಂದ ಜಾನಪದ ತನ್ನ ಮೊದಲಿನ ಅಸ್ತಿತ್ವ ಕಳೆದುಕೊಳ್ಳುತ್ತಿದೆ ಎಂಬುದು. ಪ್ರತಿಯೊಂದು ಪ್ರದರ್ಶಕ ಕಲೆಯ ಬಗ್ಗೆ ಬರೆಯುವಾಗ ಅಥವಾ ಮಾತನಾಡುವಾಗ, ಆಧುನಿಕತೆ ಎಂಬುದು ಕಲೆಗಳನ್ನು ನಾಶ ಮಾಡುತ್ತದೆ. ಅದಕ್ಕೆ ತಕ್ಕ ಪ್ರೋತ್ಸಾಹ ಕೊಟ್ಟು ಅದನ್ನು ಉಳಿಸಿಕೊಳ್ಳಬೇಕು, ಬೆಳೆಸಬೇಕು ಎಂಬ ಕಳಕಳಿಯನ್ನು ವಿದ್ವಾಂಸರು ವ್ಯಕ್ತಪಡಿಸುತ್ತಾರೆ.

ಆದರೆ ಆಧುನಿಕತೆ ಅಥವಾ ನಾಗರಿಕತೆಗಳು ನಮ್ಮ ಜಾನಪದಕ್ಕೆ ನಿಜವಾಗಿಯೂ ಮಾರಕ ಎಂದು ಹೇಳುವುದಾದರೆ ನಮಗಿಂತಲೂ ನೂರು ಪಟ್ಟು ಆಧುನೀಕರಣ ಹಾಗೂ ತಂತ್ರಜ್ಞಾನಕ್ಕೆ ಹೆಸರಾದ ಜಪಾನ್, ಜರ್ಮನಿ ದೇಶದವರು ನಮ್ಮ ತೊಗಲುಗೊಂಬೆಯಾಟಗಳನ್ನು, ವೀರಗಾಸೆ ಮೇಳಗಳನ್ನು, ಡೊಳ್ಳುಕುಣಿತಗಳನ್ನು ತಮ್ಮ ತಮ್ಮ ದೇಶಗಳಿಗೆ ಕರೆಸಿಕೊಂಡು ಅಪಾರವಾದ ಪ್ರೋತ್ಸಾಹ ಆದರಗಳನ್ನು ಏಕೆ ತೋರಿಸುತ್ತಿದ್ದಾರೆ ? ರಷ್ಯಾದಂತಹ ಮುಂದುವರಿದ ದೇಶದಲ್ಲಿ ಜನಪದ ಕಲೆಗಳನ್ನು ನಾಗರಿಕ ಸಮಾಜದ ಅವಶ್ಯಕತೆಗಳಿಗನುಗುಣವಾಗಿ ಪರಿವರ್ತಿಸಿಕೊಂಡಿದ್ದಾರೆ. ಅಮೆರಿಕಾದಲ್ಲಿ, ಫಿನ್‌ಲೆಂಡಿನಲ್ಲಿ ಜಾನಪದದ ಬಗ್ಗೆ ಅಪಾರ ಆಸಕ್ತಿ, ಮುತುವರ್ಜಿಗಳಿಂದ ಅಧ್ಯಯನಗಳೂ, ಕ್ಷೇತ್ರಕಾರ್ಯಗಳೂ ನಡೆದು ಜನಪದ ಕಲೆಗಳಿಗೆ ವಿಶೇಷವಾದ ಆಸರೆಯನ್ನೀಯುತ್ತಿದ್ದಾರೆ. ಇದೆಲ್ಲವನ್ನೂ ನೋಡಿದರೆ ಆಧುನಿಕತೆ ಜಾನಪದಕ್ಕೆ ಶತ್ರು ಎಂಬುದನ್ನು ಅಲ್ಲಗಳೆಯಬೇಕಾಗುತ್ತದೆ.[೧] ಎನ್ನುವ ರಂಗಾರೆಡ್ಡಿ ಕೋಡಿರಾಂಪುರ ಅವರ ಮಾತುಗಳನ್ನು ಗಮನಿಸಿದಾಗ ನಿಜವಾಗಿಯೂ ಜಾನಪದಕ್ಕೆ ನಾಗರಿಕತೆ, ಯಾಂತ್ರಿಕ ಜಗತ್ತಿನ ಅಬ್ಬರದಲ್ಲಿಯೂ ಚಿಗುರುವ, ಬೆಳೆದು ಹೆಮ್ಮರವಾಗಿ ಮನಸ್ಸಿಗೆ ಮುದ ನೀಡುವ ಶಕ್ತಿ ಇದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.

ಜನಪದ ಕಲೆಗಳು ಸಮೂಹಕ್ಕೆ ಸೇರಿದವು. ಸಮೂಹದಿಂದ ಸಮೂಹಕ್ಕೆ ವರ್ಗಾಯಿಸಲ್ಪಡುವಂಥವು. ಇಂಥ ಸಾಮೂಹಿಕ ಆಶಯದ ಈ ಕಲೆಗಳನ್ನು ವೈಯಕ್ತಿಕ ನೆಲೆಯ ಆಶಯದ ಮಂದಿಗೆ ವರ್ಗಾಯಿಸುವುದು ಸಾಧ್ಯವೇ ಇಲ್ಲ. ಯಾಕೆಂದರೆ ಇಂದು ಸಮೂಹ ಮಾಧ್ಯಮಗಳ ಭರಾಟೆಯಲ್ಲಿ ಸಮೂಹ ಇಲ್ಲವಾಗಿದೆ. ಕಲೆಗಳ ಜೊತೆಗೆ ತಾದಾತ್ಮ್ಯ ಸಂಬಂಧ ಇಲ್ಲವಾಗಿ ಯಾಂತ್ರಿಕ ಸಂಬಂಧ ಉಂಟಾಗಿದೆ. ಇದಕ್ಕಿಂತ ಮುಖ್ಯವಾಗಿ ಬಹಳಷ್ಟು ಕಲೆಗಳು, ಕುಲಕಸುಬುಗಳು. ಅದು ಕಲೆಯಾಗುವುದಕ್ಕಿಂತ ಹೆಚ್ಚಾಗಿ ಜೀವನ ವೃತ್ತಿಯಾಗಿದೆ. ಇಂಥ ವೃತ್ತಿಗಾಯಕ ತಂಡಗಳು, ಕಲಾತಂಡಗಳು

---

೧. ರಂಗಾರೆಡ್ಡಿ ಕೋಡಿರಾಂಪುರ, ಬಂಡಾಯ ಜಾನಪದ. ಪುಟ. ೧

ಇಂದು ಕಣ್ಮರೆಯಾಗುತ್ತಿದ್ದರೆ ಅದಕ್ಕೆ ಕಾರಣಗಳನ್ನು ಬೇರೆ ಬೇರೆ ಹಿನ್ನೆಲೆಗಳಲ್ಲಿ ಕಂಡುಕೊಳ್ಳಬೇಕಾಗುತ್ತದೆ.

ವಿಶೇಷವಾಗಿ ಗಡಿನಾಡಿನ ಜನಪದ ಕಲೆಗಳು ಎಂದಾಗ ಗಡಿನಾಡು ಎನ್ನುವ ಪದವೇ ವಿಶಿಷ್ಟವಾಗಿ ಕಾಣುತ್ತದೆ. ಅದರಲ್ಲಿಯೂ ಕರ್ನಾಟಕದ ಗಡಿಭಾಗ ಎಂದಾಗ ಮಹಾರಾಷ್ಟ್ರ, ಕೇರಳ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳು ನಮ್ಮ ರಾಜ್ಯವನ್ನು ಸುತ್ತುವರಿದಿವೆ. ಆಯಾ ಭಾಗದಲ್ಲಿ ಆ ಎರಡೂ ಪ್ರದೇಶದವರ ಕೊಡುಕೊಳ್ಳುವಿಕೆ, ವ್ಯವಹಾರದ ಸಂಪರ್ಕದ ಮೇಲೆ ಅಲ್ಲಿನ ಸಾಂಸ್ಕೃತಿಕ ಚರಿತ್ರೆ ರೂಪುಗೊಳ್ಳುತ್ತಾ ಬಂದಿದೆ. ಆದರೆ ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ವಿಶೇಷವಾಗಿ ಆಂಧ್ರಪ್ರದೇಶಕ್ಕೆ ಹೊಂದಿಕೊಂಡಿರುವ ಚಿತ್ರದುರ್ಗ, ಚಳ್ಳಕೆರೆ, ಜಗಳೂರು, ಹಿರಿಯೂರು ತಾಲ್ಲೂಕುಗಳು, ತುಮಕೂರು ಜಿಲ್ಲೆಯ ಪಾವಗಡ, ಮಧುಗಿರಿ, ಶಿರಾ ತಾಲ್ಲೂಕುಗಳು ಮತ್ತು ಕೋಲಾರ ಜಿಲ್ಲೆ ಗೌರಿಬಿದನೂರು, ಚಿಂತಾಮಣಿ, ಬಾಗೇಪಲ್ಲಿ, ಗುಡಿಬಂಡೆ, ಶ್ರೀನಿವಾಸಪುರ, ಬಂಗಾರಪೇಟೆ, ಮುಳುಬಾಗಿಲು, ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳು ಮುಂತಾದ ಪ್ರದೇಶಗಳನ್ನು ಗಮನದಲ್ಲಿಟ್ಟುಕೊಂಡು ಕೆಲವು ವಿಚಾರಗಳನ್ನು ಅವಲೋಕಿಸಲು ಪ್ರಯತ್ನಿಸಿದ್ದೇನೆ.

ಆಂಧ್ರಪ್ರದೇಶದ ಅಂಚಿಗೆ ಹೊಂದಿಕೊಂಡಿರುವ ಈ ಪ್ರದೇಶಗಳು ಬೆಟ್ಟಗುಡ್ಡಗಳಿಂದ ಕೂಡಿರುವ ಹೆಚ್ಚು ಕಡಿಮೆ ಒಣಪ್ರದೇಶಗಳು, ಬರಡು ಪ್ರದೇಶಗಳು. ಹೀಗಾಗಿ ಇಲ್ಲಿ ಮಳೆ ಬೀಳುವ ಪ್ರಮಾಣ ಅತ್ಯಲ್ಪ . ಪ್ರಕೃತಿ ಕೃಪೆ ಇಟ್ಟರೆ ವರ್ಷಕ್ಕೆ ಹೆಚ್ಚು ಎಂದರೆ ಒಂದು ಬೆಳೆ ಇಲ್ಲಾ ಸದಾ ಕಾಲು ಚಾಚಿಕೊಂಡಿರುವ ಭೀಕರ ಬರಗಾಲ. ಅಲ್ಲದೆ ಗಡಿಭಾಗದಲ್ಲಿ ಹಿಂದುಳಿದ ಆದಿ ಕರ್ನಾಟಕ, ಆದಿದ್ರಾವಿಡ, ಲಂಬಾಣಿ, ಕುರುಬ, ಮ್ಯಾಸಬೇಡ, ಕಾಡುಗೊಲ್ಲ ಇನ್ನೂ ಅಲ್ಪಸಂಖ್ಯಾತರಾದ ಅನೇಕ ಹಿಂದುಳಿದ ಜಾತಿ ಬುಡಕಟ್ಟುಗಳಿಂದ ತುಂಬಿದೆ. ಇವರೆಲ್ಲರನ್ನೂ ಬಡತನ ಅಪ್ಪಿಕೊಂಡಿರುವುದರಿಂದ ಇವರನ್ನು ಜನಪದ ಕಲೆಗಳು ಅಪ್ಪಿಕೊಂಡಿವೆ. ಆರ್ಥಿಕವಾಗಿ ಅತ್ಯಂತ ದುರ್ಬಲರಾದ ಇವರಿಗೆ ನಾವು ವಿಶಿಷ್ಟ, ಅಪೂರ್ವ ಎಂದು ಗುರುತಿಸುವ ಜನಪದ ಕಲೆಗಳು ಅವರ ಬದುಕಿನ ಎಲ್ಲಾ ಆಯಾಮಗಳಲ್ಲೂ ಹಾಸುಹೊಕ್ಕಾಗಿ ಹೆಣೆದುಕೊಂಡಿವೆ. ಜಾನಪದವನ್ನು ಕಲೆ, ಸಾಹಿತ್ಯವೆಂದು ಬೇರ್ಪಡಿಸುವುದೇ ಕಷ್ಟ. ನಾವು 'ಕಲೆ' ಯೆಂದು ವಿಶಿಷ್ಟತೆಯನ್ನು ಆರೋಪಿಸಿ ಗುರುತಿಸುವ ಪರಿಕರಗಳೆಲ್ಲಾ ಇವರಿಗೆ ಉಸಿರಾಟದಷ್ಟು ಸಹಜವಾದ ಪ್ರತಿಕ್ರಿಯೆಗಳಾಗಿವೆ.

ಈ ಗಡಿಭಾಗವನ್ನು 'ಬಯಲುಸೀಮೆ' ಎಂದೇ ಗುರುತಿಸಲಾಗುತ್ತದೆ. ಈ ಸೀಮೆಗೆ ಹೊಂದಿಕೊಂಡಂತೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಇರುವುದರಿಂದ ತೆಲುಗು-ಕನ್ನಡ ದ್ವಿಭಾಷಾ ಪ್ರದೇಶವಿದಾಗಿದ್ದು, ಈ ದ್ವಿಭಾಷಾ ಪ್ರದೇಶದ ಮೂಲಕ ಕಾಲಿಟ್ಟ ಆಂಧ್ರದ ಜನಪದ ಕಲೆಗಳ ತೆಲುಗು ಸಂಸ್ಕೃತಿಯೂ ಸ್ಥಳೀಯ ಸಂಸ್ಕೃತಿಯೊಂದಿಗೆ

ಸಂಕರಗೊಂಡು ಒಂದು ಬಗೆಯ "ಮಿಶ್ರ ಸಂಸ್ಕೃತಿ"ಯ ಸೃಷ್ಟಿಗೆ ಕಾರಣವಾಗಿದೆ. ಈ ಗಡಿಪ್ರದೇಶದ ಒಂದೊಂದು ಕಲೆಗೂ ವಿಶಿಷ್ಟ ಅಧ್ಯಯನದ ವ್ಯಾಪ್ತಿ ಇರುವುದರಿಂದ ಅವುಗಳನ್ನು ಇಲ್ಲಿ ಹೆಸರಿಸುವುದಷ್ಟೇ ಉತ್ತಮ ಎಂದು ಭಾವಿಸುತ್ತೇನೆ. ಅಲ್ಲದೆ ಅವುಗಳ ವಿಶೇಷ ಅಧ್ಯಯನಕ್ಕೆ ಈ ಭಾಗದಲ್ಲಿ ಯಥೇಚ್ಛವಾದ ಸಾಮಗ್ರಿ ದೊರಕುತ್ತದೆ ಎಂದೂ ಇಲ್ಲೇ ತಿಳಿಸಲಿಚ್ಛಿಸುತ್ತೇನೆ. ಆಸಕ್ತರು ಆ ನಿಟ್ಟಿನಲ್ಲಿ ಪ್ರಯತ್ನಿಸಬಹುದು.

ಕರ್ನಾಟಕದ ಜನಪದ ಕಲೆಗಳನ್ನು ವಿದ್ವಾಂಸರು ವಿವಿಧ ರೀತಿ ವಿಭಜಿಸಿ ಅಧ್ಯಯನ ಮಾಡಿದ್ದಾರೆ. ನಾನು ನನ್ನ ಅಧ್ಯಯನದ ದೃಷ್ಟಿಯಿಂದ ಗಡಿನಾಡಿನ ಜನಪದ ಕಲೆಗಳನ್ನು ಸ್ಥೂಲವಾಗಿ ಪ್ರದರ್ಶನ ಕಲೆಗಳು ಮತ್ತು ದೃಶ್ಯಕಲೆಗಳು ಎಂದು ವಿಂಗಡಿಸಿಕೊಂಡಿದ್ದೇನೆ.

I ಪ್ರದರ್ಶಕ ಕಲೆಗಳು ಎಂದರೆ ಒಬ್ಬ ವ್ಯಕ್ತಿ ಅಥವಾ ಒಂದು ನಿರ್ದಿಷ್ಟ ಗುಂಪು ನಿರ್ದಿಷ್ಟ ಸಮಯದಲ್ಲಿ ಒಂದು ಕಲೆಯನ್ನು ಪ್ರದರ್ಶಿಸಿ ಅಥವಾ ಅಭಿನಯಿಸಿ ತೋರಿಸುವುದಕ್ಕೆ ಪ್ರದರ್ಶಕ ಕಲೆ ಎನ್ನಬಹುದು. ಇದರಲ್ಲಿ ಅನೇಕ ಒಳ ವಿಧಗಳನ್ನು ಗುರುತಿಬಹುದು. ಅವು ಈ ಕೆಳಗಿನಂತಿವೆ.

ಅ ಧಾರ್ಮಿಕ ಜನಪದ ಕಲೆಗಳು ಇಂಡಿಯಾದಲ್ಲಿ ಯಾವುದಕ್ಕೆ ಕೊರತೆಯಿದ್ದರೂ ಧರ್ಮ, ದೇವರುಗಳಿಗೆ ಮಾತ್ರ ಕೊರತೆ ಇಲ್ಲ. ಮುಕ್ಕೋಟಿ ದೇವತೆಗಳನ್ನು ಸೃಷ್ಟಿಸಿದ ದೇಶ ನಮ್ಮದು. ನಮ್ಮಲ್ಲಿ ದೇವರ ಉತ್ಸವ, ಜಾತ್ರೆ ಅಥವಾ ಹಬ್ಬಗಳಲ್ಲಿ ಅನೇಕ ಜನಪದ ಕಲೆಗಳ ಸಂಗಮ ಆಗುವುದೂ ಉಂಟು. ಅವನ್ನು ಇಲ್ಲಿ ಬರಿ ಹೆಸರಿಸುವುದಕ್ಕೆ ಮಾತ್ರ ಪ್ರಯತ್ನಿಸುತ್ತೇನೆ . ಉದಾ : ಕೋಲೆಬಸವ (ಗಂಗೆತ್ತಿನವರು) ಲಂಬಾಣಿಗರ ತಂಬಿಗೆ ಕುಣಿತ, ಲಗೋರಿ ಕುಣಿತ ಅವರ ವಿಶಿಷ್ಟ ಕಲೆ ಇರುವುದನ್ನು ಗಮನಿಸಬಹುದು. ಅಲ್ಲದೆ ಗುರುಭಜನೆ, ಶಿವಭಜನೆ, ರಾಮಭಜನೆ, ಅಯ್ಯಪ್ಪನಭಜನೆ, ಫಂಡರಿ ಭಜನೆ, ಪೋತರಾಜ ಗಾವು ಸಿಗಿಯುವುದು, ಸಿಡಿ ಆಡುವುದು, ಉಟ್ಲಮರ ಮಾರಮ್ಮನ ಕುಣಿತ, ಸೋಮನ ಕುಣಿತ, ಬಾಬಯ್ಯನ ಕುಣಿತ ಮುಂತಾದುವು.

ಆ ವೃತ್ತಿ ಜನಪದ ಕಲೆಗಳು ಇದರಲ್ಲಿ ಚರ್ಮವಾದ್ಯಗಳ ಕಲೆಯೇ ಮುಖ್ಯವಾದದ್ದು. ಅವುಗಳಲ್ಲಿ ಊದುವವಾದ್ಯಗಳು, ತಂತಿವಾದ್ಯಗಳು ಸೇರಿಕೊಳ್ಳುತ್ತವೆ. ಉದಾ : ತಮಟೆ (ತಪ್ಪಡೆ), ಊರುಮೆ (ಅರೆ), ಡೊಳ್ಳುಕುಣಿತ, ಕಹಳೆ, ಗೊರವರು, ನಗಾರಿ, ತಬಲ, ಮುಖವೀಣೆ, ಹೆಳವರು, ತಂಬೂರಿಯವರು, ಬುಡುಬುಡಿಕೆ, ದೊಂಬಿದಾಸರಕುಣಿತ ಮುಂತಾದ ವಿವಿಧ ಕಲೆಗಳ ಪ್ರದರ್ಶನ ಆಕರ್ಷಣೀಯವಾಗಿರುತ್ತದೆ. ಇವನ್ನು ಸಾಮಾನ್ಯವಾಗಿ ಪರಿಶಿಷ್ಟ ಜಾತಿ ಬುಡಕಟ್ಟುಗಳಲ್ಲಿ ಮಾತ್ರ ಕಾಣಬಹುದು. ಒಂದೊಂದು ವಾದ್ಯವೂ ಒಂದೊಂದು ವಿಶಿಷ್ಟ ಸಂದರ್ಭದಲ್ಲಿ ಬಳಕೆಯಾಗುವುದನ್ನು ಕಂಡರೆ ಇವರ ಕಲಾ ಪ್ರಜ್ಞೆಗೆ ಎಂಥವರೂ ತಲೆದೂಗಬೇಕು ಎನಿಸುತ್ತದೆ.

ಇ ಮನರಂಜನಾ ಜನಪದ ಕಲೆಗಳು ವಿಶೇಷ ಸಂದರ್ಭದಲ್ಲಿ ಜನಪದರು

ಜಾತಿ ಮತ್ತು ಧರ್ಮಗಳನ್ನು ಮರೆತು ಮನರಂಜನೆಯ ಆಸ್ವಾದದಲ್ಲಿ ತೊಡಗುತ್ತಾರೆ. ಅಂದರೆ ಅವರ ನೋವುಗಳನ್ನು ಮರೆತು ಇಂಥ ಕಲೆಗಳಲ್ಲಿ ತನ್ಮಯರಾಗಿರುತ್ತಾರೆ. ಅಂದರೆ ಕೀಲುಕುದುರೆ, ಮರಗಾಲು ಕುಣಿತ, ಯಕ್ಷಗಾನ-ಬಯಲಾಟ, ಪಟದ ಕುಣಿತ, ವೀರಗಾಸೆ, ಸೂತ್ರದಗೊಂಬೆಯಾಟ, ತೊಗಲುಗೊಂಬೆಯಾಟ, ಹುಲಿವೇಷ, ಪಾಳೆಗಾರರ ವೇಷ, ಕರಡಿ ಮಜಲು, ಮೋಡಿ ಮುಂತಾದ ಆಟಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಮುಂದುವರೆದು ಹೇಳುವುದಾದರೆ ಕೋಲಾಟ ಮುಖ್ಯವಾಗಿ ಮನರಂಜನೆಯನ್ನು ಒದಗಿಸುವ ಸಾಮೂಹಿಕ ಕಲೆ. ಹಬ್ಬ ಹರಿದಿನ ಮತ್ತು ವಿಶೇಷ ಸಂದರ್ಭಗಳಲ್ಲಿ ಕೋಲಾಟವನ್ನು ಕಾಣುತ್ತೇವೆ. ಬೇಸಿಗೆ ಕಾಲದಲ್ಲಿ, ಬೆಳದಿಂಗಳ ರಾತ್ರಿಗಳಲ್ಲಿ ಕೂಡ ಗೆಜ್ಜೆಯ ಕಾಲಿನ ಸದ್ದಿನೊಡನೆ ತಾಳ ತಮ್ಮಡಿಗಳ ಗತ್ತಿಗೆ ಅನುಗುಣವಾಗಿ ಕೋಲಾಟದ ಕುಣಿತ ಮತ್ತು ಹಾಡುಗಳನ್ನು ಅನೇಕ ಹಳ್ಳಿಗಳು ಈಗಲೂ ಉಳಿಸಿಕೊಂಡಿವೆ. ಹತ್ತಾರು ಬಗೆಯ ವೈವಿಧ್ಯಗಳನ್ನು ಕೋಲಾಟದಲ್ಲಿ ಕಾಣುತ್ತೇವೆ. ಉಯ್ಯಾಲೆ ಕೋಲು, ಬಾಗ್ಗೋಲು, ಹರಿಗೋಲು, ತೇರುಗೋಲು, ಜೋಡ್ಗೋಲು, ಜಡೆಕೋಲು, ದಂಡೆಕೋಲು, ಸುತ್ಕೋಲು, ನಿಲ್ಕೋಲು, ಕೊರವಂಜಿಕೋಲು ಮುಂತಾದ ವಿಧಾನಗಳುಂಟು. ಒಂದೊಂದಕ್ಕೂ ಒಂದೊಂದು ವಿಧಾನ, ಪದಗಳು, ಲಯ, ಧಾಟಿ ಬದಲಾಗುತ್ತವೆ. ಅದರ ಮಹತ್ವ ಕುರಿತು ತಾವೇ ಹಾಡಿದ್ದಾರೆ.

ಉದಾ : ತಾಳಬೇಕು ತಕ್ಕ ಮದ್ದೆ ಬೇಕು
ಕೈಲಿ ಕೋಲುಬೇಕು ಕಾಲಿಗೆ ಗೆಜ್ಜೆ ಬೇಕು
ಕುಂಟ ಕುಣಿಯಬೇಕು ಕುರುಡ ನೋಡಬೇಕು
ಮೂಗರ್ಹಾಡಬೇಕು ಆಗದವರ್ ಕೇಳಬೇಕು

ಅಷ್ಟೇ ಅಲ್ಲದೆ ಅನೇಕ ನೃತ್ಯಪ್ರಧಾನ ಜನಪದ ಕಲೆಗಳನ್ನೂ ಸಹ ನಾವು ಕಾಣಬಹುದು.

II ದೃಶ್ಯಕಲೆಗಳು ನೋಡುವ ಮತ್ತು ಕೇಳುವ ಎರಡೂ ರೀತಿಯ ಮನರಂಜನೆಯನ್ನು ಪ್ರದರ್ಶಕ ಕಲೆಗಳ ಕೊಟ್ಟರೆ ದೃಶ್ಯಕಲೆಗಳು ನೋಡುವ ಕ್ರಿಯೆಗೆ ಮಾತ್ರ ಒಳಪಟ್ಟವುಗಳು. ಇವು ಮಾನವನ ಉಗಮದಷ್ಟೇ ಇತಿಹಾಸವನ್ನು ಒಳಗೊಂಡಿವೆ. ಅಲೆಮಾರಿಯಾಗಿದ್ದ ಮಾನವ ಮಾತು ಅಥವಾ ಭಾಷೆ ಬಳಸುವುದಕ್ಕಿಂತ ಮುಂಚೆ ದೃಶ್ಯಗಳನ್ನು ಬಳಸುವುದು ಕಲಿತ. ಆ ಮೂಲಕ ದಿನ ನಿತ್ಯದ ಚಟುವಟಿಕೆ ಬೇಟೆ, ಮಾರ್ಗ ಎಲ್ಲವನ್ನು ದೃಶ್ಯಗಳ ಮೂಲಕ ದಾಖಲಿಸಿದ. ಅದು ಇಂದು ವಿಶಿಷ್ಟ ಕಲೆಯ ಪ್ರಕಾರವಾಗಿ ಮುಂದಿದೆ. ತಮ್ಮ ಭಾವನೆಗಳನ್ನು ಈ ದೃಶ್ಯ ಚಿತ್ರಣಗಳ ಮೂಲಕ ಕಟ್ಟಿಕೊಡಲು ಪ್ರಯತ್ನಿಸಿದ. ಇದರಲ್ಲಿ ಧಾರ್ಮಿಕ ದೃಶ್ಯಕಲೆಗಳು, ವೃತ್ತಿ ದೃಶ್ಯಕಲೆಗಳು ಮುಂತಾಗಿ ಗುರುತಿಸಬಹುದು.

ಒಟ್ಟಾರೆ ಹೇಳುವುದಾದರೆ ಈಗಾಗಲೇ ನಮ್ಮ ಕಣ್ಣ ಮುಂದಿರುವ ಪುರಾತನ ಗುಹೆ, ದೇವಾಲಯದ ಒಳಗೋಡೆ ಚಾವಣಿ ಮುಂತಾದ ಕಡೆ ಇರುವ ಭಿತ್ತಿ ಚಿತ್ರಗಳು ಅದರ ಇತಿಹಾಸ ಮತ್ತು ಪ್ರಾಮುಖ್ಯತೆಯನ್ನು ತಿಳಿಸಿವೆ. ಅದು ಮುಂದುವರೆದು ಗೋಡೆ ಬರಹ, ಮದುವೆ ಮುಂತಾದ ಸಂದರ್ಭದಲ್ಲಿ ಬರೆಯುವ 'ಹಸೆ', ಹಚ್ಚೆ ರಂಗೋಲಿ, ಮಡಿಕೆ ಮೇಲೆ ಕಮ್ಮಾರನು ಬಿಡಿಸುವ ಚಿತ್ರ, ಮರಗೆಲಸದ ಬಡಗಿ ಬಿಡಿಸುವ ಚಿತ್ರ ಇವೆಲ್ಲವನ್ನೂ ದೃಶ್ಯ ಕಲೆಗಳೆಂದೇ ಕರೆಯಲಾಗುವುದು. ಆ ನಿಟ್ಟಿನಲ್ಲಿ ಅದೊಂದು ವಿಶೇಷ ಅಧ್ಯಯನವೇ ಆಗುತ್ತದೆ.

ಹೀಗೆ ಗಡಿನಾಡಿನ ಜನಪದ ಕಲೆಗಳು ಕರ್ನಾಟಕದ ಸಾಂಸ್ಕೃತಿಕ ಸಂದರ್ಭದಲ್ಲಿ ತನ್ನದೇ ಆದ ಕೊಡುಗೆಗಳನ್ನು ನೀಡಿವೆ. ಈ ದೇಶದ ಜನ ಸಂಸ್ಕೃತಿಯ ಪ್ರತೀಕಗಳಾಗಿ ಅಲ್ಲಿನ ಜನಜೀವನದ ನಾಡಿಗಳಾಗಿ ಇಂದಿಗೂ ಮಿಡಿಯುತ್ತಿವೆ. ಹಾಗೆ ನೋಡಿದರೆ ಇಂಥ ಕಲೆಗಳನ್ನು ಉಳಿಸಿ ಬೆಳಸಿಕೊಂಡು ಬರುತ್ತಿರುವ ಜನವರ್ಗ ಅದನ್ನು ಒಂದು ವೃತ್ತಿಯನ್ನಾಗಿಸಿಕೊಂಡು ಜೀವನ ನಿರ್ವಹಣೆಗಾಗಿ ಹಿಡಿದ ಮಾರ್ಗವಾದರೂ ಆ ಮಾರ್ಗದಲ್ಲಿ ಆ ಕಲೆ ಅವರ ಜೊತೆ ಜೀವಂತವಾಗಿ ಬಂದಿರುವುದರಿಂದ ಅವನ್ನು ಉಳಿಸುವ ಕೆಲಸ ಸಕಾಲದಲ್ಲಿ ನಡೆಯಬೇಕಾಗಿದೆ. ಕಲೆ ಮತ್ತು ಅದನ್ನು ವೃತ್ತಿಯಾಗಿ ಸಿಕೊಂಡ ಅವನ ಇಬ್ಬರ ಉಳಿವಿನಿಂದ ಅದು ಉಳಿಯಲು ಸಾಧ್ಯ. ಯಾವುದೊಂದು ತೊಂದರೆಯಾದರೂ ಎರಡೂ ಇಲ್ಲದಂತಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಇಲ್ಲಿ ಮುಖ್ಯವಾಗಿ ಮತ್ತೊಂದು ವಿಷಯವನ್ನು ನಿಮ್ಮ ಮುಂದಿಡಲು ಬಯಸುತ್ತೇನೆ. ಗಡೀಭಾಗ ಅದರಲ್ಲೂ ತುಮಕೂರಿನ ಶಿರಾ ತಾಲ್ಲೂಕು, ಚಿತ್ರದುರ್ಗದ ಹಿರಿಯೂರು, ಚಳ್ಳಕೆರೆಯಲ್ಲಿ ಮಾತ್ರ ಕಂಡು ಬರುವ ಎರಡು ವಿಶಿಷ್ಟ ಕಲೆಗಳನ್ನು ಇಲ್ಲಿ ನೆನೆಯಬಹುದು. ಅಂದರೆ ಊದೋಗಣೆ ಮತ್ತು ಥಗಮು ಎನ್ನುವ ವಾದ್ಯ. ಇವು ಮೇಲೆ ತಿಳಿಸಿದ ಪರಿಸರದಲ್ಲಿ ಮಾತ್ರ ಕಾಣಲು ಲಭ್ಯ. ಇನ್ನಾವುದೇ ಗಡೀಭಾಗದಲ್ಲಿ ಇಲ್ಲ.

೧ ಊದೋಗಣೆ ಕಾಡುಗೊಲ್ಲ ಬುಡಕಟ್ಟು ಬಳಸುವ ಒಂದು ವಿಶಿಷ್ಟ ವಾದ್ಯ ಈ ಗಣೆ. ಇದನ್ನು ಊದುವುದರ ಮೂಲಕ ನುಡಿಸುವುದರಿಂದ 'ಊದೋಗಣೆ' ಎನ್ನುತ್ತಾರೆ. ಮೂರು ನಾಲ್ಕು ಗೆಣ್ಣುಗಳಿಂದ ಕೂಡಿದ ಬಿದಿರುಕೋಲಿನಲ್ಲಿ ಇದನ್ನು ತಯಾರಿಸುತ್ತಾರೆ. ಈ 'ಗಣೆ'ಯನ್ನು ಪುಟ್ಟ ಕೊಳಲಿನ ವಿಸ್ತೃತ ರೂಪ ಎನ್ನಬಹುದು. ಇದನ್ನು 'ಪಿಳ್ಳಂಗೋವಿ' ಎಂದೂ ಕರೆಯುತ್ತಾರೆ. 'ಪಿಳ್ಳ' ಎಂದರೆ 'ಚಿಕ್ಕ', 'ಗೋವಿ' ಎಂದರೆ 'ಕೋವಿ'. ಈ ಗಣೆಯನ್ನು ಪ್ರಧಾನವಾಗಿ ಕಥನಗಣೆ, ಹೇಳಿಕೆಗಣೆ, ಹೊತ್ತಾಡೋಗಣೆ ಎಂದು ವಿಂಗಡಿಸಬಹುದು.

ಗಣೆಗೂ ಕಾಡುಗೊಲ್ಲರ ಗೋಪಾಲಕರ ಸಂಸ್ಕೃತಿಗೂ ತನ್ನದೇ ಆದ ಸಾಂಸ್ಕೃತಿಕ ಮಹತ್ವವಿದೆ. ಇದನ್ನು ಅವರ ಸಂಪ್ರದಾಯಗಳಲ್ಲಿ ಗುರುತಿಸಬಹುದು. ಚಿತ್ರದುರ್ಗ,

ತುಮಕೂರು ಜಿಲ್ಲೆಗಳಲ್ಲಿ ದಟ್ಟವಾಗಿ ಹರಡಿರುವ ಇವರು ತಮ್ಮ ಸಾಂಸ್ಕೃತಿಕ ವೀರರಾದ ಎತ್ತಪ್ಪ, ಜುಂಜಪ್ಪನ ಕಥೆ ಹೇಳುವಾಗ ಇದನ್ನು ಬಳಸುವುದುಂಟು. ಇವನ್ನು ಗಣೆ ಕಾವ್ಯಗಳೆಂದೇ ಕರೆಯುವುದುಂಟು. ದೇವರು ಮೈಮೇಲೆ ಬಂದಾಗಲೂ ಬಳಸಿ ಹೇಳಿಕೆ ನೀಡುತ್ತಾರೆ. ಇದು ವಿಶೇಷವಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಅತಿ ಹೆಚ್ಚು ಬಳಕೆಯಲ್ಲಿದೆ. 'ಗಣೆ' ಪಶುಪಾಲಕ ಬೇಸರದ ಸಂದರ್ಭದಲ್ಲಿ ನುಡಿಸಲು, ರಕ್ಷಣೆ ಮುಂತಾದುವುಗಳಿಗೆ ಮೊದಲು ಉಪಯೋಗಿಸುತ್ತಿದ್ದರು.

ದಕ್ಷಿಣ ಕರ್ನಾಟಕದಲ್ಲಿ ಮಾದಯ್ಯನ ಕಥೆ ಹಾಡಲು ಕಂಸಾಳೆ ಹುಟ್ಟಿಕೊಂಡಂತೆ, ಮಂಟೆಸ್ವಾಮಿ ಕತೆ ಹಾಡಲು ತಂಬೂರಿಯ ನೀಲಗಾರರು ಹುಟ್ಟಿಕೊಂಡಂತೆ, ಉತ್ತರ ಕರ್ನಾಟಕದ ಎಲ್ಲಮ್ಮನ ಕಥೆ ಹಾಡಲು ಚೌಡಿಕೆಯವರು ಹುಟ್ಟಿಕೊಂಡಂತೆ, ಮೈಲಾರ ಲಿಂಗನ ಕಥೆ ಹಾಡಲು ಡೊಳ್ಳು ಮತ್ತು ಗೊರವಯ್ಯಗಳು ಹುಟ್ಟಿಕೊಂಡಂತೆ 'ಮಧ್ಯ ಕರ್ನಾಟಕದಲ್ಲಿ ಎತ್ತಪ್ಪ, ಜುಂಜಪ್ಪ, ಚಿತ್ರದೇವರು ಮುಂತಾಗಿ ಕಾಡುಗೊಲ್ಲರ ವೀರ ಪುರುಷರ ಕತೆ ಹಾಡಲು 'ಗಣೆ'ಎಂಬ ವಿಶಿಷ್ಟವಾದ್ಯದ ಹಿನ್ನೆಲೆಯಲ್ಲಿ ನುಡಿಸುವ ಕಥನ ಪರಂಪರೆ ಹುಟ್ಟಿಕೊಂಡಿದೆ.

ಢಗಮು ಇದು ಒಂದು ರೋಚಕ ಜನಪದ ವಾದ್ಯ. ಜನಪದ ವಾದ್ಯ ತಯಾರಿಕೆ ಚರಿತ್ರೆಯಲ್ಲಿ ಢಗಮು ವಾದ್ಯಕ್ಕೆ ವಿಶಿಷ್ಟ ಸ್ಥಾನವಿದೆ. ಇದು ಎಲ್ಲ ರೀತಿಯಿಂದಲೂ 'ನಗಾರಿ'ಯನ್ನು ಹೋಲುವುದು. ಇದರ ತಯಾರಿಕೆಯ ಹಿಂದೆ ಅಡಗಿರುವ ಕತೆ ಮೈನವಿರೇಳಿಸುತ್ತದೆ. ಜೀವಂತವಾಗಿರುವ ಕೊಂಬು, ಕಿವಿ, ಬಾಲ ಕತ್ತರಿಸದೆ 'ಮುಕ್ಕು' ಆಗದಿರುವ ಗೊಡ್ಡು ಹಸು ಅಥವಾ ಸೂಲು ಒಡೆಯದ ಹಸುವನ್ನು ಕತ್ತು ಕತ್ತರಿಸದೆ ಚರ್ಮ ಸುಲಿದು ವಿಶಿಷ್ಟ ರೀತಿಯಿಂದ 'ಹದ'ಮಾಡಿ ಬಳಸುತ್ತಾರೆ ಹಾಗೂ ಹುಲಿ ಮುಂತಾದ ಮೃಗಗಳ ಆಕ್ರಮಣದಿಂದ ಸತ್ತ ಹಸುವಿನ ಚರ್ಮವನ್ನು ಬಳಸುವುದುಂಟು. ಆ ಚರ್ಮವನ್ನು ಹಾಲಿನಲ್ಲಿ ನೆನಸಿ ಪವಿತ್ರಗೊಳಿಸಿ ತದನಂತರ ಅದನ್ನು ಬಳಸುವ ಪರಿಪಾಠವೂ ಉಂಟು.

ಈ ವಾದ್ಯವನ್ನು ಕಾಡುಗೊಲ್ಲರು ಮತ್ತು ಮ್ಯಾಸಬೇಡರು ತಮ್ಮ ದೇವರುಗಳಾದ ಎತ್ತಪ್ಪ, ಜುಂಜಪ್ಪ, ಕಾಟಂಲಿಂಗ, ಚಿತ್ರಲಿಂಗ ಮುಂತಾದ ದೇವರುಗಳ ಉತ್ಸವಗಳಲ್ಲಿ, ಹಬ್ಬ, ಜಾತ್ರೆಗಳಲ್ಲಿ ಬಳಸುತ್ತಾರೆ. ಬಾರಿಸಿದಾಗ ಢಗ್, ಢಗ್ ಎನ್ನುವುದರಿಂದ ಅದರ ಅನುರಣನ ಶಬ್ದವೇ 'ಢಗಮು' ಆಗಿದೆ. ಈ ವಾದ್ಯವನ್ನು ಸಿಕ್ಕ ಸಿಕ್ಕವರೆಲ್ಲಾ ಬಳಸುವಂತಿಲ್ಲ. ದೇವರುಗಳಿಗೆ ಹಕ್ಕುದಾರರಾದ ಅಣ್ಣ ತಮ್ಮಂದಿರು ಬಾರಿಸಬೇಕು. ಇದನ್ನು ಬಾರಿಸಲು ಚರ್ಮದಿಂದಲೇ ತಯಾರಿಸಿದ ವಸ್ತುವಿನಿಂದ 'ಮಡಿ'ಯಾಗಿ ಬಡಿದು ಬಾರಿಸಬೇಕು.

ಇಂಥ ರೋಚಕ ಕತೆಗಳ ಹಿನ್ನೆಲೆಯನ್ನೊಳಗೊಂಡ ಇನ್ನೂ ನಿಗೂಢವಾದ ವಿಚಾರಗಳು ಅನೇಕ ಇರಬಹುದು. ಒಟ್ಟಾರೆ ಜನಪದ ಕಲೆಗಳು ಮಾನವನ ಬದುಕಿನ

ಕಥೆಯನ್ನೇ ನಿರೂಪಿಸಿದರೂ ಅದರ ಉದ್ದೇಶ ಇತಿಹಾಸಕ್ಕಿಂತ ಭಿನ್ನವಾದದ್ದು. ಮಾನವ ತನ್ನ ಬದುಕಿನಲ್ಲಿ ಕಂಡು, ಕೇಳಿದ, ಅನುಭವಿಸಿದ, ಕಲ್ಪಿಸಿಕೊಂಡ ಅನೇಕ ವಿಚಾರಗಳನ್ನು ಇನ್ನೊಬ್ಬರ ಮನಮುಟ್ಟುವಂತೆ ಜನಪದ ಕಲೆಗಳು ತಿಳಿಸುತ್ತವೆ. ಅದು ಹೊರಗಿನ ಕಥಾನಕವೂ, ಕಲ್ಪನೆಯ ಕಗ್ಗವೂ ಆಗಿರಬಹುದು. ಒಟ್ಟಾರೆ ಅನುಭವ ಸಾಮರಸ್ಯವನ್ನು ಸಹೃದಯರಿಗೆ ರಂಜಕ ಶೈಲಿಯಲ್ಲಿ ಒಪ್ಪಿಸುವುದೇ ಇಲ್ಲಿ ಮುಖ್ಯವಾಗುತ್ತದೆ.

ಕೆಲವು ಸವಾಲುಗಳು

ಜನಪದ ಕಲೆಗಳ ಸಂಬಂಧವಾದ ಮಾಹಿತಿ ಸಂಗ್ರಹಕಾರ್ಯ ಕರ್ನಾಟಕದ ಗಡಿ ಭಾಗವಾದ ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಯ ಕೆಲವು ಗಡಿ ತಾಲ್ಲೂಕುಗಳ ಮಟ್ಟಿಗೆ ಹೇಳುವುದಾದರೆ ಇಲ್ಲಿಯ ಜನಪದ ಕಲೆಗಳ ಸಂಗ್ರಹಕ್ಕೆ ಹೊರಟವರಿಗೆ ಮೊದಲು ಕಾಡುವ ಸಮಸ್ಯೆ ಎಂದರೆ 'ಭಾಷೆ'. ಇಲ್ಲಿ ಕ್ಷೇತ್ರ ಕಾರ್ಯ ಮಾಡಲು ಹೊರಟವರಿಗೆ ಕನ್ನಡ, ತೆಲುಗು, ಲಂಬಾಣಿ ಭಾಷೆ, ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ ತಮಿಳು ಭಾಷೆಗಳ ಪರಿಜ್ಞಾನ ಸಂಪೂರ್ಣ ಇರಬೇಕು. ಎಲ್ಲ ಜನರ ಆಡುನುಡಿಯ ನಿಕಟ ಪರಿಚಯವಿರಬೇಕು. ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಸಂಸ್ಕೃತಿ ನಡವಳಿಕೆಗಳ ಪೂರ್ಣ ಪರಿಚಯ ಇರಬೇಕು. ಸಮಸ್ಯೆ ಎಂದರೆ ಇಲ್ಲಿನ ಜನಪದ ಕಲಾವಿದರನೇಕರಿಗೆ ಕನ್ನಡ ಬಂದರೆ ತೆಲುಗು ಗೊತ್ತಿಲ್ಲ. ತೆಲುಗು ಬಂದರೆ ಕನ್ನಡ ಗೊತ್ತಿಲ್ಲ. ಕೆಲವರಿಗಂತೂ ಇವೆರಡರ ವ್ಯತ್ಯಾಸವೇ ಗೊತ್ತಿಲ್ಲ. ಇಂಥ ದ್ವಿಭಾಷಾ ಪ್ರದೇಶ ಈ ಗಡಿಭಾಗ. ಆದ್ದರಿಂದ ಇಲ್ಲಿ ಕ್ಷೇತ್ರಕಾರ್ಯ ಮಾಡುವವರಿಗೆ ಬಹು ಭಾಷೆಗಳಲ್ಲಿ ಪರಿಣತಿ ಇರಬೇಕಾದದ್ದು ಅವಶ್ಯಕ.

ಎರಡನೆಯದಾಗಿ ಅಪರಿಚಿತರನ್ನು ಕಂಡಾಗ ಜನಪದ ಕಲಾವಿದರು ಅದರಲ್ಲಿಯೂ ಹೆಣ್ಣುಮಕ್ಕಳು ಲಜ್ಜಾಭಯಗಳಿಂದ ಹಿಂಜರಿಯುವುದು, ನೇರ ಹೇಳಿಕೆಗಳಿಗೆ ಸಂಕೋಚಪಟ್ಟುಕೊಳ್ಳುವುದು, ವೈಭವೀಕರಿಸಿ ಹೇಳುವುದು, ಕೆಲವರು ಮೌನತಾಳುವುದು, ಕಾಣಿಕೆ ಸಂಭಾವನೆಗಳಿಗೆ ಆಸೆಪಡುವುದು, ಪ್ರದರ್ಶನ ಕಲೆ ನೋಡಬೇಕಾದರೆ ಸಂಭಾವನೆ ಹೆಚ್ಚು ಕೊಡಬೇಕು ಎನ್ನುವುದು ಇತ್ಯಾದಿ.

ಮೂರನೇ ಸಮಸ್ಯೆ ಎಂದರೆ ಜಾತಿ ಮತ್ತು ವರ್ಗಕ್ಕೆ ಸಂಬಂಧಿಸಿದ್ದು ಮೇಲು ಜಾತಿಯ ವ್ಯಕ್ತಿಯೊಬ್ಬ ಕ್ಷೇತ್ರಕಾರ್ಯಕ್ಕೆ ಹೋದರೆ ಕೆಲವು ಕಲಾವಿದರು ಕೀಳರಿಮೆಯಿಂದ ಹಿಂದೆ ಸರಿಯುವುದು. ಕೆಳಜಾತಿಯವನು ಹೋದಾಗ ಮಾಹಿತಿ ನೀಡದೆ ಇರುವುದು ಕಂಡು ಬರುತ್ತದೆ. ಜನಪದ ಕಲೆಗಳಾದರೋ ಉಚ್ಚವರ್ಗಕ್ಕಿಂತ ಕೆಳವರ್ಗದ ಜಾತಿಗಳಲ್ಲಿಯೇ ಅಪಾರವಾಗಿರುವುದುಂಟು. ಈ ಕಲೆಗಳು ಜೀವಂತವಿರುವುದು ಈ ಅಶಿಕ್ಷಿತ ಕೆಳವರ್ಗದವರ ಮಡಿಲಿನಲ್ಲಿಯೇ ಎಂಬುದರಲ್ಲಿ ಎರಡು ಮಾತಿಲ್ಲ. ಶ್ರೀಮಂತರ ಮನರಂಜನೆಗೆ ಅನೇಕ ಸವಲತ್ತುಗಳಿದ್ದರೆ ಬಡವರಿಗೆ ಜನಪದ ಕಲೆಗಳೇ

ಸಾಧನಗಳಾಗಿವೆ. ಇತ್ತಿತ್ತಲಾಗಿ ಶ್ರೀಮಂತ ವರ್ಗಕ್ಕೆ ಜನಪದ ಕಲೆಗಳ ಅಗತ್ಯವೇ ಬೀಳುತ್ತಿಲ್ಲ. ಆದ್ದರಿಂದ ಪ್ರೀತಿಪೂರ್ವಕ ಉತ್ತೇಜನವಿಲ್ಲದೆ ಗ್ರಾಮ ಕಲೆಗಳು ಬಾಡಿ ಹೋಗುತ್ತಿವೆ.

ಈ ನಿಟ್ಟಿನಲ್ಲಿ ಹಿಂದೆ ನಡೆದ ಕೆಲಸವನ್ನು ಗಮನಿಸಿದರೆ ಈ ಮೂರು ಜಿಲ್ಲೆಗಳಲ್ಲಿ ಅನೇಕ ಶಿಷ್ಟ ಸಾಹಿತಿಗಳು, ವಿದ್ವಾಂಸರು ಇದ್ದರೂ ಯಾರೂ ನೇರವಾಗಿ ಸಂಗ್ರಹ ಕಾರ್ಯಕ್ಕೆ ಕೈ ಹಾಕಲಿಲ್ಲ. ಕೆಲವು ಜಾನಪದ ವಿದ್ವಾಂಸರು ಈ ಮಣ್ಣಿನವರೇ ಆದ್ದರಿಂದ ಅಲ್ಲಲ್ಲಿ ತಮ್ಮ ಬಿಡಿ ಬರಹಗಳ ಮುಖಾಂತರ, ಲೇಖನಗಳ ಮುಖಾಂತರ ಕೆಲವು ಕಲೆಗಳನ್ನು ದಾಖಲಿಸಿದ್ದಾರೆ. ಅಂಥವರಲ್ಲಿ ರಂಗಾರೆಡ್ಡಿ ಕೋಡಿರಾಂಪುರ, ಜಿ. ಆರ್. ತಿಪ್ಪೇಸ್ವಾಮಿ, ಲಕ್ಷ್ಮೀಪತಿ ಕೋಲಾರ, ಚಿಕ್ಕಣ್ಣಯಣ್ಣೆಕಟ್ಟೆ, ಮೀರಾಸಾಬಿ ಹಳ್ಳಿ ಶಿವಣ್ಣ, ನೋ.ಸಂ. ತಿಮ್ಮೇಗೌಡ, ಮ. ಲ. ನರಸಿಂಹಮೂರ್ತಿ, ಹ. ಬ. ಮಹ ದೇವಪ್ಪ ಇನ್ನೂ ಮುಂತಾದವರನ್ನು ಇಲ್ಲಿ ಗಮನಿಬಹುದಾದರೂ ಈ ಗಡಿನಾಡಿನ ಸಮಷ್ಟಿ ಜನಪದ ಕಲೆಗಳ ಅಧ್ಯಯನ ನಡೆದಿಲ್ಲವೆಂದೇ ಹೇಳಬೇಕು. ಇಲ್ಲಿರುವ ಅಖಂಡವಾದ, ಅಪರೂಪವಾದ ಜನಪದ ಕಲೆಗಳು, ಸಂಪ್ರದಾಯಗಳು, ನಂಬಿಕೆ, ಸಾಹಿತ್ಯಗಳ ಸಂಗ್ರಹಣಾ ಕಾರ್ಯ ಅತ್ಯವಶ್ಯಕವಾದುದಾಗಿದೆ.

ಬಯಲು ಸೀಮೆಯ ಯಾವುದೇ ಪ್ರದೇಶ, ಜನಪದ ಕಲೆ ಹಾಗೂ ಸಾಹಿತ್ಯಕ್ಕೆ ಗಣಿ ಇದ್ದಂತೆ ಇರುವುದು ನಿಜವಾದರೂ ಆ ಎಲ್ಲ ಕಲೆಗಳು ಇನ್ನೂ ಬೆಳಕಿಗೆ ಬರಬೇಕಾಗಿದೆ. ಈಗ ನಡೆದಿರುವ ಕೆಲಸ ಏನೇನೂ ಸಾಲದು. ಇಲ್ಲಿರುವ ಜನಪದ ಕಲೆ, ಸಾಹಿತ್ಯದ ಹಿನ್ನೆಲೆಯಲ್ಲಿ ತೆಲುಗು, ಕನ್ನಡ ಭಾಷಾ ಸಂಸ್ಕೃತಿಗಳ ತೌಲನಿಕ ಅಧ್ಯಯನದ ಅಗತ್ಯ ಇದೆ. ಇದನ್ನು ಅಧ್ಯಯನ ಮಾಡುವ ವಿದ್ವಾಂಸರು ಇಲ್ಲಿಯ ಸಮಸ್ಯೆಗಳನ್ನು ಸವಾಲು ಎಂಬಂತೆ ಸ್ವೀಕರಿಸಿ ಮುಂದೆ ಬರಬೇಕಾಗಿದೆ. ಅಂಥವರಿಗಾಗಿ ಇಲ್ಲಿರುವ ಜನಪದ ಕಲೆಗಳ ಕನ್ನೆನೆಲ ಕಾದು ಕುಳಿತಿದೆ.

ತೀವ್ರಗತಿಯಲ್ಲಿ ಬದಲಾಗುತ್ತಿರುವ ನಮ್ಮ ಸಾಮಾಜಿಕ ಸಾಂಸ್ಕೃತಿಕ ಜೀವನದ ಸಂದರ್ಭದಲ್ಲಿ ಜನಪದ ಕಲೆಗಳಿಗೆ ವಿಶೇಷ ಒತ್ತನ್ನು ಕೊಡುವ ಹಿನ್ನೆಲೆಯಲ್ಲಿ ಕೆಲವು ಅಭಿಪ್ರಾಯಗಳು :

೧ ಪ್ರತೀ ವರ್ಷ ಜನಪದ ಕಲಾಮೇಳ ಏರ್ಪಡಿಸುವುದು

೨ ಜನಪದ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸುವುದು. ಸಾಧ್ಯವಾದರೆ ಗೌರವ ಧನ ನೀಡುವುದು.

೩ ಎಚ್. ಎಲ್. ನಾಗೇಗೌಡರ ಜಾನಪದ ಲೋಕದಂತೆ ಈ ಭಾಗದಲ್ಲಿಯೂ ಒಂದು ಕಲಾಗ್ರಾಮವನ್ನು ನಿರ್ಮಾಣ ಮಾಡಿ ನಶಿಸುತ್ತಿರುವ ಕಲೆಗೆ ನೀರೆರೆಯುವುದು.

೪ ಈ ಭಾಗದ ಜನಪದ ಸಾಹಿತ್ಯ, ಕಲೆಗಳ ಸಂಪೂರ್ಣ ಕ್ಷೇತ್ರಕಾರ್ಯ ಜರೂರಾಗಿ ನಡೆಸಿ ಒಂದು ಕಡೆ ಕಟ್ಟಿಕೊಡುವ ಕೆಲಸವನ್ನು ಅಕಾಡೆಮಿ ಮತ್ತು ಪರಿಷತ್ತುಗಳು ಮಾಡಬೇಕಾಗಿದೆ.

ಸಹಾಯಕ ಗ್ರಂಥಗಳು

೧ ಜನಪದ ಸಾಹಿತ್ಯ : ಡಾ. ಕಾಳೇಗೌಡ ನಾಗವಾರ, ಯುಗಾದಿ ಪ್ರಕಾಶನ, ಬೆಂಗಳೂರು, ೧೯೯೬

೨ ಡಾ. ರಂಗಾರೆಡ್ಡಿ ಕೋಡಿರಾಂಪುರ : ಬಂಡಾಯ ಜಾನಪದ, ೧೯೯೫, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೩ ಡಾ. ಜಿ. ಆರ್. ತಿಪ್ಪೇಸ್ವಾಮಿ : ಮೂಡಲ ವೈಭವ, ೧೯೯೮, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೪ ಡಾ. ಮೀರಾಸಾಬಿಹಳ್ಳಿ ಶಿವಣ್ಣ : ದುರುಗ ಜಾನಪದ, ೧೯೯೯, ಶಕ್ತಿ ಪ್ರಕಾಶನ, ಬೆಂಗಳೂರು

: ಗೊಲ್ಲ ಕಡಗ, ೧೯೯೯, ಸಿ. ವಿ. ಜಿ. ಪಬ್ಲಿಕೇಷನ್, ಬೆಂಗಳೂರು

: ಗಣೆಯ ದನಿ, ೧೯೯೯, ಸಿ. ವಿ. ಜಿ. ಪಬ್ಲಿಕೇಷನ್, ಬೆಂಗಳೂರು.

ಬಾದಾಮಿ ಚಾಲುಕ್ಯರ ಲಯಣಗಳಲ್ಲಿನ ಕೆಲವು ಶಿಲ್ಪಗಳು ಅನಂತರದಲ್ಲಿ ಕೆತ್ತಿದವೆ?-ಒಂದು ವಿಶ್ಲೇಷಣೆ[೧]

ಆರ್. ಎಚ್. ಕುಲಕರ್ಣಿ

ಹಿನ್ನೆಲೆ

ವಾತಾಪಿ (ಬಾದಾಮಿ)ಚಾಲುಕ್ಯರ ಇತಿಹಾಸ, ವಾಸ್ತುಕಲೆ, ಶಿಲ್ಪಕಲೆ ಶಾಸನಗಳನ್ನು ಕುರಿತಂತೆ ಸಾಕಷ್ಟು ಸಂಶೋಧನೆಗಳು, ಅಧ್ಯಯನಗಳು ಕಳೆದ ಶತಮಾನದ ಪ್ರಾರಂಭದಿಂದಲೇ ಪ್ರಾರಂಭವಾಗಿ-ಇತ್ತೀಚಿನವರೆಗೂ ನಡೆದಿವೆ ಮತ್ತು ನಡೆಯುತ್ತಿವೆ. ಚಾಲುಕ್ಯರು ಐತಿಹಾಸಿಕವಾಗಿ ಬನವಾಸಿಯ ಆದಿ ಕದಂಬರನ್ನು ಕ್ರಿ. ಶ. ೬ನೆಯ ಶತಮಾನದ ೪-೫ನೆಯ ದಶಕದಲ್ಲಿ ಸೋಲಿಸಿ ವಾತಾಪಿಪುರದಲ್ಲಿ ರಾಜ್ಯಸ್ಥಾಪನೆ ಮಾಡಿದ ಮೇಲೆ, ಶಿಲ್ಪಕಲೆ ಮತ್ತು ವಾಸ್ತುಕಲೆಗೆ ಈ ಭಾಗದಲ್ಲಿ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಚಾಲುಕ್ಯರು ವಾತಾಪಿಯಲ್ಲಿ ರಾಜ್ಯ ಸ್ಥಾಪನೆ ಮಾಡಿದ ಮತ್ತು ಅಲ್ಲಿ ಉತ್ತರದಲ್ಲಿರುವ ಕಲ್ಬೆಟ್ಟದ ಮೇಲೆ ಕೋಟೆಯನ್ನು ನಿರ್ಮಿಸಿದ ವಿಷಯ ಚಾಲುಕ್ಯರ ಪ್ರಪ್ರಥಮ ದೊರೆ ವಲ್ಲಭೇಶ್ವರ[೨] ಪುಲಕೇಶಿಯ ಕಲ್ಬಂಡೆಯ ಶಾಸನದಿಂದ ತಿಳಿದುಬರುತ್ತವೆ (ಶಕವರ್ಷ ೪೬೫-ಕ್ರಿ. ಶ. ೫೪೩).

ಪುಲಿಕೇಶಿಯ ಅನಂತರ ಆಳಿದ ಅವನ ಮಕ್ಕಳಾದ ಮೊದಲನೆಯ ಕೀರ್ತಿವರ್ಮ ಮತ್ತು ಮಂಗಳೇಶರು ರಾಜ್ಯಭಾರ ನಡೆಸಿ ಚಾಲುಕ್ಯ ಮನೆತನಕ್ಕೆ ಗಟ್ಟಿ ಅಡಿಪಾಯ ಹಾಕಿದರು. ಇವರ ಕಾಲ ಕ್ರಿ. ಶ. ೫೬೬ ರಿಂದ ಕ್ರಿ. ಶ. ೬೦೯-೧೦ರವರೆಗೆ ಎಂದು ಅವರ ಶಾಸನಗಳ ಆಧಾರದಿಂದ ನಿರ್ಧರಿಸಲಾಗಿದೆ. ಇವರುಗಳ ಕಾಲದಲ್ಲಿಯೇ ಬಾದಾಮಿಯಲ್ಲಿನ ಸುಪ್ರಸಿದ್ಧವಾದ ಗುಹಾಂತರ್ದೇವಾಲಯುಗಳು ಮತ್ತು ದೇವಾಲಯಗಳು ಹಾಗೂ ಐಹೊಳೆಯಲ್ಲಿನ ಕೆಲವು ದೇವಾಲಯಗಳು ನಿರ್ಮಾಣವಾದವು. ಮಂಗಳೇಶನ ನೇತೃತ್ವದಲ್ಲಿಯೇ ಬಾದಾಮಿಯ ೩ನೆಯ ಗುಹೆ, ಶಕವರ್ಷ ೫೦೦=ಕ್ರಿ. ಶ. ೫೭೮ರ[೩] ಕಾರ್ತಿಕ ಪೌರ್ಣಿಮೆಯಂದು "ಶ್ರೀ ಮಹಾವಿಷ್ಣು"ವಿಗಾಗಿ ನಿರ್ಮಿಸಿದ ಕಲ್ಮನೆ (ಗುಹಾಂತರ್ದೇವಾಲಯ) ಮತ್ತು ಅದರಲ್ಲಿ ಶ್ರೀಮಹಾವಿಷ್ಣುವಿನ ಪ್ರತಿಮೆಯನ್ನು ಪ್ರತಿಷ್ಠಾಪಿಸಿದ ವಿವರಗಳು, ಇದೇ ಗುಹೆಯಲ್ಲಿ ನೃವರಾಹ ಶಿಲ್ಪದ

ಪಕ್ಕದ ಕಂಬದ ಮೇಲಿರುವ 'ಪರಮಭಾಗವತ' 'ರಣವಿಕ್ರಾಂತ' ಮಂಗಳೇಶನ ಶಾಸನದಿಂದ ಸ್ಪಷ್ಟವಾಗುತ್ತದೆ. ಅಂದರೆ ಕ್ರಿ. ಶ. ೫೭೮ ರಷ್ಟೊತ್ತಿಗಾಗಲೇ ಈ ಗುಹಾಂತರ್ದೇವಾಲಯದಲ್ಲಿನ ಎಲ್ಲಾ ರೀತಿಯ ಕೆತ್ತನೆಯ ಕೆಲಸಗಳು, ಇಲ್ಲಿನ ಮುಖ್ಯ ಶಿಲ್ಪಗಳು ; ಕ್ರಮವಾಗಿ ವಿರಾಟವಿಷ್ಣು, ಅನಂತವಿಷ್ಣು, ನೃವರಾಹ, ಹರಿಹರ, ಕೇವಲ ನರಸಿಂಹ ಮತ್ತು ತ್ರಿವಿಕ್ರಮ ವಿಷ್ಣುವಿನ ಶಿಲ್ಪಗಳು ಹಾಗೂ ಕಂಬಗಳ ಬೋದಿಗೆಯ ಮೇಲಿನ ವಿವಿಧ ಶಿಲ್ಪಗಳೂ ಮತ್ತು ಕಂಬಗಳ ಮೇಲಿನ ಸ್ಥರಗಳಲ್ಲಿರುವ ಭಾಗವತ ಮತ್ತು ಸಮುದ್ರಮಥನದ ಕಥಾನಕ ಶಿಲ್ಪಗಳು (narrative panels) ಕೂಡಾ ಸಂಪೂರ್ಣವಾಗಿ ಕೆತ್ತಲ್ಪಟ್ಟಿರುವುದು ಮತ್ತು ಒಳಮಾಳಿಗೆಯ ಅಲಂಕರಣಗಳು ಹಾಗೂ ಬಣ್ಣದ ಕೆಲಸಗಳು ಪೂರ್ಣಗೊಂಡಿದ್ದನ್ನು ಸಾಂಕೇತಿಕವಾಗಿ ಕ್ರಿ. ಶ. ೫೭೮ ರ ಇಸವಿ ನಿರ್ದೇಶಿಸುತ್ತದೆ.

ಚಾಲುಕ್ಯರ ಕಾಲದ ಒಟ್ಟು ನಾಲ್ಕು ಗುಹೆಗಳು ಕ್ರಮವಾಗಿ ; ಮೊದಲನೆಯದು ಶೈವ ಧರ್ಮಕ್ಕೆ ಸೇರಿದ್ದು, ಎರಡನೆಯದು ವೈಷ್ಣವ, ಮೂರನೆಯದು ಮತ್ತು ಅತ್ಯಂತ ಭವ್ಯವಾದದ್ದು-ವೈಷ್ಣವ ಗುಹೆ, ಇನ್ನು ನಾಲ್ಕನೆಯದು ಜೈನಧರ್ಮಕ್ಕೆ ಸೇರಿದವುಗಳು ಆಗಿವೆ. ಎಲ್ಲಾ ಗುಹೆಗಳು ಕ್ರಿ. ಶ. ೫೬೬ ರಿಂದ ಕ್ರಿ. ಶ. ೬೦೯-೧೦ರ ಅವಧಿಯಲ್ಲೇ ನಿರ್ಮಿಸಲ್ಪಟ್ಟಿವೆ.

ಕ್ರಿ. ಶ. ೬೦೯-೧೦ ರಿಂದ ಕ್ರಿ. ಶ. ೬೪೪ ರವರೆಗೆ ಇಮ್ಮಡಿ ಪುಲಿಕೇಶಿ ರಾಜ್ಯಭಾರ ಮಾಡಿದ್ದು.... ಕ್ರಿ. ಶ. ೬೪೪ ರಲ್ಲಿ ಪಲ್ಲವ ನರಸಿಂಹವರ್ಮನೊಡನೆ ನಡೆದ ಯುದ್ಧದಲ್ಲಿ ವೀರಸ್ವರ್ಗ (?) ಸೇರಿದ ವಿವರಗಳು ನರಸಿಂಹವರ್ಮನ ಬಾದಾಮಿ ಶಾಸನದಲ್ಲಿ ದೊರೆಯುತ್ತವೆ. ಇದು ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ ಚಾಲುಕ್ಯರ ಕಲೆ, ವಾಸ್ತು ಶಿಲ್ಪ ಹಾಗೂ ರಾಜಕೀಯ, ಸಾಂಸ್ಕೃತಿಕ ಅಭಿವೃದ್ಧಿಗಳು ಇಮ್ಮಡಿಗೊಂಡು ಅವನಿಗೆ 'ದಕ್ಷಿಣ ಪಥೇಶ್ವರ' ಎಂಬ ಬಿರುದು ಬರಲು ಕಾರಣವಾಯಿತು. ಇವನ ಕಾಲದಲ್ಲಿಯೇ ಬಾದಾಮಿಯ ಮಾಲೆಗಿತ್ತಿ ಶಿವಾಲಯ, ಐಹೊಳೆಯ ಮೇಗುತಿ ಜಿನಾಲಯಗಳು ಹಾಗೂ ಇನ್ನಿತರ ದೇವಾಲಯಗಳು ನಿರ್ಮಾಣಗೊಂಡವು.

ಕ್ರಿ. ಶ. ೬೪೪ ರಿಂದ ಕ್ರಿ. ಶ. ೬೫೭ರವರೆಗೆ ಚಾಲುಕ್ಯ ಸಾಮ್ರಾಜ್ಯ ಪಲ್ಲವರ ಅಧೀನದಲ್ಲಿತ್ತು. ಕ್ರಿ. ಶ. ೬೫೭ ರಲ್ಲಿ ಇಮ್ಮಡಿ ಪುಲಿಕೇಶಿಯ ಮಗ ಮೊದಲನೆಯ ವಿಕ್ರಮಾದಿತ್ಯನು ಪಲ್ಲವರನ್ನು ವಾತಾಪಿಯಿಂದ ಹೊರಗಟ್ಟಿ ಮತ್ತೆ ಚಾಲುಕ್ಯರ ರಾಜ್ಯವನ್ನು ಪುನಃ ಸ್ಥಾಪನೆ ಮಾಡಿದ. ಅನಂತರ ಚಾಲುಕ್ಯರು ಕ್ರಿ. ಶ. ೭೫೭ರ ವರೆಗೆ ಆಳ್ವಿಕೆಯಲ್ಲಿದ್ದು ರಾಷ್ಟ್ರಕೂಟರ ದೊರೆ ದಂತಿದುರ್ಗ ಚಾಲುಕ್ಯ ಸಾಮ್ರಾಜ್ಯದ ಮೇಲೆ ತನ್ನ ಅಧಿಕಾರ ಸ್ಥಾಪಿಸಿದ.

ಬಾದಾಮಿಯಲ್ಲಿ ಕಲಾಚಟುವಟಿಕೆಗಳು ಚಾಲುಕ್ಯರು, ಅಲ್ಲಿ ರಾಜ್ಯ ಸ್ಥಾಪನೆ ಮಾಡಿದಾಗಿನಿಂದಲೂ ಪ್ರಾರಂಭವಾಗಿರಬಹುದೆಂದು ತೋರುತ್ತದೆ. ಪ್ರಾರಂಭದ

ದೇವಾಲಯಗಳು ಕೀರ್ತಿವರ್ಮ-ಮಂಗಳೇಶರ ಕಾಲದ ದೊಡ್ಡ ಇಮಾರತಿಗಳಂತೆ ಇರದಿದ್ದರೂ-ಸಣ್ಣ ಪ್ರಮಾಣದಲ್ಲಿ ದೇವಾಲಯಗಳು, ಶಿಲ್ಪಗಳು ನಿರ್ಮಾಣಗೊಂಡಿರ ಬಹುದು. ಆದರೆ ಚಾಲುಕ್ಯರ ಕಾಲದ ಕಲೆಗೆ ಒಂದು ಹೊಸ ತಿರುವು ಹಾಗೂ ವೈಭವ ಯುತವಾದ ಮೆರುಗು ಬಂದದ್ದು ಮಂಗಳೇಶನ ಕಾಲದಲ್ಲಿ.

ಬಾದಾಮಿ ಕೀರ್ತಿವರ್ಮ-ಮಂಗಳೇಶರ ಆಳ್ವಿಕೆಯ ಕಾಲದಲ್ಲಿ ಅತ್ಯಂತ ಪ್ರಮುಖ ಕಲಾಚಟುವಟಿಕೆಗಳ ಕೇಂದ್ರವಾಗಿ ರೂಪುಗೊಂಡಿತು. ದಕ್ಷಿಣದಲ್ಲಿ ಅತ್ಯಂತ ಪ್ರಾಚೀನ ಗುಹಾಂತರ್ದೇವಾಲಯಗಳ ನಿರ್ಮಾಣ ಪ್ರಾರಂಭಗೊಂಡದ್ದು ಬಾದಾಮಿಯಲ್ಲಿಯೇ. ಚಾಲುಕ್ಯರು ಶೈವ, ವೈಷ್ಣವ ಎರಡೂ ಧರ್ಮಕ್ಕೂ ಸಮಾನವಾದ ಪೋಷಣೆ ನೀಡಿದರು. ಅಂತೆಯೇ ಜೈನಧರ್ಮಕ್ಕೂ ಸಹ.

ಶಿಲ್ಪಗಳ ಚರ್ಚೆ ೧೯೬೦ ರ ದಶಕದಲ್ಲಿ ಚಾಲುಕ್ಯರ ಗುಹಾಂತರ್ದೇವಾಲಯ ಗಳ ಶಿಲ್ಪಗಳನ್ನು ಮತ್ತು ದೇವಾಲಯಗಳ ಶಿಲ್ಪಗಳನ್ನು ಕುರಿತು ಅಧ್ಯಯನ ನಡೆಸಿದ ಕೆಲವು ಸಂಶೋಧಕರು, ಬಾದಾಮಿ ಮೂರನೆಯ ವೈಷ್ಣವ ಮತ್ತು ಮೊದಲ ನೆಯ ಶೈವ ಗುಹೆಯಲ್ಲಿನ ಕೆಲವು ಶಿಲ್ಪಗಳು ನಂತರದಲ್ಲಿ, ಅಂದರೆ ಪಲ್ಲವರು ಬಾದಾಮಿಯನ್ನು ಆಕ್ರಮಿಸಿದ ಮೇಲೆ, ಅವರ ಶಿಲ್ಪ ಪ್ರಭಾವದಿಂದ ಕೆತ್ತಿದವು ಎಂಬ ವಾದವನ್ನು ಮಂಡಿಸಿದರು. ಅವರುಗಳಲ್ಲಿ ಮುಖ್ಯವಾಗಿ ಆಶಿನ್‌ಲಿಪ್ಪೆ[೪] ಮತ್ತು ಕೆ. ವಿ. ಸೌಂದರರಾಜನ್[೫] ಇವರು ವೈಷ್ಣವ ಗುಹೆಯಲ್ಲಿನ ವಿರಾಟವಿಷ್ಣು, ತ್ರಿವಿಕ್ರಮ, ಹರಿಹರ ಮತ್ತು ನರಸಿಂಹ ಶಿಲ್ಪಗಳನ್ನು ದೇವಾಲಯದ ಪ್ರತಿಷ್ಠಾಪನೆಯ ನಂತರ (ಕ್ರಿ.ಶ. ೫೭೮) ದಲ್ಲಿ, ಬಹುಶಃ ಪಲ್ಲವರು ಬಾದಾಮಿಯನ್ನು ಅಧೀನಕ್ಕೆ ತೆಗೆದುಕೊಂಡ ಸಂದರ್ಭದಲ್ಲಿ ಕೆತ್ತಿರ ಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಶಿಲ್ಪಗಳ ಕಿರೀಟಗಳ ಹಿಂಬದಿಯಲ್ಲಿರುವ ಶಿರಶ್ಚಕ್ರ, ಗಾಲಿಯ ಹಾಗೆ ಹಲ್ಲುಗಳನ್ನು ಹೊಂದಿದ್ದು ಈ ತರಹದ ಕೆತ್ತನೆ ಪಲ್ಲವರ ಶಿಲ್ಪಗಳಲ್ಲಿ ಕಂಡುಬರುವುದನ್ನು ಗಮನಿಸಿ, ಆ ಶಿಲ್ಪಗಳ ಮತ್ತು ಪ್ರಸ್ತುತ ಶಿಲ್ಪಗಳ ಸಾಮ್ಯತೆಯನ್ನು ಸಮೀಕರಿಸಿ ಈ ಅಭಿಪ್ರಾಯಕ್ಕೆ ಬಂದಿದ್ದಾರೆ. ಅಲ್ಲದೆ, ವೈಷ್ಣವ ಗುಹೆಯಲ್ಲಿನ ಹರಿಹರ, ವಿರಾಟವಿಷ್ಣು, ನರಸಿಂಹ ಮತ್ತು ತ್ರಿವಿಕ್ರಮ ಶಿಲ್ಪಗಳು ನೇರವಾಗಿ ನೆಲದ ಮೇಲೆ ನಿಂತಂತೆ ಕೆತ್ತಲ್ಪಟ್ಟಿವೆ. ಉಳಿದ ಶಿಲ್ಪಗಳು, ಅನಂ ತವಿಷ್ಣು ಮತ್ತು ನೃವರಾಹ ಶಿಲ್ಪಗಳ ಅಡಿಯಲ್ಲಿ 'ಗಣಗಳ ಸಾಲು' ಕೆತ್ತನೆ ಇದೆ. ಇದೇ ರೀತಿಯ ಕೆತ್ತನೆ ೨ನೆಯ ಗುಹೆ ಮತ್ತು ೧ನೆಯ ಗುಹೆಯ ಶಿಲ್ಪಗಳಲ್ಲಿಯೂ ಕಂಡುಬರುತ್ತವೆ. ಈ ವಿಭಿನ್ನತೆಯೂ ಆ ವಿದ್ವಾಂಸರಿಗೆ ಸಂಶಯಾಸ್ಪದವಾಗಿ ಕಂಡಿರ ಬೇಕು. ಬಾದಾಮಿಯ ೧ನೆಯ ಮತ್ತು ೩ನೆಯ ಗುಹೆಗಳು ತಲವಿನ್ಯಾಸದಲ್ಲಿ 'L' ಆಕಾರದಲ್ಲಿದ್ದು ಪಶ್ಚಿಮದಲ್ಲಿ 'L' ನ ತಳರೇಖೆಯು ಬರುತ್ತದೆ. ಈ ತಳರೇಖೆಯೇ ಗುಹಾಂತರ್ದೇವಾಲಯದ ಹೊರ ಚಾಚಿರುವ ಗೋಡೆ ಅಥವಾ ಭಾಗ. ಈ ಗೋಡೆಯ ಮೇಲೆ ಮೊದಲನೆಯ ಗುಹೆಯಲ್ಲಿ ಹದಿನೆಂಟು ಕೈಗಳನ್ನು ಹೊಂದಿ ನರ್ತನ ಭಂಗಿ

ಯಲ್ಲಿರುವ ನಟರಾಜ ಇದ್ದರೆ, ತ್ರಿವಿಕ್ರಮ, ಬಲಿಚಕ್ರವರ್ತಿ ನೀಡಿದ ಭೂಮಿಯನ್ನು ತನ್ನ ಎಡಗಾಲಿನ ಹೆಜ್ಜೆಯನ್ನು ಮೇಲಕ್ಕೆತ್ತಿ ಅಳೆಯುವ ದೃಶ್ಯ ೩ನೆಯ ಗುಹೆಯಲ್ಲಿದೆ.

ಮೂರನೆಯ ಗುಹೆಯಯಲ್ಲಿನ ನರಸಿಂಹ ಮತ್ತು ಹರಿಹರ ಶಿಲ್ಪಗಳು ಕೆತ್ತನೆಯಲ್ಲಿ, ಅನಂತವಿಷ್ಣು ಮತ್ತು ನೃವರಾಹ ಶಿಲ್ಪಗಳಂತೆ ಮೇಲ್ಮೆಯಲ್ಲಿ ಸಮಾನತೆ ಹೊಂದಿಲ್ಲ. ಅಲ್ಲದೆ ಶಿಲ್ಪಗಳ ಕೆತ್ತನೆಯಲ್ಲಿ ಕಂಡು ಬರುವ ಕೆಲವು ಕೆತ್ತನೆಗಳ (ಉಳಿಗಳ) ಗುರುತುಗಳು, ಕೆಲವೊಮ್ಮೆ ನಂತರದಲ್ಲಿ ಕೆತ್ತಿದವು ಎಂಬ ಸಂಶಯಕ್ಕೆ ಎಡೆಮಾಡಿಕೊಡುವ ಸಾಧ್ಯತೆ ಇದೆ. ಆದರೆ, ಇವು ನಂತರದಲ್ಲಿ ಕೆತ್ತಿದವಲ್ಲವೆಂದು ಶಿಲ್ಪಗಳ ಶೈಲಿಯನ್ನು ಸೂಕ್ಷ್ಮವಾಗಿ ಅವಲೋಕಿಸಿ ಮತ್ತು ಅವುಗಳ ಸಂಯೋಜನೆಯನ್ನು ಗಮನಿಸಿ ದೃಢೀಕರಿಸಬಹುದು. ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ಒಂದು ವೇಳೆ- ಈ ಶಿಲ್ಪಗಳು ಗುಹಾಂತರ್ದೇವಾಲಯದ ಮೂಲಕಲ್ಪನೆಯಲ್ಲಿ ಇಲ್ಲದಿದ್ದಲ್ಲಿ, ಆ ಸ್ಥಳಗಳನ್ನು ಹಾಗೆಯೇ ಬಿಡಲು, ಈ ಗುಹೆಯ 'ಮುಖ್ಯ ಸ್ಥಪತಿ' ಯೋಚಿಸಿದ್ದಿರಬಹುದೆ? ಹಾಗೆ ಒಂದು ವೇಳೆ ಮಾಡಿದ್ದರೆ – ಈ ಸ್ಥಳಗಳಲ್ಲಿ ಭಿತ್ತಿಚಿತ್ರಗಳನ್ನು[೬] ರಚಿಸಲು ಅನುವು ಮಾಡುವಂತಹ ವಿಚಾರವಿದ್ದಿರಬಹುದು. ಆದರೆ ಹಾಗೆ ಮಾಡದೆ ನೇರವಾಗಿ ನೆಲದ ಮೇಲೆ ನಿಂತಂತೆ ಶಿಲ್ಪಗಳ ರಚನೆ ಆಗಿವೆ. ಇವುಗಳಲ್ಲಿನ ಉಳಿದೆಲ್ಲಾ ಆಕೃತಿಗಳನ್ನು ಮುಖ್ಯ ಶಿಲ್ಪಕ್ಕೆ ಪೂರಕವಾಗಿ ಸಂಯೋಜಿಸಲಾಗಿದೆ. ಅಲ್ಲದೆ ಶಿಲ್ಪಗಳ ತಲೆಯ ಹಿಂಭಾಗದ ಚಕ್ರದಲ್ಲಿ 'ಹಲ್ಲು' ಗಳು (Spoked Halo) ಪಲ್ಲವರ ಶಿಲ್ಪಗಳಲ್ಲಿ ಮಾತ್ರ ಕಂಡುಬರುತ್ತದೆ. ಅವರ ಪ್ರಭಾವವೇ ಈ ಶಿಲ್ಪಗಳಲ್ಲಿ ಮೈಗೂಡಿ ಕೊಂಡಿದೆ ಎಂಬ ವಾದ[೭], ಇವುಗಳು ನಂತರದಲ್ಲಿ ಕೆತ್ತಿರಬಹುದೆಂಬ ಚರ್ಚೆಗೆ ಒತ್ತು ನೀಡಿದವು. ಆದರೆ ಚಾಲುಕ್ಯ ಶಿಲ್ಪ ಪರಂಪರೆಯಲ್ಲಿ, ಆ ಹೊತ್ತಿಗಾಗಲೇ (ಕ್ರಿ. ಶ. ೫೭೮) ಅತ್ಯಂತ ಪರಿಪೂರ್ಣವಾದ ಮತ್ತು ಉನ್ನತಿ ಹೊಂದಿದ ಪ್ರೌಢ ಶೈಲಿಯು ಚಾಲನೆಯಲ್ಲಿತ್ತು. ಗುಹಾಂತರ್ದೇವಾಲಯಗಳಲ್ಲಿನ ಶಿಲ್ಪಗಳನ್ನು ಕೆತ್ತಿದ ಶಿಲ್ಪಿ ಕೆತ್ತನೆಯಲ್ಲಿ ಅಸಾಮಾನ್ಯವಾದ ತಾಂತ್ರಿಕ ಪರಿಣಿತಿಯನ್ನು, ನೈಜತೆಯನ್ನು ಮತ್ತು ತನ್ನ ಕೆಲಸದಲ್ಲಿ ಹಿಡಿತವನ್ನು ಹೊಂದಿದವನು ಆಗಿದ್ದುದರಲ್ಲಿ ಸಂಶಯವಿಲ್ಲ. ಆದಿ ಕದಂಬರ ಕಾಲದ ಶಿಲ್ಪಗಳಲ್ಲಿ ಕಂಡುಬರುವ ಆಕಾರ-ರೂಪುಗಳನ್ನು ಮತ್ತು ಹಲವಾರು ಬಿಡಿ ಅಂಶಗಳನ್ನು ಮೈಗೂಡಿಸಿಕೊಂಡು ಪ್ರಸ್ತುತ ಶಿಲ್ಪಗಳಲ್ಲಿ ಅವನ್ನು ಪ್ರತಿಬಿಂಬಿಸಿದ್ದಾನೆ[೮].

ಇನ್ನು, ವಿರಾಟವಿಷ್ಣು ಶಿಲ್ಪದ ಕಿರೀಟದ ಮೇಲೆ ಕೊಂಚ ಅಸಹಜ ಎನಿಸುವ ರೀತಿಯಲ್ಲಿ ಕೆತ್ತಿದ ನರಸಿಂಹನ ಶಿಲ್ಪ ಇದೇ ವಾದದ ಮತ್ತೊಂದು ಉದಾಹರಣೆ, ಆಕೃತಿಯಲ್ಲಿ ನರಸಿಂಹ ಶಿಲ್ಪ ಕಿರೀಟದಿಂದ ಮೇಲೆ ಉದ್ಭವಿಸಿದಂತೆ ಕಾಣುತ್ತದೆ. ನರಸಿಂಹ ತನ್ನ ಎರಡೂ ಕೈಗಳನ್ನು ಕಿರೀಟದ ಮೇಲೆ ಹಿಡಿದಿದ್ದಾನೆ. ಇಲ್ಲಿ ನರಸಿಂಹ ಚತುರ್ಭುಜ ಹೊಂದಿದ್ದಾನೆ, ಚಕ್ರ-ಶಂಖಗಳನ್ನು ಎರಡೂ ಕೈಗಳಲ್ಲಿ ಹಿಡಿದಿದ್ದಾನೆ. ನರಸಿಂಹ ಶಿಲ್ಪದ ಈ ಅಸಹಜ ಕೆತ್ತನೆ ವಿದ್ವಾಂಸರೀರ್ವರಿಗೂ ನಂತರದ ಕಾಲದ್ದು ಎಂಬ ಊಹೆಗೆ

ಬಂದಂತಾಗಿದೆ. ಅಲ್ಲದೆ ಚಾಲುಕ್ಯರ ಹಠಾತ್ ಪತನಕ್ಕೆ ಕಾರಣನಾದ ಪಲ್ಲವರ ದೊರೆ ನರಸಿಂಹವರ್ಮ (ಮಾಮಲ್ಲವರ್ಮ) ತನ್ನ ವಿಜಯದ ಕುರುಹಾಗಿ ವಿಷ್ಣುವಿನ ತಲೆಯ ಮೇಲೆ ನರಸಿಂಹನನ್ನು ಕೆತ್ತಿಸಿದ್ದಿರಬಹುದೆಂದು ಸಂಶಯಪಡಲಾಗಿದೆ. ಆದರೆ ವಾಸ್ತವದಲ್ಲಿ ಹಾಗೆ ಮಾಡಲು ಸಾಧ್ಯವಿಲ್ಲವೆಂದು ತೋರುತ್ತದೆ. ನರಸಿಂಹವರ್ಮನು ಬಾದಾಮಿಯನ್ನು ಆಕ್ರಮಿಸಿದ ಸಂದರ್ಭದಲ್ಲಿ ಕೆತ್ತಿಸಿದ ಶಾಸನ ಉತ್ತರ ಗುಡ್ಡದ ಕಲ್ಬಂಡೆಯ ಮೇಲಿದೆ. ಅವನಿಗೆ ತನ್ನ ಶಾಸನವೊಂದನ್ನು ಕೆತ್ತಲು, ಮೂರನೆಯ ಗುಹೆಯ ಎಲ್ಲಾ ಕಂಬಗಳ ಸ್ಥಳ ಖಾಲಿ ಇದ್ದವು. ಅವನು ಹಾಗೆ ಮಾಡದೆ ಮತ್ತು ಇಲ್ಲಿನ ಶಿಲ್ಪಗಳಿಗೆ ಏನೊಂದು ತೊಂದರೆ ಮಾಡದೆ, ತನ್ನ ವಿಜಯ ಶಾಸನವನ್ನು ಉತ್ತರದ ಗುಡ್ಡದ ಮೇಲೆ ಕೆತ್ತಿಸಿದ. ಅಷ್ಟೊತ್ತಿಗಾಗಲೇ ಸಂಪೂರ್ಣಗೊಂಡ ಬಾದಾಮಿಯ ಗುಹಾಂತರ್ದೇವಾಲಯ ಗಳಲ್ಲಿನ ವರಾಹ, ಮಹಿಷಮರ್ಧಿನಿ ಶಿಲ್ಪಗಳ ಪ್ರತಿರೂಪಗಳನ್ನು, ಅವನು ವಿಭಿನ್ನ ವಾಗಿ ಕಥಾನಿರೂಪಣಾ ಶೈಲಿಯಲ್ಲಿ (Narrative panels) ಮಹಾಬಲಿಪುರಂನಲ್ಲಿ ಅವುಗಳಿಗೇ ಮೀಸಲಾದ ಗುಹೆಯಲ್ಲಿ ಕೆತ್ತಿಸಿದ. ಹೀಗಿದ್ದಾಗ ನರಸಿಂಹವರ್ಮ ವಿರಾಟ ವಿಷ್ಣುವಿನ ಕಿರೀಟದ ಮೇಲಿನ ನೃಸಿಂಹ ಶಿಲ್ಪವನ್ನು ತನ್ನ ಯುದ್ಧದ ವಿಜಯದ ಪ್ರತೀಕವಾಗಿ ಕೆತ್ತಿಸುವ ಸಂದರ್ಭವೇ ಬರುವುದಿಲ್ಲ. ಆ ಶಿಲ್ಪವನ್ನು ಗಮನಿಸಿದಾಗ ಚಾಲುಕ್ಯರ ಶಿಲ್ಪಿಯಿಂದಲೇ ರಚಿತವಾದ ಶಿಲ್ಪವೆಂದು ಖಂಡಿತವಾಗಿ ಗುರುತಿಸಬಹುದು. 'ಕಮಲದ' ಕಿರೀಟ, ಅಗಲವಾದ ದುಂಡುಮುಖ, ಉಬ್ಬಿದ ಗಲ್ಲಗಳು ಹಾಗೂ ಗದ್ದದ ಸುತ್ತಲೂ ವೃತ್ತಾಕಾರವಾಗಿ ಹರಡಿರುವ ಕೇಸರಗಳು, ಚಾಲುಕ್ಯ ಶಿಲ್ಪದ ಗುಣಲಕ್ಷಣಗಳನ್ನು ಪ್ರತಿಬಿಂಬಿಸುತ್ತದೆ. ಅದೇ ಪ್ರಸ್ತುತ ಶಿಲ್ಪ ವಿರಾಟವಿಷ್ಣುವಿನ ಹಿಂಬದಿಯಿಂದ ಇನ್ನೂ ಹಿಂದೆ ಇರುವಂತೆ ಕೆತ್ತಿದ್ದಲ್ಲ, ಅದು ಕಿರೀಟದ ಮೇಲೆ ಹೊರ ಚಾಚಿ ಕೊಂಡು ವಾಸ್ತವಿಕವಾಗಿ ಕುಳಿತಂತೆ ಕಾಣುತ್ತದೆ. ಈ ಎಲ್ಲ ಪುರಾವೆಗಳು ಪ್ರಸ್ತುತ ನರಸಿಂಹ ವಿಗ್ರಹವನ್ನು ಮೂಲದಲ್ಲೇ ಕೆತ್ತಿದ ಶಿಲ್ಪವೆಂದು ಸ್ಪಷ್ಟಪಡಿಸಬಹುದು.

ಇನ್ನೂ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಕ್ರಿ. ಶ. ೫೭೮ ರ ಕಾರ್ತೀಕ ಪೌರ್ಣಿಮೆಯ ದಿನ ಮಂಗಳೇಶ ಮೂರನೇ ಗುಹಾಂತರ್ದೇವಾಲಯದಲ್ಲಿ ಶ್ರೀಮಹಾವಿಷ್ಣು ಪ್ರತಿಮೆಯನ್ನು ಪ್ರತಿಷ್ಠಾಪಿಸುವುದಕ್ಕಿಂತ ಮೊದಲೇ ಅಲ್ಲಿನ ಅಲಂಕರಣದ ಕೆಲಸಗಳು ಸಂಪೂರ್ಣವಾಗಿದ್ದಿರಬೇಕು. ಅರೆಬರೆಯಾಗಿ ಸಂಪೂರ್ಣ ವಾದ ದೇವಾಲಯದ ಉದ್ಘಾಟನೆಯನ್ನು ಮಂಗಳೇಶ ಮಾಡಿರಲಿಕ್ಕಿಲ್ಲ. ಏಕೆಂದರೆ ಶಾಸ ನದ ಪಾಠದಲ್ಲಿ ಈ ಗುಹಾಂತರ್ದೇವಾಲಯದ ವರ್ಣನೆಯನ್ನು ಗಮನಿಸಿದರೆ, (ಪರ ಮಭಾಗವತೋಲಯಣೇ ಮಹಾವಿಷ್ಣು ಗೃಹಂ ಅತಿದೈವ ಮಾನುಷ್ಯಕಮ್ ಅತ್ಯದ್ಭುತ ಕರ್ಮ ವಿರಚೀತಂ...) ಮಂಗಳೇಶನ ನೇರ ಮೇಲ್ವಿಚಾರಣೆಯಲ್ಲಿ ನಿರ್ಮಿಸಿದ ಗುಹೆ ಇದೆಂದು ಸ್ಪಷ್ಟವಾಗುತ್ತದೆ. ಆದುದರಿಂದ ಶಕವರ್ಷ ೫೦೦ ರಲ್ಲಿ ಅಲಂಕಾರ ಕೆಲಸ ಬಹುತೇಕವಾಗಿ ಪೂರ್ಣಗೊಂಡಿದ್ದು, ಆ ನಂತರದಲ್ಲಿ ಶಿಲ್ಪಗಳನ್ನು ಕೆತ್ತುವ ಪ್ರಮೇಯವೇ ಇರದೆಂಬ ವಾದವನ್ನು ಎತ್ತಿಹಿಡಿಯಬಹುದು.

ಮೊದಲನೆಯ ಮತ್ತು ಎರಡನೆಯ ಗುಹೆಯಲ್ಲಿನ ಶಿಲ್ಪಗಳಲ್ಲಿ, ಕೆಲವುಗಳಲ್ಲಿ ಕೂಡ ಪಲ್ಲವ ಶೈಲಿಯ ಪ್ರಭಾವವಾಗಿದೆಯೆಂದು ಸೌಂದರರಾಜನ್ ಅವರು ಅಭಿಪ್ರಾಯ ಪಟ್ಟಿದ್ದಾರೆ. ಚಾಲುಕ್ಯರ ಶಿಲ್ಪಗಳಲ್ಲಿ ಅಗಲವಾದ ಎದೆ, ತುಂಬಿದ ಭುಜ, ಚಿಕ್ಕಸೊಂಟ ಹಾಗೂ ಗಟ್ಟಿಯಾಗಿ ನಿಂತಂತೆ ಇರುವ ಆರೋಗ್ಯಭರಿತ ಶರೀರ ಇವು ಸಾಮಾನ್ಯವಾಗಿ ಕಂಡುಬರುತ್ತವೆ. ಪಲ್ಲವರ ಶಿಲ್ಪಗಳಲ್ಲಿ ಈ ಅಂಶಗಳು ಇದ್ದರೂ ಅವುಗಳು ಕೊಂಚ ತೆಳ್ಳಗೆ (tubular features) ಇರುವ ಲಕ್ಷಣಗಳನ್ನು ಹೊಂದಿವೆ. ಪಲ್ಲವ ಶಿಲ್ಪಗಳಲ್ಲಿನ ಕಿರೀಟ ಉದ್ದಗೆ ಇರುವಂತೆ ತೋರಿಸಿರುತ್ತದೆ. ಆದರೆ ಚಾಲುಕ್ಯರ ಲಯಣಗಳ ಶಿಲ್ಪಗಳಲ್ಲಿ ಪ್ರಮಾಣಬದ್ಧವಾದ ದೇಹಾಕೃತಿಗೆ ಸರಿಹೊಂದುವ ಕಿರೀಟ ಹಾಗೂ ದೇಹ ಸೌಂದರ್ಯ, ಒಟ್ಟಾರೆಯಾಗಿ ಶಿಲ್ಪಗಳ ಪರಿಪೂರ್ಣತೆಯನ್ನು ತೋರಿಸುತ್ತದೆ.

ಸಾಮಾನ್ಯವಾಗಿ ಯಾವುದೇ ಒಂದು ದೇವಾಲಯ ಅಥವಾ ಗುಹಾಂತ ರ್ದೇವಾಲಯದ ನಿರ್ಮಾಣವಾಗುವ ಮೊದಲು ಅದರ ಸಂಪೂರ್ಣ ರೂಪುರೇಷೆಗಳೆಲ್ಲಾ ಪೂರ್ವಭಾವಿಯಾಗಿ ತಯಾರಿಸಲ್ಪಟ್ಟಿರುತ್ತವೆ. ಈ ಪದ್ಧತಿ ಪ್ರಾಚೀನಕಾಲದಿಂದಲೂ ಬೆಳೆದು ಬಂದಿದೆ. ಯಾವ ಶಿಲ್ಪ ಎಲ್ಲಿ ಇರಬೇಕು, ಯಾವ ಆಕಾರದಲ್ಲಿರಬೇಕು ಎಂಬುದನ್ನು ಶಿಲ್ಪಿ ಮತ್ತು ವಾಸ್ತುಶಿಲ್ಪಿ ಈರ್ವರೂ ನಿರ್ಧರಿಸುತ್ತಾರೆ. ಶಿಲ್ಪಗಳಲ್ಲಿ ಏನಾದರೂ ಕೊಂಚ ಬದಲಾವಣೆ ಇದ್ದರೆ ಕೊನೆಯ ಘಳಿಗೆಯಲ್ಲಿಯೂ ಆಗಬಹುದು. ಬಾದಾಮಿಯ ೩ನೆಯ ಗುಹೆಯಲ್ಲಿನ ವಿರಾಟವಿಷ್ಣು, ಹರಿಹರ, ನರಸಿಂಹ ಮತ್ತು ತ್ರಿವಿಕ್ರಮ ಶಿಲ್ಪಗಳೂ ಕೂಡಾ ಇಂತಹದೇ ವಾಸ್ತುವಿನ ಪರಿವ್ಯಾಪ್ತಿಗೆ ಬರುತ್ತವೆ. ಪ್ರಾಯಶಃ ಈ ಶಿಲ್ಪಗಳೆಲ್ಲ ಓರ್ವಶಿಲ್ಪಿಯ ನೇತೃತ್ವದಲ್ಲಿ ರಚಿತವಾಗಿವೆ. ಯಾವ ಶಿಲ್ಪಕ್ಕೂ ಅಡಿಯಲ್ಲಿ ಗಣಗಳ ಪಟ್ಟಿಕೆ ಇಲ್ಲ. ಇವೆಲ್ಲಾ ನೇರವಾಗಿ ನೆಲದಮೇಲೆ ನಿಂತಂತೆ ಇರುವುದನ್ನು ನಾವು ಈ ಮೊದಲೇ ವಿವರಿಸಿದ್ದೇವೆ. ಈ ರೀತಿಯ ಬದಲಾವಣೆಗಳು, ನಿರ್ಧಾರಗಳು ಶಿಲ್ಪಿಯಿಂದಲೇ ಆಗುತ್ತವೆ. ಒಂದು ವೇಳೆ ಸ್ಥಳದ ತೊಂದರೆ ಇದ್ದಲ್ಲಿ ಇರುವ ಅವಕಾಶದಲ್ಲೇ (Space) ನಿರ್ಧಾರಿತ ಶಿಲ್ಪವನ್ನು, ಮುಖ್ಯಶಿಲ್ಪಕ್ಕೆ ಪೂರಕವಾಗಿ ಸಂಯೋಜಿಸಿ ಕೆತ್ತುತ್ತಾನೆ. ಅಂತಹ ಒಂದು ಪ್ರಸಂಗವನ್ನು ೩ನೆಯ ಗುಹೆಯ ನರಸಿಂಹ ವಿಗ್ರಹದಲ್ಲಿ ಗಮನಿಸಬಹುದು. ನರಸಿಂಹನ ಉತ್ತರೀಯವನ್ನು ಹಿಡಿದು ನಿಂತಿರುವ "ಸಹಾಯಕ"ನಿಗಾಗಿ ಒಂದು ವಿಶೇಷ ಪೀಠದಂತಿರುವ ಎತ್ತರವಾದ ಚಪ್ಪಟೆ ಸ್ಥಳವನ್ನು ಬಿಡಲಾಗಿದೆ. ಇದು ಆ ಸ್ಥಳದಲ್ಲಿ ಮೂಲಕಲ್ಪನೆಯಲ್ಲಿ ಆದ ವ್ಯತ್ಯಾಸಕ್ಕೆ ಸರಿಹೊಂದಿಸುವ (adjustment) ಪ್ರಯತ್ನವನ್ನು ಗಮನಿಸಬಹುದು. ಇಂತಹವೇ ಉದಾಹರಣೆಗಳು ಅಜಂತಾದ[೧೦] ವಿಹಾರಗಳಲ್ಲಿನ ಶಿಲ್ಪಗಳಲ್ಲಿ ಕಾಣಬಹುದು. ಇದನ್ನು ಶಿಲ್ಪಿಯ ಅಚಾತುರ್ಯವೆಂದೂ ಕರೆಯಲಾಗುವುದು. ಇದು ಕೇವಲ ಆಕಸ್ಮಿಕವೂ ಹೌದು. ಅಂತಹ ಸರಿಹೊಂದಿಸುವಿಕೆ ವಾಸ್ತುಶಿಲ್ಪದಲ್ಲಿ ಸರ್ವೇಸಾಮಾನ್ಯವಾಗಿ ಕಂಡುಬರುತ್ತದೆ. ಚಾಲುಕ್ಯರ ವಾಸ್ತುಪಂಡಿತರು ಮತ್ತು ಶಿಲ್ಪಿಗಳು ಕೂಡ ಅಂತಹ ಸಂದರ್ಭದಲ್ಲಿ ಮಾಡಿದುದು

ಅದೇ ಕೆಲಸವೇ. ಆದರೆ, ನಿಗದಿತ ಶಿಲ್ಪಗಳನ್ನು ಅರೆಬರೆಯಾಗಿ ಮುಗಿಸಿ, ಪ್ರಸ್ತುತ ಗುಹಾಂತರ್ದೇವಾಲಯದ ಉದ್ಘಾಟನೆಯನ್ನು ಮಾಡುವ ಆತುರತೆಯು ಅಲ್ಲಿ ಎದ್ದು ಕಾಣುವುದಿಲ್ಲ. ಅಂದಮೇಲೆ- ಚಾಲುಕ್ಯರ ಲಯಣಗಳಲ್ಲಿನ ಎಲ್ಲಾ ಶಿಲ್ಪಗಳು ವಾಸ್ತು ನಕ್ಷೆಯಲ್ಲಿ ಪೂರ್ವಯೋಜಿತ ಶಿಲ್ಪಗಳೇ ಆಗಿವೆ.

ಮೊದಲನೆಯ ಗುಹೆಯಲ್ಲಿನ ಪಶ್ಚಿಮದ ಹೊರಗೋಡೆಯ ಮೇಲಿನ ಹದಿನೆಂಟು ಕೈಗಳ ನಟರಾಜ, ಒಳಗಡೆ ಇರುವ ಹರಿಹರ, ಅರ್ಧನಾರೀಶ್ವರ ಶಿವ ಮತ್ತು ಉಪವರ್ಣಕ (side shrine) ದಲ್ಲಿನ ಮಹಿಷಮರ್ಧಿನಿ, ಸ್ಕಂದ ಹಾಗೂ ಗಣೇಶ ಮತ್ತು ಪೂರ್ವದ ಹೊರಗೋಡೆಯಲ್ಲಿನ ದ್ವಾರಪಾಲ ಶಿಲ್ಪಗಳು ಗುಹೆಯ ಒಟ್ಟಾರೆ ನಕ್ಷೆಯಲ್ಲಿ ಸರಿಹೊಂದುವಂತೆ ನಿರ್ಮಿಸಲಾಗಿದೆ. ಅಲ್ಲದೆ ಮೊದಲನೆಯ ಗುಹೆ ಶೈವಧರ್ಮಕ್ಕೆ ಸೇರಿದ್ದರಿಂದ ಎಲ್ಲಾ ಶಿಲ್ಪಗಳು ಕೂಡಾ ಆ ಸಂಪ್ರದಾಯಕ್ಕೆ ಸೇರಿದವುಗಳೇ ಆಗಿವೆ. ಇನ್ನು ಎರಡನೆಯ ಗುಹೆಯಲ್ಲಿನ ವೈಷ್ಣವ ಶಿಲ್ಪಗಳು ನೃವರಾಹ ಮತ್ತು ತ್ರಿವಿಕ್ರಮ ಹಾಗೂ ಎರಡೂ ಬದಿಯಲ್ಲಿರುವ ದ್ವಾರಪಾಲಕರು. ಈ ಶಿಲ್ಪಗಳೂ ಕೂಡ ಗುಹಾಂತ ರ್ದೇವಾಲಯದ ಪೂರ್ವಯೋಜಿತ ಶಿಲ್ಪಗಳೇ. ಕೊನೆಯದಾಗಿ ೩ನೆಯ ಗುಹೆಯ ಶಿಲ್ಪ ಗಳಂತೂ ಆ ವಾಸ್ತುವಿನ ಅವಿಭಾಜ್ಯ ಅಂಗಗಳೇ ಆಗಿವೆ. ಹೀಗಾಗಿ ಚಾಲುಕ್ಯರ ಲಯಣ ಗಳಲ್ಲಿ ರೂಪುಗೊಂಡ ಶಿಲ್ಪಗಳಲ್ಲಿನ ಶೈಲಿಯ ಸಾಮ್ಯತೆ ಮತ್ತು ಪ್ರತಿಮಾಲಕ್ಷಣ (Iconography) ಗಳು ಒಂದೇ ಸೆಲೆಯಿಂದ ಉದ್ಭವಿಸಿ ವಿಕಸನ ಹೊಂದಿದವು. ಆದುದರಿಂದ ಚಾಲುಕ್ಯ ಲಯಣಗಳ ಬೆಳವಣಿಗೆ-ಹಂತಹಂತವಾಗಿ ಶಿಲ್ಪ-ವಾಸ್ತುಗಳ ಸಾಂಪ್ರದಾಯಿಕ ಚೌಕಟ್ಟಿನಲ್ಲಿಯೇ[೧೧] ಆಯಿತು ಎಂದು ಹೇಳಬಹುದು ಹಾಗೂ ಎಲ್ಲ ಶಿಲ್ಪಗಳು ಅವುಗಳ ಮೂಲಕಲ್ಪನೆಯಲ್ಲಿ ಇದ್ದವು ಎಂದು ಖಂಡಿತವಾಗಿ ಹೇಳಬಹುದು.

ಅಡಿಟಿಪ್ಪಣಿಗಳು

೧ ಈ ಲೇಖನ ಚಾಲುಕ್ಯ ಶಿಲ್ಪಗಳನ್ನು ಕುರಿತಂತೆ ನಾನು ಕೈಗೊಂಡ ಅಭ್ಯಾಸದ ಫಲ. ಶಿಲ್ಪಗಳು ನಂತರ ಕೆತ್ತಿದವೆಂಬ ಜಿಜ್ಞಾಸೆ ಸರ್ವವಿಧಿತವಲ್ಲದಿದ್ದರೂ-ಶಿಲ್ಪಗಳ ಸೂಕ್ಷ್ಮ ಅಧ್ಯಯನ ಅಂತಹ ಹಲವಾರು ಸಂಶಯಗಳನ್ನು ನಿವಾರಿಸಬಹುದೆಂಬುದೇ ಈ ಲೇಖನದ ಜೀವಾಳ-ವಸ್ತು.

೨ ಬಾದಾಮಿಯ ಉತ್ತರಗುಡ್ಡದ ಕಲ್ಬಂಡೆ ಶಾಸನ, ಎಪಿಗ್ರಾಫಿಯಾ ಇಂಡಿಕಾ, XXVII, ಪು. ೪-೯.

೩ ಬಾದಾಮಿ ೩ನೆಯ ಗುಹೆಯ ಶಾಸನ, ಇಂಡಿಯನ್ ಆಂಟಿಕ್ವಾಯರಿ X, ಪು. ೫೯-೬೦.

೪ ಅಶ್ವಿನ್ ಲಿಪ್ಪೆ (೧೯೬೯-೭೦), Additions and Replacements in Early Chalukya Temples. Archieves of Asian Art - Vol. 23, Pp. 611.

೫ ಸೌಂದರರಾಜನ್ ಕೆ. ವಿ., ಜರ್ನಲ್ ಆಫ್ ಇಂಡಿಯಾ ಮ್ಯೂಸಿಯಮ್ಸ್ XIV-XVI (೧೯೫೮-೬೦) (ಈ ಸಂಪುಟ ಕೆಲವು ವರ್ಷಗಳ ನಂತರ ಪ್ರಕಟವಾಯಿತು)

೬ ೩ನೆಯ ಗುಹೆಯಲ್ಲಿ ಭಿತ್ತಿಚಿತ್ರಗಳ ಮತ್ತು ಉಬ್ಬುಶಿಲ್ಪಗಳಿಗೆ ಬಣ್ಣ ಹಾಕಿದ್ದ ಕುರುಹುಗಳು ಇಂದಿಗೂ ಅಲ್ಪಸ್ವಲ್ಪ ಅವಶೇಷಗಳು ಕಂಡುಬರುತ್ತವೆ.

೭ ಅಶ್ವಿನ್ ಲಿಪ್ಪೆ ಪೂರ್ವೋಕ್ತ.

೮ ಕುಲಕರ್ಣಿ ಆರ್.ಎಚ್., 2000 Pre and Early Chalukya Art in Karnataka (Ph.D. Thesis, unpublished, Mysore University, 1998, ಬನವಾಸಿ ಕದಂಬರ ಕಾಲದ ಶಿಲ್ಪಕಲೆ, 'ಕದಂಬ ಅಧ್ಯಯನ', ಮೈಸೂರು.

೯. ಸೌಂದರರಾಜನ್ ಕೆ. ವಿ., ಪೂರ್ವೋಕ್ತ, ಇತ್ತೀಚಿನ ಅವರ ದಕ್ಷಿಣದ ಗುಹಾಂತರ್ದೇವಾಲಯಗಳ ಕುರಿತ ಪುಸ್ತಕದಲ್ಲೂ (ಆಂಗ್ಲಭಾಷೆಯಲ್ಲಿದೆ) ಇದೇ ವಾದವನ್ನು ಎತ್ತಿಹಿಡಿದಿದ್ದಾರೆ.

೧೦. ಅಜಂತಾದಲ್ಲಿ ಶಿಲ್ಪಗಳಲ್ಲಿ ಮತ್ತು ವಾಸ್ತುವಿನಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಉದಾ: ಚೈತ್ಯಾಲಯದಲ್ಲಿ (೨೬ನೆಯ ಗುಹೆಯಲ್ಲಿ) ಬುದ್ಧನ "ಪರಿನಿರ್ವಾಣದ" ದೃಶ್ಯದಲ್ಲಿ ಇಂತಹ ಒಂದು ಪ್ರಯತ್ನ ನೋಡಬಹುದು.

೧೧. ಗುಹಾಂತರ್ದೇವಾಲಯಗಳ ವಿಕಾಸ ಮೊಟ್ಟಮೊದಲು ಬೌದ್ಧಧರ್ಮದ ಕೃತಿಗಳಿಂದಲೇ ಪ್ರಾರಂಭವಾಯಿತು. ವೈದಿಕ ಧರ್ಮಕ್ಕೆ ಸಂಬಂಧಪಟ್ಟ ಉದಾಹರಣೆಗಳು ಗುಪ್ತರ ಉದಯಗಿರಿ ವಿದಿಶಾ (ಮಧ್ಯಪ್ರದೇಶ) ಮತ್ತು ನಂತರದಲ್ಲಿ ಎಲಿಫೆಂಟಾ (ಮುಂಬೈ), ಎಲ್ಲೋರಾ(ಮಹಾರಾಷ್ಟ್ರ)ಗಳ ಗುಹಾಂತರ್ದೇವಾಲಯಗಳು ಉಲ್ಲೇಖಾರ್ಹ. ಬಾದಾಮಿಯ ಗುಹಾಂತರ್ದೇವಾಲಯಗಳು ಈ ಸಂಪ್ರದಾಯಕ್ಕೆ ಸೇರಿದವು, ಇವು ವೈದಿಕಧರ್ಮದ ಅತ್ಯಂತ ಸುಂದರ ವಾಸ್ತುಕೃತಿಗಳು ಆಗಿವೆ.

ಪ್ರೊ. ಎಂ. ಹಿರಿಯಣ್ಣ

ಡಾ. ಎಂ. ಪಿ. ರಮೇಶ್

ಪ್ರೊ. ಎಂ. ಹಿರಿಯಣ್ಣನವರು ೧೮೭೧ ಮೇ ೭ ರಂದು ಮೈಸೂರಿನಲ್ಲಿ ಹುಟ್ಟಿದರು. ಹಿರಿಯಣ್ಣನವರ ತಂದೆ ಶ್ರೀ ನಂಜುಂಡಯ್ಯ, ಅವರಿಗೆ ಮೂವರು ಗಂಡು ಮಕ್ಕಳು; ಎರಡನೆಯವರೇ ಹಿರಿಯಣ್ಣನವರು. ಅವರ ಮನೆತನ ಕನ್ನಡ ಮಾತನಾಡುವ ಸ್ಮಾರ್ತ ಬ್ರಾಹ್ಮಣರದು. ತಂದೆ – ತಾಯಿಯರ ಸಂಪ್ರದಾಯದಂತೆ ಮಕ್ಕಳಿಗೆ ಸಂಸ್ಕೃತದಲ್ಲೇ ಶಿಕ್ಷಣ. ಅಂದು ಮೈಸೂರಿನಲ್ಲಿ ಸದ್ವಿದ್ಯಾಪಾಠಶಾಲೆಯು ಸಂಸ್ಕೃತ ಕಲಿಕೆಗೆ ಹೆಸರಾಗಿತ್ತು. ಈ ಶಾಲೆಯ ಪ್ರಮುಖ ವ್ಯಕ್ತಿ ಅಂದಿನ ಕಾಲದಲ್ಲಿ ಘನ ವಿದ್ವಾಂಸರಾದ ಪೆರಿಯಸ್ವಾಮಿ ತಿರುಮಲಾಚಾರ್ಯರು. ಅಂದಿನ ಕಾಲದಲ್ಲಿ ಅವರು ಕನ್ನಡ, ಸಂಸ್ಕೃತ ಎರಡೂ ಭಾಷೆಯಲ್ಲಿ ವಿದ್ವಾಂಸರು. ಅವರನ್ನು ಜನರು 'ಉಭಯ ಭಾಷಾ ವಿಶಾರದ' ರೆಂದು ಕರೆಯುತ್ತಿದ್ದರು.

ಹಿರಿಯಣ್ಣನವರು ಹುಟ್ಟಿ, ಬೆಳೆದು, ಕಲಿತದ್ದು, ಕೆಲಸ ಮಾಡಿದ್ದು, ತೀರಿಕೊಂಡಿದ್ದು ಮೈಸೂರಿನಲ್ಲಿಯೇ. ಅವರು ಎಲ್ಲಿಯೂ ಓಡಾಡಲಿಲ್ಲ. ಆದರೆ ಅವರ ಹೆಸರು ಮಾತ್ರ ಪ್ರಪಂಚಾದ್ಯಂತ ಪರಿಚಯವಾಗಿತ್ತು. ಸರಳ ಜೀವಿ, ಎಷ್ಟು ಬೇಕೋ ಅಷ್ಟು ಮಾತು, ತತ್ವಜ್ಞಾನಿ, ಪರೋಪಕಾರಿ, ಸೃಜನಶೀಲ ವ್ಯಕ್ತಿತ್ವ ಮೊದಲಾದ ಗುಣಗಳು ಅವರಿಗೆ ಸದೃಶವಾಗಿದ್ದವು. ಹಿರಿಯಣ್ಣನವರು ಬಿ.ಎ. ಮತ್ತು ಎಂ.ಎ. ತರಗತಿಗಳಲ್ಲಿ ಸಂಸ್ಕೃತವನ್ನೇ ಅಭ್ಯಾಸ ಮಾಡಿದರು. ಆದರೆ ಅವರಿಗೆ ಹೆಚ್ಚಾಗಿ ಒಲವಿದ್ದುದು ತತ್ವಶಾಸ್ತ್ರದಲ್ಲಿ. ಆದ್ದರಿಂದ ಅವರು ತತ್ವಶಾಸ್ತ್ರಕ್ಕೆ ಸಂಬಂಧಿಸಿದ ಉದ್ಗ್ರಂಥಗಳನ್ನು ರಚಿಸಿ ಕೀರ್ತಿಗಳಿಸಿದರು. ಹಿರಿಯಣ್ಣನವರು ನಾನಾ ರಂಗಗಳಲ್ಲಿ ಕೆಲಸ ಮಾಡಿದವರು. ಓರಿಯಂಟಲ್ ಲೈಬ್ರರಿ, ಶಿಕ್ಷಣ ಕಛೇರಿ, ಮದ್ರಾಸಿನ ಟೀಚರ್ಸ್ ಕಾಲೇಜಿನಲ್ಲಿ ಶಿಕ್ಷಕರ ಶಿಕ್ಷಣ (ಎಲ್.ಟಿ.) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಮೈಸೂರಿಗೆ ಹಿಂದಿರುಗಿ ಸರ್ಕಾರಿ ನಾರ್ಮಲ್ ಸ್ಕೂಲ್‌ನಲ್ಲಿ ಉಪಾಧ್ಯಾಯರಾಗಿ ಸೇರಿಕೊಂಡರು. ಅದೇ ಶಾಲೆಯಲ್ಲಿ ಮುಖ್ಯೋಪಾಧ್ಯಾಯರೂ ಆದರು. ಅಂದಿನ ಸಮಯದಲ್ಲಿ ಹಿರಿಯಣ್ಣನವರು 'ಶಿಕ್ಷಣ ವಿಧಾನ'ಗಳನ್ನು ಕುರಿತಂತೆ ಒಂದು ಕೃತಿಯನ್ನು ರಚಿಸಿದರು. ಅದು ಅವರು ಬರೆದ ಪ್ರಥಮ ಕನ್ನಡ ಪುಸ್ತಕ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ

ಹಿರಿಯಣ್ಣನವರು ಸಂಸ್ಕೃತ ವಿಭಾಗದಲ್ಲಿ ಅಧ್ಯಾಪಕರಾಗಿ ಸೇರಿಕೊಂಡರು. ಅದೇ ಸಮಯದಲ್ಲಿ ತತ್ತ್ವಶಾಸ್ತ್ರ ವಿಭಾಗವು ಮೈದಳೆದಿತ್ತು. ೧೯೧೮ರಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ರವರು ಬಹುದೊಡ್ಡ ತತ್ತ್ವಜ್ಞಾನಿಯಾಗಿದ್ದರು. ಅವರು ನಮ್ಮ ದೇಶದ ಅತ್ಯುನ್ನತ ಪದವಿಯಾದ ರಾಷ್ಟ್ರಪತಿ ಪೀಠವನ್ನು ಅಲಂಕರಿಸಿದ ಮಹಾ ಮೇಧಾವಿ. ಪ್ರೊ. ಎ. ಆರ್. ವಾಡಿಯಾ ಅವರೂ ಬಹುದೊಡ್ಡ ವಿದ್ವಾಂಸರು ; ತತ್ತ್ವಶಾಸ್ತ್ರ ವಿಭಾಗವನ್ನು ಪ್ರಾರಂಭಿಸಿದವರು ಅವರು. ಹಿರಿಯಣ್ಣನವರು ಸಂಸ್ಕೃತ ಅಧ್ಯಾಪಕ ರಾಗಿದ್ದರೂ ಕೂಡ, ತತ್ತ್ವಶಾಸ್ತ್ರ ವಿಭಾಗಕ್ಕೆ ಬಂದು ಭಾರತೀಯ ತತ್ತ್ವಶಾಸ್ತ್ರ ವಿಷಯದ ಬಗ್ಗೆ ಪಾಠ ಹೇಳುತ್ತಿದ್ದರು. ರಾಧಾಕೃಷ್ಣನ್, ಎ. ಆರ್. ವಾಡಿಯಾ ಮತ್ತು ಹಿರಿಯಣ್ಣನವರು ಅಚ್ಚುಮೆಚ್ಚಿನ ಸಹೋದ್ಯೋಗಿಗಳಾಗಿದ್ದರು. ಹಿರಿಯಣ್ಣನವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬಂದದ್ದು ಒಂದು ಸುವರ್ಣಾವಕಾಶ.

ವಿದ್ಯೆಗೆ ತಕ್ಕ ವಿನಯ ಹಿರಿಯಣ್ಣನವರಲ್ಲಿತ್ತು. ತಾನು ಬಹುದೊಡ್ಡ ಮೇಧಾವಿ ಎಂಬ ಗರ್ವ ಅವರಿಗೆ ಎಂದೂ ಇರಲಿಲ್ಲ; ಪ್ರಪಂಚದ ಘನ ವಿದ್ವಾಂಸರೆಲ್ಲ ಹಿರಿಯಣ್ಣ ನವರ ಬಗ್ಗೆ ತುಂಬಾ ಗೌರವವನ್ನು ಇಟ್ಟುಕೊಂಡಿದ್ದರು. ಈ ವಿಚಾರವು ಅವರಿಗೆ ಗೊತ್ತಿದ್ದರೂ ಎಂದೂ ಹೆಮ್ಮೆಪಟ್ಟವರಲ್ಲ. ವಿಶ್ವವಿಖ್ಯಾತ ತತ್ತ್ವಜ್ಞಾನಿಯಾದ ಡಾ. ಎಸ್. ರಾಧಾಕೃಷ್ಣನ್ ಅವರಂಥ ಮಹಾವಿದ್ವಾಂಸರೂ ಹಿರಯಣ್ಣನವರ ಬಳಿಗೆ ಬಂದು ಸಲಹೆ-ಸಹಕಾರಗಳನ್ನು ಕೇಳುತ್ತಿದ್ದರು. ಅಂತಹ ಸಮಯದಲ್ಲೂ ಅವರ ನಡತೆ ವ್ಯತ್ಯಾಸವಾಗಲಿಲ್ಲ. ತಮ್ಮ ಬಳಿಗೆ ಯಾರೇ ಬಂದರೂ ವಿನಯ-ನಮ್ರತೆಯಿಂದಲೇ ವರ್ತಿಸುತ್ತಿದ್ದರು.

ಮೈಸೂರು ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಅದ್ವೈತ ಪ್ರಾಧ್ಯಾಪಕರಾಗಿದ್ದ ಮಹಾವಿದ್ವಾನ್ ಪಾಲಘಾಟ್ ನಾರಾಯಣ ಶಾಸ್ತ್ರಿಗಳು, ಹಿರಿಯಣ್ಣನವರ ಗುರು. ಶಾಸ್ತ್ರಿಗಳು ಹಿರಿಯಣ್ಣನವರ ಮನೆಗೆ ಬಂದು ಅವರಿಗೆ ತಿಳಿಯದ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಚರ್ಚಿಸಲು ಬರುತ್ತಿದ್ದರು. ಇವರಿಬ್ಬರಿಗೂ ಸಮನಾದ ವಿದ್ವತ್ತಿತ್ತು. ಆದರೂ ಹಿರಿಯಣ್ಣನವರು ಶಾಸ್ತ್ರಿಗಳನ್ನು ಗುರುವೆಂದೇ ಪ್ರೀತಿಸುತ್ತಿದ್ದರು. ಅವರಲ್ಲಿ ಅಷ್ಟು ವಿನಯ. ಹಿರಿಯಣ್ಣನವರಿಗೆ ಮತ್ತೊಬ್ಬ ಸ್ನೇಹಿತರು. ಕುಪ್ಪುಸ್ವಾಮಿ ಶಾಸ್ತ್ರಿಗಳು. ಇವರು ಸಂಸ್ಕೃತ ಪ್ರಾಧ್ಯಾಪಕರು. ಅವರು ಹಿರಿಯಣ್ಣನವರನ್ನು 'ಕುಲಪತಿ'ಗಳೆಂದೇ ಸಂಬೋಧಿಸುತ್ತಿದ್ದರು. ಈ ಮಾತು ಹಿರಿಯಣ್ಣನವರಿಗೆ ಅರ್ಥಗರ್ಭಿತವಾಗಿದೆ. ಅವರು ಎಷ್ಟೋ ಬಡ ಹುಡುಗರಿಗೆ ಧನಸಹಾಯ ಮಾಡಿ ಮನೆಯಲ್ಲಿಯೇ ಇಟ್ಟುಕೊಂಡು ಓದಿಸಿದ್ದಾರೆ. ಈ ಸಂಗತಿಯನ್ನು ಯಾರಿಗೂ ತಿಳಿಯದಂತೆ ಕಾಪಾಡಿಕೊಂಡು ಬರುತ್ತಿದ್ದರು. ವಿದ್ಯೆ ಮತ್ತು ಜ್ಞಾನದಲ್ಲಿ ಹಿರಿಯಣ್ಣನವರಿಗೆ ಸರಿಸಮಾನವಾಗಿ ನಿಲ್ಲುವಂಥ ಮತ್ತೊಬ್ಬ ವ್ಯಕ್ತಿ ಅಂದು ಯಾರೂ ಇರಲಿಲ್ಲ. ವಿದ್ವಾಂಸರ ಪ್ರಪಂಚದಲ್ಲಿ ಅವರಿಗೆ ಲಭಿಸಿದ ಮನ್ನಣೆ ಕಡಿಮೆಯೇನಲ್ಲ. ಇಷ್ಟಿದ್ದರೂ ಅವರ ಮನಸ್ಸು ಮಗುವಿನಂತೆ.

ಪ್ರೊ. ಹಿರಿಯಣ್ಣನವರು ಉತ್ತಮ ಬರಹಗಾರರೆಂಬುದಕ್ಕೆ ಅವರು ರಚಿಸಿದ ಗ್ರಂಥಗಳೇ ಸಾಕ್ಷಿಯಾಗಿವೆ. ಅವರು, ತತ್ತ್ವಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳಾದ 'ಈಶೋಪನಿಷತ್ತು' ಕೇನೋಪನಿಷತ್ತು, ಕಠೋಪನಿಷತ್ತು ಮತ್ತು ಬೃಹದಾರಣ್ಯಕೋಪನಿಷತ್ತು ಇವನ್ನು ಶಂಕರಭಾಷ್ಯದೊಂದಿಗೆ ಇಂಗ್ಲಿಷಿನಲ್ಲಿ ತಂದರು. ಕೆಲವು ಗ್ರಂಥಗಳನ್ನು ಅಚ್ಚುಕಟ್ಟಾಗಿ ಸಂಪಾದಿಸಿ ಪ್ರಕಟಿಸಿದರು. ಅವರ ಎರಡು ಮಹತ್ವದ ಗ್ರಂಥಗಳೆಂದರೆ 'ಔಟ್ ಲೈನ್ಸ್ ಆಫ್ ಇಂಡಿಯನ್ ಫಿಲಾಸಫಿ' (೧೯೩೨), ಎಸೆನ್‌ಷಿಯಲ್ಸ್ ಆಫ್ ಇಂಡಿಯನ್ ಫಿಲಾಸಫಿ (೧೯೪೯). ಈ ಎರಡು ಮಹಾಗ್ರಂಥಗಳು ವಿಶ್ವವಿಖ್ಯಾತಿಯನ್ನು ತಂದುಕೊಟ್ಟವು. ಮತ್ತೊಂದು ಬೃಹತ್ ಗ್ರಂಥವಾದ 'ಇಂಡಿಯನ್ ಕನ್ಸೆಪ್ಷನ್ ಆಫ್ ವ್ಯಾಲ್ಯೂಸ'ನ್ನು ಬರೆದರು. ಆದರೆ ಅದನ್ನು ಪ್ರಕಟಿಸುವ ಮೊದಲೇ ತೀರಿಕೊಂಡರು.

ಸಾಹಿತ್ಯ ಕ್ಷೇತ್ರದಲ್ಲಿ ಹಿರಿಯಣ್ಣನವರು ಅಗ್ರಗಣ್ಯರು. ಅವರು ಬರೆದ ಹಲವಾರು ಪ್ರಬಂಧಗಳು, ಮಾಡಿದ ಉಪನ್ಯಾಸಗಳು, ಪತ್ರಿಕೆಗಳಿಗೆ ಬರೆದ ವಿಮರ್ಶೆಗಳು ಹಲವಾರಿವೆ. ಇವನ್ನು ಪ್ರಕಟಿಸುವ ಕಾರ್ಯ ಅವರ ಜೀವಿತ ಕಾಲದಲ್ಲಿ ಆಗಲಿಲ್ಲ. ಅವರು ಕಾಲವಾದ ನಂತರ ಮೈಸೂರಿನ 'ಕಾವ್ಯಾಲಯ' ಪ್ರಕಾಶನದವರು ಇವನ್ನೆಲ್ಲ ಪುಸ್ತಕದ ರೂಪದಲ್ಲಿ ಹೊರತಂದರು. ಈ ಪ್ರಬಂಧಗಳನ್ನು ಅಚ್ಚಿಗೆ ಸಿದ್ಧ ಮಾಡಿ ಕೊಟ್ಟವರು ಹಿರಿಯಣ್ಣನವರ ಶಿಷ್ಯರಾದ ಪ್ರೊ. ನಂಜನಗೂಡು ಶಿವರಾಮ ಶಾಸ್ತ್ರಿಗಳು.

ನಮ್ಮ ದೇಶದ ದೊಡ್ಡ ದೊಡ್ಡ ವಿದ್ವಾಂಸರ ಸಾಲಿನಲ್ಲಿ ಬರುವವರಲ್ಲಿ ಹಿರಿಯಣ್ಣನವರು ಒಬ್ಬರು. ಖ್ಯಾತ ವಿದ್ವಾಂಸರಾದ ಪ್ರೊ. ಪ್ರಭುಶಂಕರರ ಅಭಿಪ್ರಾಯದಂತೆ 'ಭಾರತೀಯ ದರ್ಶನಗಳನ್ನು ಇಷ್ಟು ಸಂಕ್ಷೇಪವಾದ ರೀತಿಯಲ್ಲಿ ಅಧಿಕೃತವಾದ ವಾಣಿಯಲ್ಲಿ, ಅತ್ಯಂತ ಖಚಿತವಾದ ರೀತಿಯಲ್ಲಿ ನಿರೂಪಿಸಿರುವ ಮತ್ತೊಂದು ಗ್ರಂಥ ಇಂಗ್ಲಿಷಿನಲ್ಲಾಗಲೀ, ಬೇರೆ ಯಾವುದೇ ಭಾಷೆಯಲ್ಲಾಗಲೀ ಇರುವುದು ನನ್ನ ಗಮನಕ್ಕೆ ಬಂದಿಲ್ಲ. ಪ್ರತಿಯೊಂದು ದರ್ಶನದ ವಿಷಯದಲ್ಲಿಯೂ ತಲಸ್ಪರ್ಶಿಯಾದ ಜ್ಞಾನ, ನಿಷ್ಕೃಷ್ಟವಾದ ನಿರೂಪಣೆ, ಹಿತವೂ ಮಿತವೂ ಆದ ವಿಮರ್ಶೆ ಇವು ಪ್ರೊ. ಹಿರಿಯಣ್ಣನವರ ವೈಶಿಷ್ಟ್ಯವಾಗಿದೆ.

ನಿತ್ಯಾನಂದನ ನಿರಂತರ ವಾಂತಿ ಮನೋಬೇನೆ ಹಾಗೂ ನಿರಂಜನನ ಮಾತೃಗಾಮಿ ವಿಕಾರ

ಪ್ರೊ.ಪಿ. ನಟರಾಜ್

ಒಮ್ಮೆ ನನ್ನ ಕಿರಿಯ ಮಗಳು ತಿರುಪತಿ ತಿಮ್ಮಪ್ಪನ ದರ್ಶನಕ್ಕೆ ಹೋಗಿದ್ದಳು. ರೈಲಿನಲ್ಲಿ ಹಿಂದಿರುಗಿ ಬರುವಾಗ, ಸಹಪ್ರಯಾಣಿಕರೊಬ್ಬರು ಮತ್ತೊಬ್ಬ ಪ್ರಯಾಣಿಕರೊಡನೆ ತಮ್ಮ ಸ್ನೇಹಿತರ ಮಗನ ನಿರಂತರ ವಾಂತಿರೋಗಕ್ಕೆ ಮಾಡಿದ ಏನೆಲ್ಲಾ ಚಿಕಿತ್ಸೆಗಳು ಹಲವಾರು ವೈದ್ಯ ತಜ್ಞರನ್ನು ಭೇಟಿಯಾದುದು, ಏನೂ ಪ್ರಯೋಜನವಾಗದೆ ಆ ರೋಗಿ ಕೃಶವಾಗುತ್ತಿರುವುದು, ತಂದೆ–ತಾಯಿಗಳ ಆತಂಕ ಇತ್ಯಾದಿ ವಿವರಗಳನ್ನು ಹೇಳುತ್ತಿದ್ದರಂತೆ ಪಕ್ಕದಲ್ಲೇ ಕುಳಿತಿದ್ದ ನನ್ನ ಮಗಳಿಗೆ ಈ ಎಲ್ಲಾ ವಿವರಗಳು ಕೇಳಿಬರುತ್ತಿದ್ದವಂತೆ, ಬೇರೆಯವರು ಕೇಳಲಿ ಅಥವಾ ಬಿಡಲಿ, ಇವಳಿತ್ತ ಸಲಹೆಗಳನ್ನು ಅವರು ಅನುಸರಿಸಲಿ ಅಥವಾ ಬಿಡಲಿ ತನ್ನ ಕೈಯಲ್ಲಾಗುವ ಸಹಾಯವನ್ನು ನೀಡುವುದು ನನ್ನ ಮಗಳ ಸ್ವಭಾವ. ಅವರ ಎಲ್ಲಾ ವಿವರಗಳನ್ನೂ ಕೇಳಿ, "ನಮ್ಮ ತಂದೆಯವರನ್ನು ಭೇಟಿಯಾಗಿ ರೋಗಿಯನ್ನು ತೋರಿಸಿ, ಅವರ ಸಲಹೆಯನ್ನು ಪಡೆಯಿರಿ ಎಂದು ಸಲಹೆ ಮಾಡಿ, ನನ್ನ ವಿಳಾಸವನ್ನು ಕೊಟ್ಟು ಬಂದಿದ್ದಳು.

ಇದಾದ ಒಂದು ತಿಂಗಳ ತರುವಾಯ ಒಂದು ದಿನ ಬೆಳಗ್ಗೆ ಬೆಂಗಳೂರಿನಿಂದ ಒಂದು ದೂರವಾಣಿ ಕರೆ ಬಂದಿತು. "ನಿಮ್ಮ ಮಗಳು ನಿಮ್ಮ ವಿಳಾಸ ಮತ್ತು ದೂರವಾಣಿ ನಂಬರ್ ಕೊಟ್ಟಿದ್ದಾರೆ, ನನ್ನ ಸ್ನೇಹಿತರ ಮಗನ ಸಮಸ್ಯೆಯ ಬಗ್ಗೆ ನಿಮ್ಮನ್ನು ಭೇಟಿಯಾಗಬೇಕು. ಎಂದು ಬರಬೇಕು? ಎಂದು ಕೇಳಿದರು. ಮುಂದಿನ ಸೋಮವಾರ ೫-೦೦ ಘಂಟೆಗೆ ಬನ್ನಿ ಎಂದು ಭೇಟಿಯ ಕಾಲ ಮತ್ತು ದಿನವನ್ನು ತಿಳಿಸಿದೆ.

ಸೋಮವಾರ ಕ್ಲುಪ್ತಕಾಲಕ್ಕೆ ಸರಿಯಾಗಿ, ನಿತ್ಯಾನಂದ, ಅವನ ತಂದೆತಾಯಿಗಳು ಬಂದಿಳಿದರು. ನಿತ್ಯಾನಂದ ತೀರ ಕೃಶನಾಗಿದ್ದ, ಅವನ ತಂದೆ–ತಾಯಿಗಳು ತೀರ ಆತಂಕದಿಂದ ಬಿಳಚಿಕೊಂಡಿದ್ದರು. ಏನೆಲ್ಲಾ ಚಿಕಿತ್ಸೆ ಮಾಡಿದರೂ ಇರುವ ಒಬ್ಬನೇ ಮಗನ ವಾಂತಿರೋಗ ಗುಣವಾಗದಿದ್ದರೆ ಭಯದಿಂದ ಬಿಳಚಿಕೊಳ್ಳದೆ ಮತ್ತೇನಾದೀತು. ಇದೂ ಕಡೆಯ ಪ್ರಯತ್ನವೆಂದೇ ಬಂದಿದ್ದರು.

ನಿತ್ಯಾನಂದ ನನ್ನಲ್ಲಿಗೆ ಬಂದಾಗ ೨೪ ವರ್ಷ, ತಂದೆ – ತಾಯಿಗಳಿಗೆ ಒಬ್ಬನೇ ಮಗ. ಆತನಿಗೆ ಒಬ್ಬಳು ಅಕ್ಕ ಮತ್ತು ಒಬ್ಬ ತಂಗಿ ಇದ್ದರು. ಬಿ. ಕಾಂ. ಪದವಿಯನಂತರ ತಂದೆಯ ವ್ಯಾಪಾರದಲ್ಲಿ ಸಹಾಯ ಮಾಡಿಕೊಂಡಿದ್ದ. ಸಾಮಾನ್ಯರಿಗಿಂತ ಸ್ವಲ್ಪ ಹೆಚ್ಚು ಬುದ್ಧಿವಂತನಾಗಿದ್ದನಲ್ಲದೆ ನೋಟದಲ್ಲೂ ಚುರುಕಾಗಿದ್ದ. ಯಾವುದೇ ವಿಚಾರವನ್ನು ಸೂಕ್ಷ್ಮವಾಗಿ ಗ್ರಹಿಸುವ ಮತ್ತು ಪರಿಶೀಲಿಸುವ ಸಾಮರ್ಥ್ಯವಿತ್ತು. ಅವನ ವಿವಾಹದ ವಿಚಾರ ಹಲವು ಬಾರಿ ಬಂದಿದ್ದರೂ ಅವನ ಕಾಯಿಲೆಯಿಂದ ಮುಂದೂಡುತ್ತಿದ್ದರು.

ಅವನ ತಂದೆ–ತಾಯಿಗಳು ಮತ್ತು ಅವನೊಡನೆ, ಸ್ವಲ್ಪಕಾಲ ಮಾತನಾಡಿ, ವಿಶ್ವಾಸ ಮೂಡಿಸಿದ ನಂತರ ತನ್ನ ಖಾಯಿಲೆ, ಮಾಡಿದ ಚಿಕಿತ್ಸೆ ಮತ್ತು ಪ್ರಸ್ತುತ ದೈಹಿಕ ಮತ್ತು ಮಾನಸಿಕ ಸ್ಥಿತಿಯನ್ನು ಹೇಳಲಾರಂಭಿಸಿದ.

“೧೯೮೭ ರಲ್ಲಿ ವಿಪರೀತ ವಾಂತಿಯಾಗಿ ನಿರ್ಜಲಸ್ಥಿತಿಯುಂಟಾಯಿತು. ನರ್ಸಿಂಗ್ ಹೋಮ್‌ನಲ್ಲಿ ಕೆಲವು ಬಾಟಲ್ ಗ್ಲೂಕೋಸ್ ಮತ್ತು ವಾಂತಿನಿರೋಧಕ ಔಷಧಿಯನ್ನು ಕೊಟ್ಟನಂತರ ಚೇತರಿಸಿಕೊಂಡ. ಕೆಲ ದಿನಗಳ ನಂತರ ವಾಂತಿ ಮಾಡುವುದು ಮತ್ತೆ ಕಾಣಿಸಿಕೊಂಡು, ಬರುಬರುತ್ತಾ ತೀವ್ರವಾಯ್ತು. ಪ್ರಾರಂಭದಲ್ಲಿ ಎಣ್ಣೆಯಲ್ಲಿ ಬೆಂದ ತಿಂಡಿ ತಿನಿಸನ್ನು ತಿಂದ ನಂತರ ವಾಂತಿಯಾಗುತ್ತಿದ್ದುದರಿಂದ ಅವುಗಳನ್ನು ತಿನ್ನುವುದನ್ನೂ ಬಿಟ್ಟ. ಅನಂತರ ಇತರ ಆಹಾರ ಪದಾರ್ಥಗಳನ್ನು ತಿಂದ ಬಳಿಕವೂ ವಾಂತಿಯಾಗ ಲಾರಂಭಿಸಿತು. ಇನ್ನೂ ಮುಂದೆ ಊಟದ ನಂತರವೂ ವಾಂತಿಯಾಗಲಾರಂಭಿಸಿತು. ಊಟ ಅಥವಾ ಉಪಾಹಾರದ ನಂತರ ನೀರನ್ನು ಕುಡಿದರೆ ಹೆಚ್ಚು ವಾಂತಿಯಾಗುತ್ತಿತ್ತು. ಹೀಗಾಗಿ ಏನೂ ದಕ್ಕುತ್ತಿರಲಿಲ್ಲ. ಪ್ರತಿದಿನವೂ ಕೃಶವಾಗುತ್ತಿರುವ ಮಗನನ್ನು ಕಂಡು ತಂದೆ–ತಾಯಿಗಳಿಗೆ ನಿರಂತರ ಚಿಂತೆ ಹಾಗೂ ಆತಂಕವಾಗುತ್ತಿತ್ತು. ಆಯುರ್ವೇದ, ಯುನಾನಿ, ಹೋಮಿಯೋಪತಿ ಮತ್ತು ಅಲೋಪತಿ ಎಲ್ಲಾ ವಿಧವಾದ ಔಷಧೋಪಚಾರಗಳಾದರೂ ಜಗ್ಗಲಿಲ್ಲ. ಅನಂತರ ದೇವರ ಮೊರೆ ಹೋದರೂ ಪೂಜೆ ಪುನಸ್ಕಾರಗಳನ್ನು ಮಾಡಿಸಿದರೂ ಯಂತ್ರಮಂತ್ರಗಳನ್ನು ಮಾಡಿಸಿದರೂ ಯಾವುದಕ್ಕೂ ಜಗ್ಗಲಿಲ್ಲ. ಎಲ್ಲಾ ವಿಧವಾದ ವೈದ್ಯಕೀಯ ಪರೀಕ್ಷೆಗಳನ್ನೂ ಮಾಡಿಸಿದರು. ಜಠರ, ಕರುಳು, ಪಿತ್ತಕೋಶ ಎಲ್ಲವೂ ಸರಿಯಾಗಿವೆ ಎಂದು ತಿಳಿದುಬಂದಿತ್ತು. ವಾಂತಿಯಾದ ಒಂದುಘಂಟೆಯ ನಂತರ ತುಂಬಾ ಆಯಾಸವಾಗಿ ಮಲಗಿಬಿಡುತ್ತಿದ್ದ. ಯಾವುದರಲ್ಲೂ ಆಸಕ್ತಿ ಇರಲಿಲ್ಲ. ಉಪಾಹಾರ ಮತ್ತು ಊಟದ ನಡುವಣ ಕಾಲದಲ್ಲಿ ಹಾಗೂ ಮಧ್ಯಾಹ್ನ ಮತ್ತು ರಾತ್ರಿ ಊಟದ ನಡುವಣ ಕಾಲದಲ್ಲಿ, ಒಂದೆರಡು ಘಂಟೆಗಳನಂತರ ಕಾಫಿ ಅಥವಾ ಟೀಯನ್ನು ಕುಡಿದರೆ ಮಾತ್ರ ಸ್ವಲ್ಪ ದಕ್ಕುತ್ತಿತ್ತು. ಅದೇ ಅವನ ಜೀವನಾಧಾರವಾಗಿತ್ತು. ಪ್ರತಿ ವರ್ಷ ಫೆಬ್ರುವರಿ ಮತ್ತು ಆಗಸ್ಟ್ ತಿಂಗಳುಗಳಲ್ಲಿ ವಿಪರೀತ ವಾಂತಿಯಾಗುತ್ತಿತ್ತು. ಈ ವಾಂತಿಯ ಫಲವಾಗಿ ಅವನ ಶರೀರದ ತೂಕ ಪ್ರತಿನಿತ್ಯ ಕಡಿಮೆಯಾಗುತ್ತಿದ್ದುದನ್ನು ಕಂಡು ಮನೆಯವರೆಲ್ಲರಿಗೂ ಆತಂಕವಾಗಿತ್ತು. ಆದರೆ ಮಾಡುವುದೇನೂ ಇರಲಿಲ್ಲ. ಮಾಡಬೇಕಾದುದನ್ನೆಲ್ಲಾ ಮಾಡಿ ಮುಗಿಸಿದ್ದರು.

ಈ ವಾಂತಿ ಕಾಯಿಲೆಯೇ ಅಲ್ಲದೆ, ಎದೆನೋವು, ನಡುಕ, ಮೈಕೈನೋವು, ವಿಷಣ್ಣತೆ, ತಲೆನೋವು, ಉದ್ವಿಗ್ನತೆ ಇತ್ಯಾದಿಗಳೂ ಕಾಡುತ್ತಿದ್ದವು. ಈ ಎಲ್ಲಾ ಚಿಹ್ನೆಗಳೂ ಮೇಲಿನ ಕಾಯಿಲೆಗೆ ಸಂಬಂಧಪಟ್ಟ ಉಪಕಾಯಿಲೆಗಳು ಎನ್ನಬಹುದು.

ಇವೆಲ್ಲಕ್ಕಿಂತ ಮಿಗಿಲಾಗಿ ಜನ್ಮದತ್ತವಾಗಿ ಬಂದ ಗುಣವಾಗದ"ಕತ್ತಲು ಕುರುಡುತನ ಅಥವಾ ಇರುಳು ಕುರುಡುತನ (Night Blindness), ಆತನನ್ನು ತೀರ ಅಧೀರನನ್ನಾಗಿ ಮಾಡಿತ್ತು. ಇದರ ಚಿಕಿತ್ಸೆಗಾಗಿ ಬೆಂಗಳೂರಿನ ನೇತ್ರ ತಜ್ಞರ ಸಲಹೆ ಮತ್ತು ಚಿಕಿತ್ಸೆ ಪ್ರಯೋಜನವಾಗಲಿಲ್ಲವೆಂದೂ ತಿಂಗಳಿಗೊಮ್ಮೆ ಹೈದರಾಬಾದಿನ ಒಬ್ಬ ನೇತ್ರ ಪರಿಣಿತರಲ್ಲಿಗೆ ಹೋಗಿ ಬರುತ್ತಿದ್ದ. ಅವರು ಚಿಕಿತ್ಸೆಯನ್ನು ನೀಡುತ್ತಿದ್ದರಾದರೂ ಇದು ಗುಣವಾಗದ ಕಾಯಿಲೆ, ಬರಬರುತ್ತಾ ಅಧಿಕವಾಗಿ ಪೂರ್ಣ ಅಂಧವಾಗುತ್ತೀಯೆ ಎಂದೂ ಸಹ ಹೇಳಿದ್ದರಂತೆ. ಪೂರ್ಣ ಕುರುಡನಾದರೆ ತನ್ನ ಭವಿಷ್ಯವೇ ಇಲ್ಲವಲ್ಲ ಎಂಬ ಆತಂಕ, ಹತಾಶೆ, ಆತನನ್ನು ಕಾಡುತ್ತಿದ್ದವು. ಅಷ್ಟರಲ್ಲಿ ತನ್ನೆಲ್ಲಾ ಆಶೋತ್ತರಗಳನ್ನು ಪೂರೈಸಿಕೊಳ್ಳಬೇಕೆಂಬ ಬಯಕೆ ದಿನಗಳೆದಂತೆ ಪ್ರಬಲವಾಗುತ್ತಿತ್ತು. ಆದರೆ ಅವನ ತಂದೆ ಕಾರಣಾಂತರಗಳಿಂದ ಅವಕಾಶ ಕೊಟ್ಟಿರಲಿಲ್ಲ. ಹೀಗಾಗಿ ಅವನಿಗೂ, ಅವನ ತಂದೆಗೂ ಘರ್ಷಣೆಗಳಾಗುತ್ತಿದ್ದವು. ವಿಧಿ ಇಲ್ಲದೆ ಹತಾಶನಾಗಿ ಸುಮ್ಮನಾಗುತ್ತಿದ್ದ ನಿತ್ಯಾನಂದ.

ನಿತ್ಯಾನಂದ ಮತ್ತು ಅವನ ತಂದೆತಾಯಿಗಳನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಸಂದರ್ಶನದಿಂದ ಪಡೆದ ದೀರ್ಘ ವಿವರಣೆ ಮತ್ತು ಟಿ. ಎ. ಟಿ (TAT) ಯಿಂದ ಸಂಗ್ರಹಿಸಿದ ವಿವರಣೆಗಳಿಂದ ಕಾಯಿಲೆಯ ಮೂಲ ಕಾರಣಗಳು ತಿಳಿದುಬಂದವು - "ಕಾಲಕ್ರಮೇಣ ತಾನು. ಪೂರ್ಣಅಂಧನಾಗುತ್ತೇನೆ ಎಂಬ ತೀವ್ರ ಭಯ ಕಾಡಲಾರಂಭಿಸಿತ್ತು. ಅಷ್ಟರಲ್ಲಿ ತಾನು ಕಾರನ್ನೂ ಕೊಂಡು ನಾನಾ ಸ್ಥಳಗಳಿಗೆ ಹೋಗಿ ಆನಂದಿಸಬೇಕು ಎಂಬ ಪ್ರಬಲ ಬಯಕೆ ಇತ್ತು. ಆದರೆ ತಂದೆ ನಾನಾ ನೆಪಗಳನ್ನು ಹೇಳಿ ಕಾರುಕೊಳ್ಳುವಿಕೆಯನ್ನು ಮುಂದೂಡುತ್ತಿದ್ದರು. ಈ ವಿಚಾರವಾಗಿ ತಂದೆ ಮಗನ ನಡುವೆ ಘರ್ಷಣೆಗಳಾಗುತ್ತಿದ್ದವು. ಅಂಗಡಿಯ ವ್ಯವಹಾರದಲ್ಲಿ ತಂದೆಗೆ ಮಗನ ವ್ಯವಹಾರದ ಬಗ್ಗೆ ವಿಶ್ವಾಸವಿರಲಿಲ್ಲ. ಯಾವ ವ್ಯವಹಾರ ಮಾಡಲೂ ಸ್ವಾತಂತ್ರ್ಯವಿರಲಿಲ್ಲ. ಪ್ರತಿಯೊಂದು ವ್ಯವಹಾರವನ್ನೂ ಇತರರ ಮುಂದೆಯೇ ಪರಿಶೀಲಿಸುತ್ತಿದ್ದರು. ಅವನ ತಪ್ಪನ್ನು ಎತ್ತಿ ತೋರಿಸುತ್ತಿದ್ದರು. ಇದರಿಂದ ನಿತ್ಯಾನಂದನಿಗೆ ಹತಾಶೆಯಾಗುತ್ತಿತ್ತು. ಕೋಪ ಬಂದು ಜಗಳವಾಡಬೇಕೆಂದೆನಿಸಿದರೂ ದಮನ ಮಾಡಿಕೊಳ್ಳುತ್ತಿದ್ದ. ಇವೆಲ್ಲವುಗಳ ಫಲವಾಗಿ "ಸಾವಿನ ಬಯಕೆ" ಮೊಳೆತು ಬೆಳೆಯಲಾರಂಭಿಸಿತು. ಹಲವಾರು ದಿನಗಳು ಮತ್ತು ತಿಂಗಳುಗಳ ನಂತರ ಅವನ ಸುಪ್ತ ಚೇತನ, ಕುಟುಂಬದ ಮೇಲೆ ಹತೋಟಿಯನ್ನು ಸಾಧಿಸಲು ತನ್ಮೂಲಕ ಬಯಕೆಗಳನ್ನು ಪೂರೈಸಿಕೊಳ್ಳಲು ಅವನಲ್ಲಿ ಮೊಳೆಯುತ್ತಿದ್ದ "ಸಾವಿನ ಬಯಕೆಯನ್ನು" ಬಳಸಿಕೊಂಡು

ನಿರಂತರ ವಾಂತಿಯ ರೂಪವನ್ನು ತಾಳಿತು.'' ಇದನ್ನು ಕಂಡ ತಂದೆ – ತಾಯಿಗಳು ಕಂಗಾಲಾಗಿ ಏನೆಲ್ಲಾ ತ್ಯಾಗ ಮಾಡಲು ಸಿದ್ಧರಾದರು. ಮಗನ ಬಯಕೆಗೆ ಮಣಿಯ ಲಾರಂಭಿಸಿದರು. ನಿತ್ಯಾನಂದನ ಗುರಿಯನ್ನು ಸಾಧಿಸಲು ಸುಪ್ತಚೇತನ ಒದಗಿಸಿದ, ಸಾವಿನ ಸಾಂಕೇತಿಕ ರೂಪವೇ ''ನಿರಂತರ ವಾಂತಿ''. ಇದನ್ನು ಆಂಗ್ಲಭಾಷೆಯಲ್ಲಿ ''ಹಿಸ್ಟಿರಿಕಲ್ ಅನೊರಕ್ಸಿಯ'' (Hysterical Anorexia) ಎನ್ನುತ್ತಾರೆ.

ನಿತ್ಯಾನಂದ ಬುದ್ಧಿವಂತನಾದುದರಿಂದ ಹಾಗೂ ಆತನಿಗೆ ಆತ್ಮ ವಿಶ್ಲೇಷಣಾ ಸಾಮರ್ಥ್ಯವಿದ್ದುದರಿಂದ ಹಾಗೂ ಅವನಿತ್ತ ಸಹಕಾರದಿಂದ ರೋಗದ ಮೂಲಕಾರಣವನ್ನೂ ಪತ್ತೆ ಹಚ್ಚಿ ಅರಿವು ಮಾಡಿಕೊಡಲಾಯ್ತು. ಅಂತೆಯೇ ತನ್ನ ಬಯಕೆಯನ್ನು ಪೂರೈಸಿಕೊಳ್ಳಲು ಅನುಸರಿಸುತ್ತಿರುವ ಮಾರ್ಗ ಸರಿಯಲ್ಲ ಎಂಬ ಅರಿವನ್ನು ಮೂಡಿಸಿ ಸಮರ್ಪಕ ಸಮಾಯೋಜನೆಗೆ ಪುನರ್ ಶಿಕ್ಷಣ ನೀಡಲಾಯ್ತು. ಇಷ್ಟೇ ಅಲ್ಲದೆ ತಂದೆ–ತಾಯಿಗಳಿಗೆ ಮಗನ ಸಮಸ್ಯೆಗೆ ತಾವೆಷ್ಟು ಕಾರಣರು? ಹೇಗೆ ಬಗೆಹರಿಸಿಕೊಳ್ಳಬೇಕು? ಎಂಬ ಬಗ್ಗೆ ಉಪಬೋಧೆಯನ್ನು (counselling) ಮಾಡಲಾಯ್ತು. ಈ ಎಲ್ಲಾ ಕ್ರಮಗಳ ಫಲವಾಗಿ ಸುಮಾರು ಐದನೆಯ ಭೇಟಿಯ ವೇಳೆಗೆ ಪೂರ್ಣವಾಗಿ ಚೇತರಿಸಿ ಕೊಂಡ. ಇಷ್ಟೇ ಅಲ್ಲದೆ ಅವನ ಮನಶಾಂತಿಗಾಗಿ ''ತನು-ಮನ'' ವಿಶ್ರಾಂತಿ ವಿಧಾನವನ್ನು ಕಲಿಸಿಕೊಡಲಾಯ್ತು. ಇವುಗಳ ಜೊತೆಗೆ ''ಇರುಳು ಅಂಧತೆಯ'' ಬಗ್ಗೆ ಅವನಲ್ಲಿದ್ದ ಭಯ ಮತ್ತು ನಿರಾಶಾಭಾವನೆಯನ್ನು ತೊಡೆದು ಹಾಕಿ ಆಶಾಭಾವನೆಯನ್ನು ಮಾಡಿಸಲಾಯ್ತು. ಈ ಎಲ್ಲಾ ಕ್ರಮಗಳ ಆಚರಣೆಯ ಫಲವಾಗಿ ಆತನ ''ನಿರಂತರ ವಾಂತಿ'' ಪರಿಹಾರವಾಗಿ ಯಾವ ತೊಂದರೆಯೂ ಇಲ್ಲದೆ ಆಹಾರವನ್ನೂ ಸೇವಿಸಲಾರಂಭಿಸಿದ. ಅದಕ್ಕೆ ಸಂಬಂಧಿಸಿದ ಇತರ ಸಮಸ್ಯೆಗಳೂ ಪರಿಹಾರವಾದವು. ಇಷ್ಟೇ ಅಲ್ಲದೆ ಇರುಳು ಅಂಧತೆಯ ಬಗೆಗಿನ ಭಯವೂ ಪರಿಹಾರವಾಗಿ, ಕಾರನ್ನು ಸುಮಾರು ಆರುವರ್ಷದಿಂದಲೂ ಚಾಲನೆ ಮಾಡುತ್ತಿದ್ದಾನೆ. ವಿವಾಹವಾಗಿ ಒಂದು ಮಗುವಿನ ತಂದೆಯಾಗಿ ದಾಂಪತ್ಯ ಜೀವನ ನಡೆಸುತ್ತಿದ್ದಾನೆ. ಇರುಳು ಅಂಧತ್ವ ವ್ಯಾಪಕವಾಗಿಲ್ಲ. ಹಿಂದಿನಂತೆ ಮಿತಿಯಲ್ಲೇ ಇದೆ. ಆಗಾಗ ಬಂದು ನನ್ನನ್ನು ಭೇಟಿಯಾಗುತ್ತಾನೆ.

೧೯೯೭ ಮಾರ್ಚ್ ೭ ರಂದು ಒಂದು ಪತ್ರ ಬಂದಿತು. ಯಾವುದೋ ಒಂದು ಬ್ಯಾಂಕಿನ ಉದ್ಯೋಗಸ್ಥ ಮಹಿಳೆ ತನ್ನ ೮ ವರ್ಷದ ಮಗನ ವಿಚಿತ್ರ ಹಾಗೂ ಅಸಹ್ಯಕರ ಲೈಂಗಿಕ ಬಯಕೆಯನ್ನು ನಿವೇದಿಸಿಕೊಂಡು ಸುಧಾ ಸಾಪ್ತಾಹಿಕದ ಮೂಲಕ ಪರಿಹಾರವನ್ನು ಕೋರಿದ್ದಳು. ಮಗನ ಅಸಹ್ಯ ಬಯಕೆ ನಾಚಿಕೆಗೇಡಿನದಾದುದರಿಂದ ತನ್ನ ವಿಳಾಸವನ್ನು ಬರೆದಿರಲಿಲ್ಲ.

ಆಕೆಗೆ ೨೩ನೆಯ ವಯಸ್ಸಿನಲ್ಲಿ ವಿವಾಹವಾಗಿ ಮೂರು ವರ್ಷಗಳನಂತರ ಈ ಮಗುವಿನ ಜನನವಾಯ್ತು. ಮಗು ಹುಟ್ಟಿದ ಒಂದು ವರ್ಷದನಂತರ ಪತಿ ತೀರಿಕೊಂಡನಂತೆ. ಪತ್ರ ಬರೆದಾಗ ಆಕೆಗೆ ೩೪ ವರ್ಷ ವಯಸ್ಸು ಮಗನಿಗೆ ೮ ವರ್ಷ.

ಜನೆಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ವಿಧವೆಯಾಗಿಯೇ ಉಳಿದ ಆಕೆ ಮಗನಿಗೆ ತಾಯಿಯಾಗಿ ತಂದೆಯಾಗಿ ಯಾವುದಕ್ಕೂ ಕೊರತೆಯಿಲ್ಲದಂತೆ ಅತಿ ಮುದ್ದಿನಿಂದ ಸಾಕುತ್ತಿದ್ದಳು. ಪ್ರೀತಿ ವಾತ್ಸಲ್ಯಗಳಿಗೆ ಮಿತಿಯಿರಲಿಲ್ಲ. ಈ ಮಗನೇ ಪ್ರೀತಿವಾತ್ಸಲ್ಯಗಳ ಕೇಂದ್ರವಾದುದರಿಂದ ಅವನು ಬಯಸಿದುದನೆಲ್ಲಾ ತಕ್ಷಣ ಪೂರೈಸುತ್ತಿದ್ದಳು. ಯಾವುದೇ ಕಾರಣದಿಂದ ಪೂರೈಸುವುದು ತಡವಾದರೆ ರಂಪ ಮಾಡುತ್ತಿದ್ದ. ಮನೆಯಲ್ಲಿದ್ದವರು ಆಕೆ ಮತ್ತು ಆಕೆಯ ಮಗ ಇಬ್ಬರೇ. ಮನೆಗೆಲಸದಾಕೆ ಬೆಳಗ್ಗೆ ಸಂಜೆ ಬಂದು ಕೆಲಸ ಮುಗಿಸಿ ಹೊರಟು ಹೋಗುತ್ತಿದ್ದಳು. ಮಗನ ಶಾಲೆ ಆಕೆ ಹೋಗುತ್ತಿದ್ದ ಬ್ಯಾಂಕ್‌ಗೆ ದಾರಿಯಲ್ಲೇ ಇದ್ದುದರಿಂದ, ಮಗನನ್ನು ಅಲ್ಲಿ ಬಿಟ್ಟು ಹೋಗುತ್ತಿದ್ದಳು.

ಮಗನ ಶಾಲೆ ೪ ಘಂಟೆಗೆ ಮುಗಿದು ಹೋಗುತ್ತಿದ್ದುದರಿಂದ ತಾಯಿ ಹಿಂತಿರುಗುವ ಮುಂಚೆಯೇ ಮನೆಗೆ ಬಂದು ಕಾಯುತ್ತಿದ್ದ. ಕೆಲಸದಾಕೆ ಮನೆಗೆಲಸ ಮಾಡಿ ಮುಗಿಸಿ ಹಿಂದಿರುಗುತ್ತಿದ್ದಳು. ಆಕೆ ಮನೆಗೆ ಹಿಂದಿರುಗಿದ ತಕ್ಷಣ, ತನಗಾಗಿ ಎದುರು ನೋಡುತ್ತಿದ್ದ ಮಗನನ್ನು ತಬ್ಬಿ ಮುದ್ದಾಡಿ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಶಾಲೆಯಲ್ಲಿಯ ಸಾಹಸಗಳನ್ನು ಕೇಳಿ, ತಿಂಡಿ ತಿನಿಸುಗಳನ್ನು ಕೊಟ್ಟು ಮಲಗುವ ಕೊಠಡಿಗೆ ಹೋಗಿ ಉಡುಪುಗಳನ್ನು ಬದಲಿಸಿ ದೈನಂದಿನ ಕೆಲಸ ಕಾರ್ಯಗಳಲ್ಲಿ ತೊಡಗುತ್ತಿದ್ದಳು. ಮಗ ತಿಂಡಿಯನ್ನು ತಿಂದನಂತರ ಹೊರಹೋಗಿ ನೆರೆಹೊರೆಯ ಬಾಲಕರೊಡನೆ ಆಟವಾಡಿ ೭ ಘಂಟೆಗೆ ಹಿಂತಿರುಗುತ್ತಿದ್ದ. ಆ ವೇಳೆಗೆ ಮನೆಗೆಲಸವನ್ನು ಮುಗಿಸಿ ಮಗನೊಡನೆ ಕುಳಿತು ಅಂದಿನ ಪಾಠ ಪ್ರವಚನಗಳಿಗೆ ಗಮನವೀಯುತ್ತಿದ್ದಳು.

ಒಂದು ದಿನ ಸಂಜೆ ಕಾರಣಾಂತರಗಳಿಂದ ೪ ಘಂಟೆಗೆ ಹಿಂತಿರುಗಿದವಳು, ಮನೆಯ ಕೆಲಸದಾಕೆ ಬಾಗಿಲು ತೆಗೆದು ಕೆಲಸ ಮಾಡುತ್ತಿದ್ದುದರಿಂದ, ಕೊಠಡಿಗೆ ಅಗಳಿ ಹಾಕದೆ, ಉಡುಪುಗಳನ್ನು ಬದಲಿಸುತ್ತಿದ್ದಳು. ಮಗ ಇನ್ನೂ ಶಾಲೆಯಿಂದ ಹಿಂದಿರುಗಿರಲಿಲ್ಲ. ಮನೆಗೆಲಸದಾಕೆ ಕೆಲಸ ಮುಗಿಸಿ ಪಕ್ಕದ ಮನೆಯ ಕೆಲಸಕ್ಕೆ ಹೋಗಿದ್ದಳು. ಮನೆಯ ಮುಂಬಾಗಿಲು ಮುಚ್ಚಿತ್ತೇ ವಿನಾ ಅಗಳಿ ಹಾಕಿರಲಿಲ್ಲ. ಮಗ ಶಾಲೆಯಿಂದ ಬಂದವನು ಶೂ ವನ್ನು ಕಳಚಿ, ಪುಸ್ತಕದ ಬ್ಯಾಗನ್ನು ಒಂದೆಡೆ ಇಟ್ಟು ತಾಯಿಯನ್ನು ಅರಸುತ್ತಾ ಅಮ್ಮನ ಕೊಠಡಿಗೆ ಪ್ರವೇಶಿಸಿದ. ಅಗಳಿ ಹಾಕದೆ ಉಡುಪುಗಳನ್ನು ಬದಲಿಸುತ್ತಿದ್ದ ತಾಯಿಯ ಅರೆನಗ್ನ ದೇಹವನ್ನು ಆಶ್ಚರ್ಯದಿಂದ ನೋಡುತ್ತಾ ನಿಂತ. ಮಗನ ಅನಿರೀಕ್ಷಿತ ಆಗಮನ ಮತ್ತು ಅವನ ಆಶ್ಚರ್ಯಪೂರಿತ ನೋಟ ಆಕೆಯಲ್ಲಿ ದಿಗ್ಭ್ರಮೆಯುಂಟುಮಾಡಿತಾದರೂ, ಏನನ್ನೂ ತೋರಗೊಡದೆ, ಅರೆನಗ್ನಾವಸ್ಥೆಯಲ್ಲೇ, ಆತನನ್ನು ತಬ್ಬಿ, ಮುದ್ದಾಡಿ, ತೊಡೆಯ ಮೇಲೆ ಕೂರಿಸಿಕೊಂಡು, ಅಂದಿನ ಶಾಲೆಯ ಸಾಹಸಗಳನ್ನು ಕೇಳಲಾರಂಭಿಸಿದಳು.

ಯಾವುದರ ಕಡೆ ಮಗನ ನೋಟ ಹರಿಯಬಾರದೆಂದು ಬಯಸಿದ್ದಳೋ ಅದಕ್ಕೆ

ವಿರುದ್ಧವಾಗಿ ಆ ಕಡೆಗೇ ಹರಿದಿತ್ತು. ಬೆತ್ತಲೆಯಾಗಿ ತಾಯಿಯ ಸ್ತನಗಳನ್ನು ಕುತೂಹಲದಿಂದ ನೋಡುತ್ತಾ "ಮಮ್ಮಿ ಎದೆಯ ಮೇಲೆ ಉಬ್ಬಿಕೊಂಡಿರುವ ಇವೆರಡೂ ಏನು? ನನಗೇಕೆ ಇಲ್ಲವಲ್ಲಾ ಎಂದು ಕೇಳಿದ?" ಅನಿರೀಕ್ಷಿತವಾಗಿ ಕಂಡ ಹೊಸ ವಸ್ತುಗಳ ಬಗ್ಗೆ, ನೋಡಿ ಕೇಳಿ ತಿಳಿದುಕೊಳ್ಳುವ ಕುತೂಹಲ ಮಕ್ಕಳಿಗೆ ಸಹಜವಾದುದು. ಅವರ ಕುತೂಹಲವನ್ನು ಸೂಕ್ತ ವಿವರಣೆಯಿಂದ ತಣಿಸುವುದು ತಂದೆ-ತಾಯಿಗಳ ಅಥವಾ ಪೋಷಕರ ಕರ್ತವ್ಯ. ಯಾವುದೇ ಕಾರಣದಿಂದ ಹೆದರಿಸಿಗದರಿಸಿ ಬಾಯಿಮುಚ್ಚಿಸಿದರೆ ಅವರ ಕುತೂಹಲ ಮತ್ತಷ್ಟು ಪ್ರಬಲವಾಗಿ ಮತ್ತಾವುದಾದರೂ ರೀತಿಯಲ್ಲಿ ತಣಿಸಿಕೊಳ್ಳುತ್ತಾರೆ. ಈ ಕುತೂಹಲ ಮಕ್ಕಳ "ಸಹ ಪ್ರೇರಣೆ" ಜನ್ಮದತ್ತವಾಗಿ ಬಂದುದು. ಇದು ಪರಿಸರದ ಅಥವಾ ಪ್ರಪಂಚದ ಅರಿವನ್ನು ಪಡೆಯಲು ಸಹಜ ಮಾರ್ಗಗಳಲ್ಲಿ ಒಂದು. ಆದರೆ ಅವನ ಕುತೂಹಲ ನೋಟ ಮತ್ತು ಕೇಳಿದ ಪ್ರಶ್ನೆಗಳಿಂದ ಏನು ಮಾಡಬೇಕೆಂಬುದು ತೋಚದೆ ನಾಚಿಕೆಯಿಂದ ಸ್ವಲ್ಪಕಾಲ ಮೌನವಾಗಿ, ದಿಕ್ಕುತೋಚದೆ, ಅನಂತರ ಚೇತರಿಸಿ ಕೊಂಡು ಅವನ ಪ್ರಶ್ನೆಗಳಿಗೆ ಉತ್ತರ ನೀಡುವ ಬದಲು, ಮಗನ ಗಮನವನ್ನು ಬೇರೆಡೆಗೆ ಸೆಳೆಯುವ ಸಲುವಾಗಿ "ಅವೆಲ್ಲವನ್ನೂ ಮಕ್ಕಳು ಕೇಳಬಾರದು, ಶಾಲಾ ಉಡುಪುಗಳನ್ನು ಬದಲಿಸಿ ಕೈಕಾಲುಗಳನ್ನು ತೊಳೆದುಕೊಂಡು ಬಾ, ತಿಂಡಿ ತಿಂದು ಆಟವಾಡಲು ಹೋಗುವೆಯಂತೆ" ಎಂದು ಹೇಳಿ ಮಗನನ್ನು ತೊಡೆಯ ಮೇಲಿಂದಿಳಿಸಿ, ಹತ್ತಿರವಿದ್ದ ಸೀರೆಯಿಂದ ಮೈ ಮುಚ್ಚಿಕೊಂಡಳು.

ತಂದೆಯಿಲ್ಲದ ತಬ್ಬಲಿ ಎಂದು ಅತಿಮುದ್ದಿಗೊಳಗಾಗಿದ್ದ ಈ ಹಟಮಾರಿ ಬಾಲಕ, ತಾಯಿಯ ಮಾತನ್ನೂ ಕೇಳದೆ, "ಮೊದಲು ನನ್ನ ಪ್ರಶ್ನೆಗೆ ಉತ್ತರ ಕೊಡು, ಅನಂತರ ಹೋಗುತ್ತೇನೆ" ಎಂದು ಹಟ ಮಾಡಿದ. ಅವನ ಸ್ವಭಾವವನ್ನರಿತ ತಾಯಿ, ಹೊರ ಹಾಕುವ ಸಲುವಾಗಿ "ಇವು ತಾಯಿಯ ಸ್ತನಗಳು" ಎಂದು ಹೇಳಿ ಕೊಠಡಿಯಿಂದ ಹೊರಗಟ್ಟಿ ಬಾಗಿಲು ಮುಚ್ಚಿ, ಅಗಳಿಹಾಕಿ, ಬೇಗ ಬೇಗ ಉಡುಪುಗಳನ್ನು ಹಾಕಿಕೊಂಡು ಹೊರ ಬಂದಳು. ಈ ಅನಿರೀಕ್ಷಿತ ಘಟನೆಯಿಂದ ಚೇತರಿಸಿಕೊಳ್ಳಲು ಸ್ವಲ್ಪಕಾಲ ಬೇಕಾಯ್ತು. ತಿಂಡಿ ತಿಂದು, ಆಟವಾಡಲು ಹೋದ ಮಗ, ಮಲಗುವವರೆಗೂ ಆ ಪ್ರಶ್ನೆಗಳನ್ನು ಕೇಳದುದರಿಂದ ಸಮಾಧಾನಪಟ್ಟುಕೊಂಡಳಾದರೂ ಆ ಸಮಸ್ಯೆ ಅಲ್ಲಿಗೇ ಮುಗಿಯಲಿಲ್ಲ.

ಮಾರನೆಯ ದಿನ ಶನಿವಾರವಾದುದರಿಂದ ಮಗ ಶಾಲೆಯಿಂದ ಮತ್ತು ತಾಯಿ ಬ್ಯಾಂಕಿನಿಂದ ಜೊತೆಯಾಗಿ ಮನೆಗ ಹಿಂತಿರುಗಿದರು. ಎಂದಿನಂತೆ ತಾಯಿ ಉಡುಪುಗಳನ್ನು ಬದಲಿಸಲು ಕೊಠಡಿಯ ಬಾಗಿಲು ಹಾಕಿಕೊಳ್ಳಲು ಹೋದಾಗ ಮಗ ತಾನೂ ಒಳಗೆ ಬರುತ್ತೇನೆಂದು ಹಠ ಮಾಡಿದ. ನಾನು ಉಡುಪುಗಳನ್ನು ಬದಲಿಸಬೇಕು ನೀನು ಒಳಗೆ ಬರಬಾರದು ಎಂದು ಎಷ್ಟು ಹೇಳಿದರೂ "ಮಮ್ಮಿ ನಾನು ನಿನ್ನ ಸ್ತನಗಳನ್ನು ನೋಡಬೇಕು, ಹಿಡಿದು ಹಿಸುಕಬೇಕು" ಎಂದು ಹಠಮಾಡಿದ. ಅವನ ವಿಚಿತ್ರ

ಬಯಕೆಯನ್ನು ಕೇಳಿ ಸಿಡಿಲು ಬಡಿದಂತಾಯ್ತು, ಹೇಸಿಗೆಯಾಯ್ತು. ವಿಧಿಯಿಲ್ಲದೆ ಒಳಕ್ಕೆ ಕರೆದುಕೊಂಡು ಬಾಗಿಲನ್ನು ಮುಚ್ಚಿ, ಅಗಳಿ ಹಾಕಿಕೊಂಡು, ಉಡುಪುಗಳನ್ನು ಬದಲಿಸ ಲಾರಂಭಿಸಿದಳು. ಅವನು ಹಿಂದಿನ ದಿನದಂತೆ ಅಂದೂ ಸಹ ತನ್ನ ಅಸಹ್ಯ ವರ್ತನೆಯನ್ನು ತೋರಿದ. ಇಷ್ಟೇ ಅಲ್ಲದೆ ಅಂದಿನಿಂದ ಮೂರು ನಾಲ್ಕುದಿನಗಳು ಐದು ಬಾರಿ " ಮಮ್ಮಿ ನಿನ್ನ ಸ್ತನಗಳನ್ನು ತೆಗೆದು ತೋರಿಸು ಮುಟ್ಟಿ ಹಿಸುಕಬೇಕು" ಎಂದು ಒತ್ತಾಯ ಮಾಡುತ್ತಿದ್ದನಂತೆ" ವಿಧಿಯಿಲ್ಲದೆ ಆಕೆ ಮಣಿದುದ್ದೂ ಉಂಟು.

ಮಗನ ಈ ಅಸಭ್ಯ, ಅಸಹ್ಯವರ್ತನೆ ಸಾಮಾನ್ಯವಲ್ಲ ಎಂಬುದು ಆಕೆಗೆ ಮನವರಿಕೆ ಯಾಗಿತ್ತು. ಈ ವಿಚಾರವಾಗಿ, ಚಿಂತೆ, ದುಃಖ, ಕೋಪ ಇತ್ಯಾದಿಗಳು ಕಾಡಲಾರಂಭಿಸಿದ್ದವು. ಮಗನನ್ನು ಹೊಡೆದು ಬಿಡಿಸಲೆ ? ಬೈಯ್ಯಲೇ ? ಗದರಿಸಲೆ ? ಅಥವಾ ಬೇಡವೆಂದು ವಿನಯದಿಂದ ಹೇಳಲೆ ? ಅದನ್ನು ಹೇಗೆ ತಪ್ಪಿಸಬೇಕು ಎಂಬ ಸಮಸ್ಯೆ ಸದಾ ಕಾಡುತ್ತಿತ್ತು. ಅವನ ಈ ವರ್ತನೆ ನುಂಗಲಾರದ ತುತ್ತಾಗಿತ್ತು. ತನ್ನ ನೋವನ್ನು ಸ್ನೇಹಿತೆಯರಲ್ಲಿ ಹಂಚಿಕೊಳ್ಳಲು ನಾಚಿಕಿಯಾಗುತ್ತಿತ್ತು. ಇಷ್ಟಾದರೂ ಮಗನ ಬಗೆಗಿನ ಪ್ರೀತಿ, ವಾತ್ಸಲ್ಯ, ಮಮತೆ, ಮಮಕಾರಗಳು ಆಕೆಯನ್ನು ಅಸಹಾಯಕಳನ್ನಾಗಿ ಮಾಡಿದ್ದವು.

ಭಾನುವಾರ ಹೇಗೋ ಕಳೆಯಿತು. ಸೋಮವಾರದಿಂದ ಅವನ ಒತ್ತಾಯ, ಹಟ, ಇತ್ಯಾದಿಗಳು ಮಿತಿ ಮೀರುತ್ತಾ ಬಂದವು. ಸಂಜೆ ಶಾಲೆಯಿಂದ ಹಿಂದಿರುಗಿದನಂತರ ಅದೇ ರೀತಿ ಒತ್ತಾಯ ಮಾಡುತ್ತಿದ್ದ. ಮಣಿಯದಿದ್ದರೆ ಕೈಗೆ ಸಿಕ್ಕ ವಸ್ತುಗಳನ್ನು ಎತ್ತಿ ಬಿಸಾಡುವುದು, ಪುಸ್ತಕವನ್ನು ಹರಿಯುವುದು, ನೆಲಕ್ಕೆ ಬಿದ್ದು ಹೊರಳಾಡುವುದು, ತೋರಿ ಸುವವರೆಗೂ ಊಟ ಮಾಡುವುದಿಲ್ಲ, ತಿಂಡಿತಿನ್ನುವುದಿಲ್ಲವೆಂದು ರಂಪ ಮಾಡುವುದು ಅತಿಯಾಗುತ್ತಾ ಬಂದವು. ಅವನ ಅರೆಹುಚ್ಚುತನವನ್ನು ಕಂಡು, ಭಯದಿಂದ ಮಣಿದು ಕೊಠಡಿಗೆ ಕರೆದೊಯ್ದು, ಬಾಗಿಲು ಮುಚ್ಚಿ ಕುಪ್ಪಸ ಮತ್ತು ಬ್ರಾಗಳನ್ನು ಕಳಚಿ ಸ್ತನಗಳನ್ನು ತೋರಿಸುತ್ತಿದ್ದಳು. ತಾಯಿಯ ಸ್ತನಗಳನ್ನು ಕಂಡಾಗ ಮಗನ ಮುಖವರಳಿ, ಅವುಗಳನ್ನು ಮುಟ್ಟಿ, ಹಿಸುಕಿದನಂತರವೇ ಅವನಿಗೆ ಸಮಾಧಾನವಾಗುತ್ತಿತ್ತು. ಇದೇ ಕಡೆಯ ಬಾರಿ ಮತ್ತೇ ಕೇಳಬೇಡ ಎಂದು ಹೇಳಿದಾಗ ತನ್ನ ಮೌನಸಮ್ಮತಿಯನ್ನು ವ್ಯಕ್ತಪಡಿಸಿದರೂ ಮಾರನೆಯದಿನ ಮತ್ತೆ ಅದೇ ಬಯಕೆ, ಹಠ, ರಂಪ ಇತ್ಯಾದಿಗಳನ್ನು ವ್ಯಕ್ತಪಡಿಸುತ್ತಿದ್ದ.

ಕಾಲ ಉರುಳಿದಂತೆ ಅವನ ಈ ವಿಚಿತ್ರ ಹಾಗೂ ಅಸಹ್ಯಕರ ಬಯಕೆ ಪ್ರಬಲ ವಾಗುತ್ತಾ ಬಂದಿತು. ಈಗಂತೂ ಪ್ರತಿನಿತ್ಯ ಸ್ತನಗಳನ್ನು ತೋರಿಸು, ಮುಟ್ಟಿಹಿಸುಕ ಬೇಕು ಎಂದು ಹಠ ಮಾಡುತ್ತಾನೆ. ತೋರಿಸದಿದ್ದರೆ ಏನು ಮಾಡಬೇಕೆಂಬುದು ನನಗೆ ಗೊತ್ತು ಎಂದು ಬೆದರಿಸುತ್ತಾನೆ. ಇದನ್ನು ಬಿಡಿಸುವುದು ಹೇಗೆ ಎಂಬುದು ಪರಿಹರಿಸಲಾಗದ ಸಮಸ್ಯೆಯಾಗಿದೆ. ಈ ವಯಸ್ಸಿನಲ್ಲೇ ಸ್ತನಗಳನ್ನು ನೋಡಬೇಕು, ಮುಟ್ಟಬೇಕು, ಹಿಸುಕಬೇಕು ಎಂಬ ಪ್ರಬಲ ಬಯಕೆ ಇರುವವನು ಮುಂದೇನು

ಮಾಡುವನೋ ಎಂಬ ಚಿಂತೆ, ಆತಂಕ ಕಾಡುತ್ತಿದೆ. ತಾನು ತೋರಿಸದಿದ್ದರೆ ಮನೆ ಕೆಲಸದಾಕೆಯನ್ನೋ ಅಥವಾ ಶಾಲಾ ಉಪಾಧ್ಯಾಯಿನಿಯನ್ನೋ ಅಥವಾ ಮನೆಗೆ ಬಂದ ಸ್ತ್ರೀ ಅತಿಥಿಗಳು ಅಥವಾ ಸ್ನೇಹಿತೆಯರನ್ನೋ, ನಿಮ್ಮ ಸ್ತನಗಳನ್ನು ತೋರಿಸಿ, ಮುಟ್ಟಿ ಹಿಸುಕಬೇಕೆಂದು ಒತ್ತಾಯ ಮಾಡಿದರೆ ಗತಿ ಏನು ? ಎಂಥ ಅನಾಹುತವಾಗುತ್ತದೆ ಎಂಬ ಭಯ ಕಾಡುತ್ತಿದೆ ಎಂದು ತನ್ನ ಅಳಲನ್ನ ತೋಡಿಕೊಂಡು ಪರಿಹಾರ ಕೋರಿದ್ದಳು. ತನಗಾಗುತ್ತಿರುವ ಅಸಹ್ಯಕರ ಅನುಭವ ಮತ್ತಾವ ತಾಯಿಗೂ ಆಗದಿರಲಿ ಎಂಬುದು ಆಕೆಯ ಆಶಯ. ಈ ತನ್ನ ಸಮಸ್ಯೆಯ ಪರಿಹಾರವನ್ನು "ಸುಧಾ" ಮೂಲಕ ಸೂಚಿಸಿ ಎಂದು ಕೇಳಿದ್ದಾಳೆ ವಿನಾ ತನ್ನ ವಿಳಾಸವನ್ನು ತಿಳಿಸಿರಲಿಲ್ಲ.

ಯಾವುದಾದರೂ ಒಂದು ಹೊಸ ವಸ್ತುವನ್ನು ಕಂಡಾಗ ಅಥವಾ ಹೊಸ ಸ್ಥಳಕ್ಕೆ ಹೋದಾಗ ಪ್ರತಿಯೊಂದನ್ನೂ ಮುಟ್ಟಿ ನೋಡಿ, ಮುರಿದು ನೋಡಿ ಅಥವಾ ಹಲವಾರು ಪ್ರಶ್ನೆಗಳನ್ನು ಕೇಳಿ ತಿಳಿದುಕೊಳ್ಳಬಯಸುವುದು ಮಕ್ಕಳ ಸರ್ವೇ ಸಾಮಾನ್ಯ ಬಯಕೆ. ಇದನ್ನೇ "ಕುತೂಹಲವೆನ್ನುತ್ತಾರೆ". ಇದೊಂದು ಜನ್ಮದತ್ತವಾಗಿ ಬಂದ "ಸಹಜ ಪ್ರೇರಣೆ". ಇದನ್ನು ತಂದೆ – ತಾಯಿಗಳು, ಉಪಾಧ್ಯಾಯರು ತಣಿಸಬೇಕು, ತುಳಿದು ದಮನ ಮಾಡಬಾರದು. ಈ ಪ್ರೇರಣೆಯ ಕಾರ್ಯಾಚರಣೆಯಿಂದಲೇ ಪರಿಸರದ ಅಥವಾ ಪ್ರಪಂಚದ ಅರಿವುಂಟಾಗುವುದು. ಅನೇಕ ವೈಜ್ಞಾನಿಕ ಮತ್ತು ತಾಂತ್ರಿಕ ಸಾಧನೆಗಳಾ ಗುತ್ತಿರುವುದು ಈ ಪ್ರೇರಣೆಯ ಫಲವೆನ್ನಬಹುದು.

ನೂತನ ವಸ್ತುವಿನ ಬಗ್ಗೆ ಕೇಳಿ ತಿಳಿದುಕೊಳ್ಳುವುದು, ಮುಟ್ಟಿ, ಮುರಿದು ಅಥವಾ ಹರಿದು ತಿಳಿದುಕೊಳ್ಳುವುದು ಸಹಜ ಸಾಮಾನ್ಯವಾದರೂ ೯ ವರ್ಷದ ಈ ಬಾಲಕನ ಪ್ರಬಲ ಬಯಕೆ ಮತ್ತು ಮುಂದುವರಿಕೆ, "ಅಕಾಲ ಯೌವ್ವನದ" ಫಲವೆನ್ನಬಹುದು (Pubenty precox). ಹರೆಯಕ್ಕೆ ಮುಂಚೆ ಪಿಟ್ಯೂಟರಿ ಗ್ರಂಥಿ ಮತ್ತು ಲಿಂಗ ಗ್ರಂಥಿಗಳ ಅನ್ಯೋನ್ಯಕ್ರಿಯೆಯಲ್ಲಿ ಏರುಪೇರಾದರೆ ಈ ವಿಚಿತ್ರ ಅಥವಾ ಅಪಸಾಮ್ಯ ಬಯಕೆ ಕಾಣಿಸಿಕೊಳ್ಳುತ್ತದೆ. ಈ ವೈಪರೀತ್ಯಕ್ಕೆ ಒಳಗಾಗಿರುವ ಬಾಲಕ ಬಾಲಕಿಯರು ಶಾರೀರಿಕ ಬೆಳವಣಿಗೆಯಲ್ಲಿ ಇತರ ಸಮ ವಯಸ್ಕರಂತೆ ಕಾಣಿಸಿಕೊಂಡರೂ, ಲಿಂಗಗ್ರಂಥಿಗಳು ಮಾತ್ರ "ಅಂಡಕೋಶಗಳನ್ನು" ಉತ್ಪತ್ತಿ ಮಾಡುತ್ತವೆ. ಅಲ್ಲದೆ ಪಿಟ್ಯೂಟರಿ ಗ್ರಂಥಿಯ ಗೊನೆಡೋ ಟ್ರೋಫಿಕ್ (Gonedo trophic hormone) ಅಂತಃಸ್ರಾವ ಹರೆಯಕ್ಕೆ ಮುಂಚೆಯೇ ಅಧಿಕ ಪ್ರಮಾಣದಲ್ಲಿ ಉತ್ಪತ್ತಿಯಾಗುವುದರಿಂದ ಈ ಅಕಾಲಿಕ ಬಯಕೆ ಮತ್ತು ವರ್ತನೆ ಕಾಣಿಸಿಕೊಳ್ಳುತ್ತದೆ. ಪರಿಹಾರಕ್ಕೆ ಅಂತಃಸ್ರಾವ ಗ್ರಂಥಿ ತಜ್ಞರ ಸಲಹೆಯನ್ನು ಪಡೆಯುವುದು ಸೂಕ್ತವೆನ್ನಬಹುದು.

ಸಿಗ್ಮಂಡ್ ಫ್ರಾಯ್ಡ್‌ನ ಪ್ರಕಾರ ಈ ಬಾಲಕನ ಪ್ರಬಲ ಬಯಕೆಯನ್ನು "ಮಾತೃಗಾಮಿ ಬಯಕೆ" ಎನ್ನಬಹುದು (Oedipus complex) ಫ್ರಾಯ್ಡ್‌ನ ಪ್ರಕಾರ ೩ ರಿಂದ ೬ ವರ್ಷ ವಯಸ್ಸಿನ ಅವಧಿಯಲ್ಲಿ ಗಂಡು ಮಗುವಿಗೆ ತನ್ನ ತಂದೆ–ತಾಯಿಗಳ

ಪೈಕಿ ತಾಯಿಯ ಬಗ್ಗೆ ಕಾಮವೂ, ತಂದೆಯ ಬಗ್ಗೆ ದ್ವೇಷವೂ ಮೂಡುತ್ತದೆ. ಕಾಲಕ್ರಮೇಣ ತಂದೆ ದೊಡ್ಡವನು, ಶಕ್ತಿವಂತ, ಅವನೊಡನೆ ಸ್ಪರ್ಧಿಸುವುದು ಅಪಾಯಕಾರಿ ದಂಡನೆಯನ್ನು ಅನುಭವಿಸಬೇಕಾಗುತ್ತದೆ (castration complex) ಎಂಬ ಭಯದಿಂದ, ಸ್ಪರ್ಧೆ, ಕಳಚಿಹೋಗಿ, ದ್ವೇಷ ಗೌರವವಾಗಿ ಪರಿಸಮಾಪ್ತಿಗೊಳ್ಳುತ್ತದೆ. ಈ ಬಯಕೆ ಪರಿವರ್ತನೆಗೊಳ್ಳದೆ ಹಾಗೆಯೇ ಮುಂದುವರಿದರೆ ಅವನ (ಮನೋ ರೋಗಕ್ಕೆ) ನಾಂದಿಯಾಗುತ್ತದೆ ಎಂಬುದು ಫ್ರಾಯ್ಡ್‌ನ ಅಭಿಪ್ರಾಯ. ಫ್ರಾಯ್ಡ್‌ನ ಈ ಸಿದ್ಧಾಂತವನ್ನು ಅನೇಕ ಮಂದಿ ಮನೋವಿಶ್ಲೇಷಣಕಾರರು ವಿರೋಧಿಸಿದರೂ ನನ್ನಲ್ಲಿಗೆ ಬಂದ ಕೆಲವು ಮಂದಿ ಮನೋರೋಗಿಗಳಲ್ಲಿ ಈ ಮಾತೃಗಾಮಿತ್ವವನ್ನು ಗುರುತಿಸಿದ್ದೇನೆ. ಈ ಅಸಹಜ ಬಯಕೆಯ ಪರಿಹಾರವೆಂದರೆ ಬಾಲಕನಿಗೆ ವಸ್ತುನಿಷ್ಠ ರೀತಿಯಲ್ಲಿ ಲೈಂಗಿಕ ಶಿಕ್ಷಣವನ್ನು ನೀಡಿ ಅವನ ಕುತೂಹಲವನ್ನು ಪೂರೈಸಬೇಕು. ಲೈಂಗಿಕ ಶಿಕ್ಷಣ ಭಾವಪ್ರಚೋದನೀಯವಾಗಿರಬಾರದು. ಜ್ಞಾನಪೂರಕವಾಗಿರಬೇಕು. ಈ ಬಯಕೆ ದಮನ (Repress) ವಾಗಬಾರದು, ಶಮನವಾಗಬೇಕು. ಇದೇ ಲೈಂಗಿಕ ಶಿಕ್ಷಣದ ಪರಮಗುರಿ.

ಈ ಸಂಚಿಕೆಯ ಬರಹಗಾರರು

ಡಾ. ಬಿ.ವಿ. ವಸಂತಕುಮಾರ್

ಹಿರಿಯ ಶ್ರೇಣಿ ಕನ್ನಡ ಅಧ್ಯಾಪಕ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ಶಿಕಾರಿಪುರ -೫೭೭ ೪೨೭

ಡಾ. ಎಚ್. ಜಯಕುಮಾರ

ಉಪನ್ಯಾಸಕರು

ವಿದ್ಯಾವರ್ಧಕ ಕಾನೂನು ಕಾಲೇಜು

ಮೈಸೂರು -೫೭೦೦೦೧

ಜಿ. ಶಿವಪ್ಪ

ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ

ಮಾನಸಗಂಗೋತ್ರಿ, ಮೈಸೂರು - ೬

ಕೆ.ಎಂ. ಮಹದೇವಸ್ವಾಮಿ

ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ

ಮಾನಸಗಂಗೋತ್ರಿ, ಮೈಸೂರು - ೬

ಡಾ. ಬಿ.ಕೆ. ರವೀಂದ್ರನಾಥ್

ಭಾಷಾ ವಿಜ್ಞಾನ ಉಪನ್ಯಾಸಕರು

ಕು. ಕ. ಅ. ಸಂ, ಮಾನಸಗಂಗೋತ್ರಿ ಮೈಸೂರು - ೬

ಡಾ.ಎಚ್. ಎಸ್. ನಾಗಭೂಷಣಯ್ಯ

ಎಮಿರಿಟಸ್ ಪ್ರೊಫೆಸರ್

೪ನೆಯ ಮೇನ್, ಜಯಲಕ್ಷ್ಮೀಪುರಂ

ಮೈಸೂರು -೫೭೦೦೧೨

ಡಾ. ಬಿ.ಕೆ. ಸುವರ್ಣಾದೇವಿ

೫೨೭, ೧೫ನೆಯ ಮುಖ್ಯ ರಸ್ತೆ

ಸರಸ್ವತೀಪುರಂ, ಮೈಸೂರು - ೯

ಡಾ.ಎಂ. ರಾಮಚಂದ್ರ
ಪ್ರಾಧ್ಯಾಪಕರು, ತತ್ವಶಾಸ್ತ್ರ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು - ೬

ಡಾ. ಜಿ. ಆರ್. ತಿಪ್ಪೇಸ್ವಾಮಿ
ರೀಡರ್, ಕು.ಕ.ಅ. ಸಂ.
ಮಾನಸಗಂಗೋತ್ರಿ, ಮೈಸೂರು - ೬

ಡಾ.ಡಿ.ಕೆ. ಚಿತ್ತಯ್ಯಪೂಜಾರ್
C/o ಶ್ರೀಮತಿ ನಾಗರತ್ನಮ್ಮ
ನಂ. ೮, ಅಧ್ಯಾಪಕರ ನಿವಾಸಗಳು,
ಜ್ಞಾನಭಾರತಿ, ಬೆಂ.ವಿ.ವಿ. ಬೆಂಗಳೂರು -೫೬೦ ೦೫೬

ಆರ್.ಎಚ್. ಕುಲಕರ್ಣಿ
C/o ಕಲಾ ಇತಿಹಾಸ ತಜ್ಞ
ನಂ. ೧೦೧೪/೧, ೬ನೆಯ ಅಡ್ಡರಸ್ತೆ,
ಆಶ್ರಮ ರಸ್ತೆ, ಹಿನಕಲ್, ಮೈಸೂರು -೫೭೦ ೦೧೭

ಡಾ.ಎಂ.ಪಿ.ರಮೇಶ
ಅಧ್ಯಾಪಕ ತತ್ವಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾನಿಲಯ
ಧಾರವಾಡ - ೫೮೦ ೦೦೩

ಪ್ರೊ. ಪಿ. ನಟರಾಜ್
ನಿವೃತ್ತ ಪ್ರಾಧ್ಯಾಪಕರು
ಮನೋವಿಜ್ಞಾನ ವಿಭಾಗ
೧೩ನೆಯ ಕ್ರಾಸು, ವಿ. ವಿ.ಮೊಹಲ್ಲ
ಮೈಸೂರು - ೨